# ಅಧ್ಯಾಯ-೮

## ಆರ್ಥಿಕ ಪ್ರವೃತ್ತಿಗಳು

ಯಾವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ವಾಣಿಜ್ಯ-ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ, ಉಳಿತಾಯ ಕ್ಷಮತೆ, ಬಂಡವಾಳ ಹೂಡಿಕೆ, ನಗರೀಕರಣ, ಉದ್ಯೋಗ, ಕೂಲಿ (ಮಜೂರಿ), ತಲಾದಾಯ, ಬೆಲೆ(ದರ), ಜನರ ಜೀವನ ಮಟ್ಟ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಕಂಡುಬರುವ ಏರಿಳಿತಗಳನ್ನು ಆಧರಿಸಿದ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ನಿರ್ದೇಶಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪೂರಕವಾದ ಮೂಲಭೂತ ಸೌಕರ್ಯಗಳು, ತಂತ್ರಜ್ಞಾನಗಳೇ ಮುಂತಾದ ಅಂಶಗಳು ಆರ್ಥಿಕ ಪ್ರವೃತ್ತಿಯ ದಿಕ್ಕು-ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ನೆರವಾಗುತ್ತವೆ. ಹೀಗೆ ಸಮಾಜದ ಬದಲಾವಣೆ ಮತ್ತು ಸುಧಾರಣೆಗಳಿಗೆ ಮಾರ್ಗಸೂಚಿಗಳಾಗಬಹುದಾದ ಆರ್ಥಿಕ ಪ್ರವೃತ್ತಿಗಳು ಕೋಲಾರ ಜಿಲ್ಲೆಯು ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ವಹಿಸಿರುವ ಪಾತ್ರವನ್ನು ಇಲ್ಲಿ ಬಿಂಬಿಸಲು ಯತ್ನಿಸಲಾಗಿದೆ.

ಬಹು ಹಿಂದಿನಿಂದಲೂ ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯು ಗೋಲ್ಡ್ (ಚಿನ್ನ), ಸಿಲ್ಕ್ (ರೇಷ್ಮೆ), ಮತ್ತು ಮಿಲ್ಕ್ (ಕ್ಷೀರ)ಗಳಿಂದಾಗಿ ಖ್ಯಾತಿ ಪಡೆದಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮,೨೨೩ಚ.ಕಿ.ಮೀ.ಗಳಾಗಿದ್ದು, ಇದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ. ೪.೨೯ರಷ್ಟಾಗಿದೆ. ಇಲ್ಲಿಯ ಹೆಚ್ಚಿನ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೨೫,೩೬,೦೬೯ (ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೪.೮೦) ಲಕ್ಷ ಜನರಿದ್ದು, ಇವರಲ್ಲಿ ೧೯,೧೦,೫೪೬ ಲಕ್ಷ ಜನರು (ಶೇ.೭೫.೩೩) ಗ್ರಾಮಾಂತರ ಪ್ರದೇಶಗಳಲ್ಲಿಯೂ, ೬,೨೫,೫೨೩ ಲಕ್ಷ ಜನರು (ಶೇ.೨೪.೬೭) ನಗರ ಪ್ರದೇಶಗಳಲ್ಲಿಯೂ ವಾಸಿಸುತ್ತಿದ್ದರು. ಜಿಲ್ಲೆಯ ವಾಡಿಕೆ ಮಳೆಯು ೭೪೪ ಮಿ.ಮೀ. ಆಗಿದ್ದು, ೨೦೦೩ರಲ್ಲಿ ವಾಸ್ತವಿಕ ಮಳೆ ೪೮೧.೨ ಮಿ.ಮಿ.ಗಳಾಗಿತ್ತು. ಅರಣ್ಯ ಪ್ರದೇಶವು ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ.೯.೦ ರಷ್ಟಿದೆ. ಚಿನ್ನವು ಜಿಲ್ಲೆಯ ಅತಿ ಮುಖ್ಯ ಖನಿಜವಾಗಿದ್ದು, ದೇಶದ ಒಟ್ಟು ಉತ್ಪತ್ತಿಯ ಶೇ.೯೫ರಷ್ಟು ಚಿನ್ನವನ್ನು ಕೋಲಾರ ಚಿನ್ನದ ಗಣಿಯಿಂದ ತೆಗೆಯಲಾಗುತ್ತಿತ್ತು. ಅಲ್ಯೂಮಿನಿಯಂ, ಬೆಳ್ಳಿ, ಕೊರಂಡಂ (ಕೂರಂದ), ಗ್ರಾನೈಟ್, ಕಾಗೆಬಂಗಾರ, ಸಿಲಿಮನೈಟ್, ಜೇಡಿಮಣ್ಣು, ಬೆಣಚುಕಲ್ಲು, ಮುಂತಾದ ಇತರೆ ಖನಿಜ ಪದಾರ್ಥಗಳೂ ಲಭ್ಯವಿದ್ದು, ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿವೆ. ಕೋಲಾರ ಜಿಲ್ಲೆಯಲ್ಲಿ ತಯಾರಾಗುತ್ತಿದ್ದ ಕಂಬಳಿಗಳು ಪ್ರಸಿದ್ಧವಾಗಿದ್ದವು. ೧೮೮೮ರಲ್ಲಿ ಆಗಿನ ಮೈಸೂರು ಮಹಾರಾಜರು ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳ ವಸ್ತು ಪ್ರದರ್ಶನ ಏರ್ಪಡಿಸಿದಾಗ ಕೋಲಾರ ಜಿಲ್ಲೆಯಲ್ಲಿ ತಯಾರಾದ ಚೌಕಳಿ ಕಂಬಳಿ ಹಾಗೂ ಕರಿ ಹೊದ್ದಿಗೆ ಕಂಬಳಿಗಳಿಗೆ ಕ್ರಮವಾಗಿ (ಭಜನೆ ಗುಡ್ಡಿಯಪ್ಪ) ಎರಡನೇ ಹಾಗೂ ಮೂರನೇ ಬಹುಮಾನ ಬಂದಿತ್ತು. ಬಹುಮಾನದ ಮೊತ್ತ

ಕ್ರಮವಾಗಿ ರೂ. ೨೫ ಹಾಗೂ ರೂ. ೧೫ ಆಗಿತ್ತು. ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಬಾಗೇಪಲ್ಲಿ ತಾಲೂಕಿನ ಜುಳುಪಾಳ್ಯದ ಬಳೆಗಳು, ಶಿಡ್ಲಘಟ್ಟ ತಾಲೂಕಿನ ತಿಮ್ಮಸಂದ್ರ, ಹೊಸಹಳ್ಳಿಗಳ ಗಾಜಿನಬಳೆಗಳು ಜನಪ್ರಿಯವಾಗಿದ್ದವು. ಬಂಗಾರುಪೇಟೆ ತಾಲೂಕಿನ ದೇಸಿಹಳ್ಳಿಯು ಸೀಮೆಸುಣ್ಣ, ಬಳಪ, ಕಪ್ಪುಹಲಗೆ (ಸ್ಲೇಟ್) ತಯಾರಿಕೆಗೆ ಪ್ರಸಿದ್ಧಿ ಪಡೆದಿದ್ದರೆ, ಚಿಕ್ಕಬಳ್ಳಾಪುರವು ಕಲ್ಲುಸಕ್ಕರೆ ಉತ್ಪಾದನೆಗೆ ಹೆಚ್ಚು ಪ್ರಸಿದ್ಧಿ ಪಡೆದಿತ್ತು. ಉತ್ತಮ ಗುಣಮಟ್ಟದ ಹಾಗೂ ಬೆಳ್ಳಗಿರುವ ಕ್ಲೆಯಿಡ್ ಷುಗರ್ ಟಿಪ್ಪುಸುಲ್ತಾನ ಕಾಲದಲ್ಲಿ ರೂಢಿಗೆ ಬಂದಿತು. ಉತ್ತಮ ಗುಣಮಟ್ಟದ ಕಲ್ಲುಸಕ್ಕರೆ ೧೦ ರೂಪಾಯಿಗೆ ಒಂದು ಮಾಂಡ್ (೨೪ ಪೌಂಡ್) ಹಾಗೂ ಉತ್ತಮವಾದ ಮೃದುವಾದ ಕಲ್ಲುಸಕ್ಕರೆಯು ೨೫ ಸುಲ್ತಾನಿ ಪನಾಮ್‌ಗೆ ಒಂದು ಮಾಂಡ್ ಅಂತೆ ದೊರೆಯುತ್ತಿತ್ತು. ಕಂದು ಬಣ್ಣದ ಹಾಗೂ ಮೃದು ಕಲ್ಲುಸಕ್ಕರೆಯ ಬೆಲೆಗಳ ವ್ಯತ್ಯಾಸ ಒಂದು ಮಾಂಡ್‌ಗೆ ರೂ. ಮೂರರಿಂದ ರೂ. ಐದು ಆಗಿತ್ತು. ಶ್ರೀನಿವಾಸಪುರ ತಾಲೂಕಿನ ಕೆಲವು ಭಾಗಗಳಲ್ಲಿ ಚಮ್ಮಾರಿಕೆ ಹಾಗೂ ಕೈಮಗ್ಗಗಳು ಹೆಚ್ಚು ಪ್ರಸಿದ್ಧವಾಗಿದ್ದವು. ಆದರೆ ಉತ್ತಮ ಮಾರುಕಟ್ಟೆಯ ಕೊರತೆಯಿಂದಾಗಿ ಕೈಮಗ್ಗ ಉದ್ಯಮ ಕ್ಷೀಣಿಸಿತು. ವಿಗ್ರಹಗಳ ಕೆತ್ತನೆಗೆ ಶಿವಾರಪಟ್ಟಣ (ಮಾಲೂರು ತಾ.) ಇಂದಿಗೂ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಶಿಲ್ಪಿಗಳು ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮಾಲೂರಿನ ಇಟ್ಟಿಗೆ ಮತ್ತು ಹೆಂಚುಗಳು ರಾಜ್ಯಾದ್ಯಾಂತ ಪ್ರಸಿದ್ಧಿ ಪಡೆದುಕೊಂಡಿವೆ. ಶಿಡ್ಲಘಟ್ಟ ತಾಲೂಕಿನ ಮೇಲೂರಿನಲ್ಲಿ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಇದೆ. ಇದೇ ತಾಲೂಕಿನ ತಿಲಚಾರ್ಲು ಮತ್ತು ಬೈಗಾನಹಳ್ಳಿಗಳಲ್ಲಿ ಪಿಂಗಾಣಿ ಮಣ್ಣು ಹೇರಳವಾಗಿ ದೊರೆಯುತ್ತದೆ.

ಜಿಲ್ಲೆಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ೨೦ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ೨೭,೭೮೫ ಜನರಿಗೆ ಉದ್ಯೋಗ ಒದಗಿಸಿದ್ದವು. ಹಾಗೆಯೇ ೧೧,೬೮೩ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ೭೫,೩೮೯ ಮಂದಿಗೆ ಉದ್ಯೋಗ ಒದಗಿಸಿದ್ದವು. ಪ್ರಸ್ತುತ ಮುಚ್ಚಲ್ಪಟ್ಟಿರುವ ಬಂಗಾರಪೇಟೆ ತಾಲೂಕಿನ ಕೆ.ಜಿ.ಎಫ್ ನಲ್ಲಿರುವ ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ (ಬಿ.ಜಿ.ಎಂ.ಎಲ್), ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್), ಗೌರಿಬಿದನೂರಿನಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆ (ಈಗ ಖಾಸಗಿ ಮಾಲಿಕತ್ವದ ಸಿರಗುಪ್ಪ ಸಕ್ಕರೆ ಕಾರ್ಖಾನೆ, ಇದೂ ಸಹ ಪ್ರಸ್ತುತ ಮುಚ್ಚಲ್ಪಟ್ಟಿದೆ), ಮುಂತಾದ ಪ್ರಮುಖ ಕೈಗಾರಿಕೆಗಳು ಜಿಲ್ಲೆಯ ಆರ್ಥಿಕ ಪ್ರವೃತ್ತಿಯಲ್ಲಿ ತಿರುವು ನೀಡಿದ ಮಹತ್ವದ ಬೆಳವಣಿಗೆಗಳಾಗಿದ್ದವು. ಇದಕ್ಕೆ ಪೂರಕವಾಗಿ ಕೈಗಾರಿಕೆಗಳಿಗೆ ಜಿಲ್ಲೆಯಲ್ಲಿ ಒತ್ತಾಸೆ ನೀಡುವ ಸಲುವಾಗಿ ಕೆಲವು ಆಯ್ದ ಪ್ರದೇಶಗಳನ್ನು ಕೈಗಾರಿಕಾ ಪ್ರದೇಶಗಳೆಂದು ಘೋಷಿಸುವುದರ ಜೊತೆಗೆ, ಅವುಗಳಿಗೆ ಮೂಲಭೂತ ಸೌಕರ್ಯ, ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡಲು ರಾಜ್ಯ ಸರ್ಕಾರದ ೨೦೦೧-೨೦೦೬ರ ನೂತನ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಗಿದೆ. ನೂತನ ನೀತಿಯನ್ವಯ ೧-೪-೨೦೦೧ರ ನಂತರ ಕೈಗಾರಿಕಾ ಕ್ಷೇತ್ರದಲ್ಲಿ ಹೂಡಿದ ಹೊಸ ಬಂಡವಾಳಕ್ಕೆ ವಲಯವಾರು ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡುವುದಕ್ಕಾಗಿ ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಲಾಗಿದೆ. 'ಎ' ವಲಯಕ್ಕೆ ಸೇರಿದ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಹೊಂದಿದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವದರಿಂದ ಈ ವಲಯದ ಅತಿ ಸಣ್ಣ ಕೈಗಾರಿಕೆಗಳಿಗೆ ಬಂಡವಾಳ ಹೂಡಿಕೆಯ ಸಹಾಯಧನ ಸಿಗುವುದಿಲ್ಲ. 'ಬಿ' ವಲಯಕ್ಕೆ ಸೇರಿದ ಕೈಗಾರಿಕಾ ಪ್ರದೇಶಗಳು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವದರಿಂದ ಈ ವಲಯದ ಅತಿಸಣ್ಣ ಕೈಗಾರಿಕೆಗಳಿಗೆ ಮೂರು ವರ್ಷದವರೆಗೆ ಸ್ಥಿರಾಸ್ತಿ ಮೌಲ್ಯದ ಶೇಕಡ ೧೦ ರಷ್ಟು ಅಥವಾ ಗರಿಷ್ಠ ರೂ. ಐದು ಲಕ್ಷದವರೆಗೆ ಬಂಡವಾಳ ಸಹಾಯಧನ ನೀಡಲಾಗುತ್ತದೆ. ಆದರೆ ಜಿಲ್ಲೆಯಲ್ಲಿ ಎ ಮತ್ತು ಬಿ ವಲಯಕ್ಕೆ ಸೇರುವ ಯಾವುದೇ ಕೈಗಾರಿಕಾ ಪ್ರದೇಶಗಳಿರುವುದಿಲ್ಲ. ಕೋಲಾರ ಜಿಲ್ಲೆಯ ಬಾಗೇಪಲ್ಲಿ ಹಾಗೂ ಶ್ರೀನಿವಾಸಪುರ ತಾಲೂಕುಗಳನ್ನು ಹೊರತುಪಡಿಸಿ, ಉಳಿದ ತಾಲೂಕುಗಳನ್ನು ಒಳಗೊಂಡ ಪ್ರದೇಶಗಳನ್ನು 'ಸಿ' ವಲಯಕ್ಕೆ ಸೇರಿದ ಹಿಂದುಳಿದ ಕೈಗಾರಿಕಾ ಪ್ರದೇಶಗಳೆಂದು ವರ್ಗೀಕರಿಸಲಾಗಿದೆ. ಈ ವಲಯದಲ್ಲಿ ಸ್ಥಾಪಿಸುವ ಅತಿಸಣ್ಣ ಕೈಗಾರಿಕೆಗಳಿಗೆ ಐದು ವರ್ಷಗಳವರೆಗೆ ಸ್ಥಿರಾಸ್ತಿ ಮೌಲ್ಯದ ಶೇಕಡ ೨೦ ರಷ್ಟು ಅಥವಾ ಗರಿಷ್ಠ ಮೊತ್ತ ರೂ. ೧೦ ಲಕ್ಷಗಳವರೆಗೆ ಬಂಡವಾಳ ಸಹಾಯಧನ ನೀಡಲಾಗುತ್ತದೆ. ಕೈಗಾರಿಕಾ ವಿಕಾಸ ಕೇಂದ್ರಗಳಾದ ಬಾಗೇಪಲ್ಲಿ ಹಾಗೂ ಶ್ರೀನಿವಾಸಪುರ ತಾಲೂಕುಗಳು ಮತ್ತು ಕಿರು ವಿಕಾಸ ಕೇಂದ್ರಗಳಾದ ಮಾಲೂರು ಮತ್ತು ಚಿಕ್ಕಬಳ್ಳಾಪುರಗಳು 'ಡಿ' ವಲಯಕ್ಕೆ ಸೇರುತ್ತವೆ. ಈ ವಲಯದಲ್ಲಿ ಸ್ಥಾಪಿಸಲ್ಪಡುವ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಒಂಭತ್ತು ವರ್ಷಗಳವರೆಗೆ ಸ್ಥಿರಾಸ್ತಿ ಮೌಲ್ಯದ ಶೇಕಡಾ ೨೫ ರಷ್ಟು ಅಥವಾ ಗರಿಷ್ಠ ಮೊತ್ತ ರೂ. ೧೨.೫೦ ಲಕ್ಷಗಳವರೆಗೆ ಬಂಡವಾಳ ಸಹಾಯಧನ ನೀಡಲಾಗುತ್ತದೆ.

ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರವಿಲ್ಲದಿದ್ದರೂ, ಒರಿಸ್ಸಾದ ತಲಚೇರ್‌ಯಿಂದ ಕೋಲಾರದವರೆಗಿನ ವಿದ್ಯುತ್ ಮಾರ್ಗದಿಂದಾಗಿ ಉತ್ತಮ ವಿದ್ಯುತ್ ಸೌಲಭ್ಯವಿರುವುದು ಜಿಲ್ಲೆಯ ಅಭಿವೃದ್ಧಿಗೆ ವರದಾನವಾಗಿದೆ.

ಬ್ಯಾಂಕಿಂಗ್, ವಾಣಿಜ್ಯ, ವ್ಯಾಪಾರ ರಂಗಗಳಲ್ಲಿಯೂ ಜಿಲ್ಲೆಯು ಪ್ರಗತಿ ಪಥದಲ್ಲಿದೆ. ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯಕ್ಕೆ ೧೨೧ ವಾಣಿಜ್ಯ ಬ್ಯಾಂಕುಗಳು, ೬೫ ಗ್ರಾಮೀಣ ಬ್ಯಾಂಕುಗಳು, ಎರಡು ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು, ಹಾಗೂ ೧೬ ಇತರೆ ಸಹಕಾರಿ ಬ್ಯಾಂಕುಗಳ ಜೊತೆಗೆ ೧೧ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೂ ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ೪೦೫೬.೧೪ ಲಕ್ಷ ರೂ.ಗಳ ಬೃಹತ್ ಸಾಲವನ್ನು ನೀಡಿ ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಸಹಕರಿಸಿದ್ದವು. ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಂಘ ಹಾಗೂ ಕ್ರೆಡಿಟ್ ಸಹಕಾರ ಸಂಘಗಳಂತಹವು ಗ್ರಾಮೀಣರ ಆರ್ಥಿಕ ಬದುಕಿಗೆ ನವಚೇತನವನ್ನು ನೀಡಿವೆ. ಸಾಂಪ್ರದಾಯಿಕ ವ್ಯಾಪಾರ ಕೇಂದ್ರಗಳಾದ ಸಂತೆ, ರೈತ ಸಂತೆಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎ.ಪಿ.ಎಂ.ಸಿ) ರೈತರಿಗೆ ಉತ್ತಮ ಬೆಲೆ ದೊರಕಿಸುವಲ್ಲಿ ನೆರವಾಗುತ್ತಿವೆ. ಕೋಲಾರದ ಸೋಮೇಶ್ವರ ಸ್ವಾಮಿ ಜಾತ್ರೆ, ವಕ್ಕಲೇರಿಯ ಮಾರ್ಕಂಡೇಯಸ್ವಾಮಿ ಜಾತ್ರೆ, ನಂದಿಯ ಭೋಗನಂದೀಶ್ವರಸ್ವಾಮಿ ಜಾತ್ರೆ, ವಿದುರಾಶ್ವತ್ಥದ ಅಶ್ವತ್ಥನಾರಾಯಣಸ್ವಾಮಿ ಜಾತ್ರೆ, ಚಿಕ್ಕತಿರುಪತಿಯ ವೆಂಕಟರಮಣಸ್ವಾಮಿ ಜಾತ್ರೆ ಮುಂತಾದವು ಇಂದಿಗೂ ದನಗಳ ವ್ಯಾಪಾರಕ್ಕೆ ಹೆಸರುವಾಸಿಯಾಗಿವೆ. ಜಿಲ್ಲೆಯು ಮಾವಿನ ಹಣ್ಣಿನ ಬೆಳೆಯಲ್ಲಿ ಜನಪ್ರಿಯತೆಗಳಿಸಿದ್ದು ಸ್ಥಳೀಯವಾಗಿ ಮಾತ್ರವಲ್ಲದೆ, ಹೆಚ್ಚಿನ ಪಾಲು ಹೊರರಾಜ್ಯಗಳಿಗೆ ರಫ್ತಾಗುತ್ತಿದೆ. ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಉತ್ತಮವಾಗಿದೆ. ಒಟ್ಟು ೧೯೮.೪೪ ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ, ೧೨೨.೪೪ ಕಿ.ಮೀ. ಬ್ರಾಡ್‌ಗೇಜ್, ೭೬ ಕಿ.ಮೀ. ನ್ಯಾರೋಗೇಜ್ ಸೇರಿವೆ. ಒಟ್ಟು ೯೨೬೭ ಕಿ.ಮೀ. ರಸ್ತೆ ಉದ್ದಳತೆಯಲ್ಲಿ ರಾಷ್ಟ್ರೀಯ ಹೆದ್ದಾರಿ– ೧೨೯ ಕಿ.ಮೀ., ರಾಜ್ಯ ಹೆದ್ದಾರಿ ೪೩೩ ಕಿ.ಮೀ. ಹಾಗೂ ಮುಖ್ಯ ಜಿಲ್ಲಾ ರಸ್ತೆಗಳ ಉದ್ದ ೧೫೯೯ ಕಿ.ಮೀ. ಸೇರಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಿವೆ.

ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ಪಾಲಾರ್, ಉತ್ತರ ಪಿನಾಕಿನಿ (ಉತ್ತರ ಪೆನ್ನಾರ್), ದಕ್ಷಿಣ ಪಿನಾಕಿನಿ, ಪಾಪಾಘ್ನಿ, ಚಿತ್ರಾವತಿ, ಕೌಂಡಿನ್ಯ (ನಂಗ್ಲಿ ಹೊಳೆ ಕೌಂಡಿನ್ಯ ನದಿಯ ಉಪನದಿ) ಹಾಗೂ ಕುಮುದ್ವತಿ ನದಿಗಳು ಬೃಹತ್ ನೀರಾವರಿಗೆ ಸಹಕಾರಿಯಾಗಿರದಿದ್ದರೂ, ಕೆರೆ–ಕುಂಟೆಗಳನ್ನು ತುಂಬಿಸಿ, ಅಂತರ್ಜಲ ವೃದ್ಧಿಗಷ್ಟೇ ಸೀಮಿತವಾಗಿವೆ. ವ್ಯವಸಾಯಕ್ಕೆ ಕೆರೆಗಳು ಮುಖ್ಯ ಆಧಾರವಾಗಿವೆ. ಜಿಲ್ಲೆಯಲ್ಲಿ ಸಮರ್ಪಕ ವಿದ್ಯುತ್ ಸೌಕರ್ಯವಿರುವುದರಿಂದ ನೀರಾವರಿ ಪಂಪ್‌ಗಳು ಹೆಚ್ಚು ಸಂಖ್ಯೆಯಲ್ಲಿವೆ. ರಾಗಿ, ಭತ್ತ ಜೋಳ, ಸಜ್ಜೆ ಕಾಳುಗಳು, ನೆಲಗಡಲೆ, ಕಬ್ಬು, ಆಲೂಗಡ್ಡೆ ಈರುಳ್ಳಿ, ತರಕಾರಿ, ರೇಷ್ಮೆ ಹಾಗೂ ಹೊಗೆಸೊಪ್ಪು ಇಲ್ಲಿಯ ಮುಖ್ಯ ಬೆಳೆಗಳಾಗಿದ್ದು, ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿವೆ.

ಜಿಲ್ಲೆಯಲ್ಲಿ ೧೯೦೧ರ ಜನಗಣತಿಯಂತೆ ೧೨ ಪಟ್ಟಣಗಳಿದ್ದು, ಕೋಲಾರದ ಚಿನ್ನದ ಗಣಿ ಪ್ರದೇಶವು ೩೮,೨೦೪ ಜನಸಂಖ್ಯೆಯನ್ನು ಹೊಂದಿದ್ದು ವರ್ಗ–IIIರಲ್ಲಿತ್ತು. ಇದರ ಜನಸಂಖ್ಯೆ ೧೯೨೧ರಲ್ಲಿ ೮೭,೬೮೭ಕ್ಕೆ ಏರಿದ್ದರಿಂದ ವರ್ಗ–IIಕ್ಕೂ, ೧೯೪೧ರಲ್ಲಿ ೧,೩೩,೮೫೯ ಜನಸಂಖ್ಯೆಯನ್ನು ಪಡೆದು ವರ್ಗ–Iಕ್ಕೆ ಏರುವ ಮೂಲಕ ಶೀಘ್ರ ಬೆಳವಣಿಗೆಯನ್ನು ಕಂಡಿತು. ೧೯೬೪ರವರೆಗೆ ಕೆ.ಜಿ.ಎಫ್.ನ ವ್ಯಾಪ್ತಿಗೆ ಸೇರಿದ್ದ ರಾಬರ್ಟ್‌ಸನ್ ಪೇಟೆಯು ೧೯೭೧ರಲ್ಲಿ ೪೨,೭೪೯ ಜನಸಂಖ್ಯೆಯನ್ನು ಹೊಂದಿದ್ದಿತು. ೨೦೦೧ರ ಜನಗಣತಿಯಂತೆ. ಕೆ.ಜಿ.ಎಫ್, ಮಂಚೇನಹಳ್ಳಿ (ಬಂಗಾರಪೇಟೆ ತಾಲೂಕು) ಹಾಗೂ ಬಿ.ಇ.ಎಂ.ಎಲ್ ನಗರ ಪಟ್ಟಣಗಳನ್ನು ರಾಬರ್ಟ್‌ಸನ್ ಪೇಟೆ ನಗರಸಭೆಗೆ ವಿಲೀನಗೊಳಿಸಿದ್ದುದ್ದರಿಂದ ಇದರ ಜನಸಂಖ್ಯೆಯು ೨೦೦೧ರ ಜನಗಣತಿಯಂತೆ ೧,೫೬,೯೬೧ ಆಗಿತ್ತು. ಜಿಲ್ಲೆಯಲ್ಲಿ ನಾಲ್ಕು ನಗರಸಭೆ, ಐದು ಪುರಸಭೆ ಹಾಗೂ ಮೂರು ಪಟ್ಟಣ ಪಂಚಾಯಿತಿಗಳೂ ಸೇರಿದಂತೆ ಒಟ್ಟು ೧೨ ಪಟ್ಟಣಗಳಿದ್ದವು. ಜನಸಂಖ್ಯೆಯ ಏರಿಕೆಯಿಂದಾಗಿ ಜಿಲ್ಲಾ ಕೇಂದ್ರವಾದ ಕೋಲಾರವು ೨೦೦೧ರ ಜನಗಣತಿಯಂತೆ ವರ್ಗ–II ರಿಂದ ವರ್ಗ–I ಕ್ಕೇರಿದ ನಗರವಾಗಿ ೧,೧೩,೯೯೭ ಜನಸಂಖ್ಯೆಯನ್ನು ಹೊಂದಿತ್ತು.

ಜಿಲ್ಲಾ ಆದಾಯವನ್ನು ವೃದ್ಧಿಸುವಲ್ಲಿ ಪ್ರಾಥಮಿಕ ವಲಯ (ಕೃಷಿ)ಕ್ಕೆ ಸರಿಸಾಟಿಯಾಗಿ ದ್ವಿತೀಯ ವಲಯ (ಕೈಗಾರಿಕೆಗಳು) ಹಾಗೂ ತೃತೀಯ ವಲಯ (ಸೇವಾಕ್ಷೇತ್ರ)ಗಳ ಆದಾಯವೂ ತೀವ್ರವಾಗಿ ಹೆಚ್ಚಳಗೊಳ್ಳುತ್ತಿರುವುದು ಮಹತ್ವದ ಬೆಳವಣಿಗೆಯಾಗಿದೆ.

ಹಾಗೆಯೇ ಜಿಲ್ಲಾದಾಯದಲ್ಲಿಯೂ ಹೆಚ್ಚಳ ಕಂಡುಬಂದಿದೆ. ಜಿಲ್ಲೆಯಲ್ಲಿ ೧೯೯೬–೯೭ರಲ್ಲಿದ್ದ ರೂ. ೭,೦೧೭ ತಲಾದಾಯವು ೨೦೦೦–೦೧ರ ವೇಳೆಗೆ ರೂ. ೧೩,೪೧೪ಗಳಿಗೆ ಹೆಚ್ಚಳಗೊಂಡಿದ್ದರೂ ರಾಜ್ಯದಲ್ಲಿ ಜಿಲ್ಲೆಯ ಸ್ಥಾನವು ೨೨ ಆಗಿದೆ.

ಜನರ ಜೀವನಮಟ್ಟವನ್ನು ಸುಧಾರಿಸಲು ಸಮಾಜ ಕಲ್ಯಾಣ ಕಾರ್ಯಕ್ರಮಗಳಾದ ಬಡತನ ನಿವಾರಣೆ, ಕ್ಷಾಮ ಪರಿಹಾರ ಯೋಜನೆ, ಕನಿಷ್ಠ ಅಗತ್ಯ ಕಾರ್ಯಕ್ರಮ, ಸ್ವರ್ಣಜಯಂತಿ ಸ್ವರೋಜ್‌ಗಾರ್ ಯೋಜನೆ, ಜವಾಹರ್ ಗ್ರಾಮಸಮೃದ್ಧಿ ಯೋಜನೆ, ಆಶ್ರಯ ಯೋಜನೆ, ಸ್ತ್ರೀಶಕ್ತಿ ಯೋಜನೆ, ಅಕ್ಷರದಾಸೋಹ, ಜೀವವಿಮೆ ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ೧೯೯೨ ರಿಂದ ೨೦೦೧ರ ಅವಧಿಯಲ್ಲಿ ರಾಜ್ಯ ಸರ್ಕಾರದ ಸೇವೆಗೆ ಜಿಲ್ಲೆಯಿಂದ ೩೫೭ (ರಾಜ್ಯದ ಒಟ್ಟು ಶೇ ೪.೫೨) ಗೆಜೆಟೆಡ್ ಅಧಿಕಾರಿಗಳು, ೧೨೩ (ರಾಜ್ಯದ ಒಟ್ಟು ಶೇ. ೩.೪೩) ನಾನ್ ಗೆಜೆಟೆಡ್ ಅಧಿಕಾರಿಗಳು ನೇಮಕ ಹೊಂದಿದ್ದರು. ಹಾಗೆಯೇ ರಾಜ್ಯ ಸರ್ಕಾರದ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ೮೦೫ ಮಂದಿ ಎ ಮತ್ತು ಬಿ ಸಮೂಹದ ಅಧಿಕಾರಿಗಳಲ್ಲಿ ೨೫೭ 'ಎ' ಸಮೂಹದ ಅಧಿಕಾರಿಗಳು, ೫೪೮ 'ಬಿ' ಸಮೂಹದ ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಸಚಿವಾಲಯದಲ್ಲಿ ೧೨ ಅಧಿಕಾರಿಗಳು ಹಾಗೂ ಮೂವರು ಇಲಾಖಾ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ೧೧ ಕೆ.ಎ.ಎಸ್. (ಸೆಲೆಕ್ಷನ್ ಗ್ರೇಡ್), ೨೯ ಕೆ.ಎ.ಎಸ್. (ಹಿರಿಯ ಮತ್ತು ಕಿರಿಯ ಶ್ರೇಣಿ) ಹಾಗೂ ೧೦ ಕೆ.ಎ.ಎಸ್. (ಬಿ.ಸಮೂಹದ) ಅಧಿಕಾರಿಗಳು ಜಿಲ್ಲೆಯವರಾಗಿದ್ದಾರೆ.

## ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ (೧೯೪೧)

೧೯೪೧ರಲ್ಲಿ ಜರುಗಿದ ದಶವಾರ್ಷಿಕ ಗಣತಿಯ ಸಂದರ್ಭದಲ್ಲಿ ಜಿಲ್ಲೆಯ ದೊಡ್ಡ ಹಸಲ, ಕೆಂಬೋಡಿ ಹಾಗೂ ವಕ್ಕಲೇರಿ (ಕೋಲಾರ ತಾ॥), ಸೊಣ್ಣವಾಡಿ, ಕೊತ್ತಮಂಗಲ, ನಂಗಲಿ ಹಾಗೂ ಅಗರ (ಮುಳಬಾಗಿಲು ತಾ॥), ಕಲ್ಲೂರು, ಯಚನಪಲ್ಲಿ ಹಾಗೂ ಲಕ್ಷ್ಮೀಪುರ (ಶ್ರೀನಿವಾಸಪುರ ತಾ॥), ಕಗತ್ತಿ, ಕೈವಾರ, ಕೋಟಗಲ್ ಹಾಗೂ ಬುರುಡಗುಂಟೆ (ಚಿಂತಾಮಣಿ ತಾ॥), ಅನೂರು, ಬಾಶೆಟ್ಟಿಹಳ್ಳಿ ಹಾಗೂ ವೆಂಕಟಾಪುರ (ಶಿಡ್ಲಘಟ್ಟ ತಾ॥), ಮೊಳಕೆಚೆರುವು ಹಾಗೂ ಪಾತಕೋಟೆ (ಬಾಗೇಪಲ್ಲಿ ತಾ॥), ಪುಲಸಾನಿವಡ್ಡು ಹಾಗೂ ಸೋಮೇನಹಳ್ಳಿ (ಗುಡಿಬಂಡೆ ತಾ॥), ಉದಮಲೋಡು, ಗೌಡಸಂದ್ರ ಹಾಗೂ ಸಬ್ಬನಹಳ್ಳಿ (ಗೌರಿಬಿದನೂರು ತಾ॥), ತಿಪ್ಪೇನಹಳ್ಳಿ, ಕೇತನಹಳ್ಳಿ ಹಾಗೂ ತಿರುನಹಳ್ಳಿ (ಚಿಕ್ಕಬಳ್ಳಾಪುರ ತಾ॥), ಸಂತೆಹಳ್ಳಿ ಹೂಗೇನಹಳ್ಳಿ, ಜಯಮಂಗಲ ಹಾಗೂ ತುರುಣಸಿ (ಮಾಲೂರು ತಾ॥), ಸೂಲಿಬೆಲೆ, ಗನ್ನೇರಹಳ್ಳಿ ಹಾಗೂ ದೊಡ್ಡವಲಗಮಡಿ (ಬಂಗಾರುಪೇಟೆ ತಾ॥)ಗಳನ್ನೊಳಗೊಂಡ ಒಟ್ಟು ೩೪ ಹಳ್ಳಿಗಳಲ್ಲಿ ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಆಯ್ದ ಗ್ರಾಮಗಳಲ್ಲಿದ್ದ ಜನಸಂಖ್ಯೆ, ಕುಟುಂಬಗಳ ಸಂಖ್ಯೆ, ಜನಾಂಗೀಯ ಮಾಹಿತಿ, ಸಾಕ್ಷರತೆ, ಸಾಗುವಳಿ ಭೂಮಿ, ಕೃಷಿ ಉತ್ಪನ್ನ, ಭೂ ಒಡೆತನ, ಖಾಸಗಿ ಹಾಗೂ ಸಾರ್ವಜನಿಕ ಸಂಪತ್ತಿನ ಮೌಲ್ಯ, ಆಸ್ತಿ–ಪಾಸ್ತಿ, ಮನೆ–ಮಾರು, ಸಾಲ–ಸೋಲ, ಜೀವನಮಟ್ಟ, ದುಡಿಯುವ ವರ್ಗಗಳ ಆದಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಆಯಾ ಹಳ್ಳಿಗಳ ಆರ್ಥಿಕ ಸ್ಥಿತಿ–ಗತಿಗಳನ್ನೊಳಗೊಂಡ ಮಾಹಿತಿಯನ್ನು ೧೯೪೩ರಲ್ಲಿ ಪ್ರಕಟಿಸಲಾಯಿತು. ಅದರಂತೆ ಇವುಗಳಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ (೨೨೭೭) ನಂಗಲಿಯಲ್ಲಿದ್ದರೆ, ಅತ್ಯಂತ ಕಡಿಮೆ ಜನಸಂಖ್ಯೆ (೧೨೧) ಮೊಳಕ ಚೆರುವುದಲ್ಲಿತ್ತು. ಅತ್ಯಂತ ಹೆಚ್ಚು ಮನೆಗಳು (೪೪೬) ನಂಗಲಿಯಲ್ಲೂ, ಕಡಿಮೆ ಮನೆಗಳು (೧೯) ಪುಲಸಾನಿವಡ್ಡುನಲ್ಲೂ ಇದ್ದವು. ಕೃಷಿ, ಪಶುಸಂಗೋಪನೆಗಳೇ ಪ್ರಧಾನ ಆರ್ಥಿಕ ಚಟುವಟಿಕೆಗಳಾಗಿದ್ದು, ಅತ್ಯಂತ ಹೆಚ್ಚು ನೀರಾವರಿ ಪ್ರದೇಶ (೬೭೬ ಎಕರೆ) ನಂಗಲಿಯಲ್ಲಿದ್ದರೆ, ಗುಡಿಬಂಡೆ ತಾ॥ನ ಸೋಮೇನಹಳ್ಳಿಯಲ್ಲಿ ಯಾವುದೇ ನೀರಾವರಿ ಸೌಲಭ್ಯವಿರಲಿಲ್ಲವೆಂಬ ಅಂಶ ತಿಳಿದುಬರುತ್ತದೆ. ಈ ಪ್ರದೇಶಗಳಲ್ಲಿ ರಾಗಿ ಪ್ರಮುಖ ಬೆಳೆಯಾಗಿದ್ದು, ಕೈವಾರದ ೪೩೬ ಎಕರೆ ಪ್ರದೇಶದಲ್ಲಿ ರಾಗಿ ಬೆಳೆಯ ಲಾಗುತ್ತಿತ್ತು. ಬಾಗೇಪಲ್ಲಿ ತಾಲೂಕಿನ ಮೊಳಕಚೆರುವು ಹಾಗೂ ಗೌರಿಬಿದನೂರು ತಾಲೂಕಿನ ಸಬ್ಬನಹಳ್ಳಿಯಲ್ಲಿ ತಲಾ ೪೨ ಎಕರೆಯಲ್ಲಿ ರಾಗಿ ಬೆಳೆಯಲಾಗುತ್ತಿತ್ತು. ಭತ್ತ ಹುರುಳಿ, ಕಡಲೆಕಾಯಿ, ಮೆಣಸಿನಕಾಯಿ ಮುಂತಾದವು ಇತರ ಉಲ್ಲೇಖಾರ್ಹ ಬೆಳೆಗಳಾಗಿದ್ದವು. ಆಯಾ ಗ್ರಾಮದ ಖುಷ್ಕಿ, ನೀರಾವರಿ, ತೋಟಪಟ್ಟಿ, ಪಶುಸಂಪತ್ತು, ಮನೆ ಮುಂತಾದವುಗಳ ಮೌಲ್ಯವನ್ನು ಅಂದಾಜಿಸಲಾಗಿದ್ದು, ಅದರಂತೆ ನಂಗಲಿಯು ಅತಿ ಹೆಚ್ಚು ಸಂಪತ್ತನ್ನು (ರೂ.೨,೭೫,೨೨೪) ಹೊಂದಿದ್ದರೆ, ಉದುಮಲೊಡುವಿನ ಆಸ್ತಿಯ ಒಟ್ಟು ಮೌಲ್ಯ ಕೇವಲ ರೂ.೫,೮೮೫

ಆಗಿತ್ತು. ಅತ್ಯಂತ ಹೆಚ್ಚು ಸಾಲಗಾರ ಕುಟುಂಬಗಳು (೨೩೯) ನಂಗಲಿಯಲ್ಲಿದ್ದು, ಅವುಗಳ ಒಟ್ಟು ಸಾಲದ ಮೊತ್ತ ರೂ. ೬೬,೪೦೬ ಆಗಿದ್ದಿತು ಹಾಗೂ ಕುಟುಂಬಗಳ ಸರಾಸರಿ ಸಾಲ ೨೭೭ ರೂಪಾಯಿ ೧೪ ಆಣೆ ಆಗಿತ್ತು. ಅತ್ಯಂತ ಕಡಿಮೆ ಸಾಲಗಾರ ಕುಟುಂಬಗಳು (೧೦) ಉದಮಲೊಡುವಿನಲ್ಲಿದ್ದು, ಇವುಗಳ ಒಟ್ಟು ಸಾಲದ ಮೊತ್ತ ರೂ. ೧,೯೫ ಹಾಗೂ ಕುಟುಂಬಗಳ ಸರಾಸರಿ ಸಾಲ ೧೧೯ ರೂಪಾಯಿ ಎಂಟು ಆಣೆ ಆಗಿತ್ತು. ಈ ಗ್ರಾಮಗಳಲ್ಲಿ ಕೂಲಿಯದರ ಪುರುಷ, ಮಹಿಳೆ ಹಾಗೂ ಬಾಲಕರಿಗೆ ಕ್ರಮವಾಗಿ ನಾಲ್ಕು, ಮೂರು, ಹಾಗೂ ಎರಡು ಆಣೆಗಳಾಗಿತ್ತು. ಮೇಲಿನ ಅಂಕಿ–ಅಂಶಗಳು ಅವರ ಜೀವನಮಟ್ಟವನ್ನು ಅರಿಯಲು ಪೂರಕವಾಗಿವೆ. ಇದೇ ಮಾದರಿಯಲ್ಲಿ ೧೯೬೧ರ ಜನಗಣತಿ ಸಂದರ್ಭದಲ್ಲೂ ಜಿಲ್ಲೆಯ ವಕ್ಕಲೇರಿ ಗ್ರಾಮದಲ್ಲಿ ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು.

## ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ (೧೯೬೧)

ಕೋಲಾರ ತಾಲೂಕಿನಲ್ಲಿರುವ ವಕ್ಕಲೇರಿ ಗ್ರಾಮವು ಕೋಲಾರ–ಮಾಲೂರು ಮಾರ್ಗದಲ್ಲಿದೆ. ೧೯೬೧ರ ಜನಗಣತಿ ಸಂದರ್ಭದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಈ ಗ್ರಾಮದಲ್ಲಿ ನಡೆಸಲಾಯಿತು. ಈ ಸಮೀಕ್ಷೆಯ ಸಂದರ್ಭದಲ್ಲಿ ವಕ್ಕಲೇರಿಯಲ್ಲಿದ್ದ ೩೪೨ ಕುಟುಂಬಗಳಲ್ಲಿ ಒಟ್ಟು ಜನಸಂಖ್ಯೆ ೧೯೦೭ ಆಗಿದ್ದಿತು. ೨೫ ವಿವಿಧ ಜಾತಿಗಳಿಗೆ ಸೇರಿದ ಈ ಕುಟುಂಬಗಳಲ್ಲಿ, ಮುಖ್ಯವಾಗಿ ಒಕ್ಕಲಿಗ (೭೦), ಆದಿ ಕರ್ನಾಟಕ (೬೫), ವಹ್ನಿಕುಲ (ತಿಗಳರು) (೬೦), ಗಾಣಿಗ (೧೭), ಬೇಡ (೧೮) ಮತ್ತು ಬಲಿಜ (೧೦) ಜನಾಂಗದ ಕುಟುಂಬಗಳೂ ಸೇರಿದ್ದವು.

ಈ ಗ್ರಾಮದಲ್ಲಿ ೧೯೦೧ ರಿಂದ ೧೯೬೧ರವರೆಗೆ ಇದ್ದ ಜನಸಂಖ್ಯೆ ಹೀಗಿದೆ. ೧೯೦೧ರಲ್ಲಿ ೧೨೬೨ ಜನಸಂಖ್ಯೆ ಇದ್ದರೆ, ೧೯೧೧ರಲ್ಲಿ ೧೨೦೨, ೧೯೨೧ರಲ್ಲಿ ೧೦೨೮, ೧೯೩೧ರಲ್ಲಿ ೧೨೩೧, ೧೯೪೧ರಲ್ಲಿ ೧೪೮೮, ೧೯೫೧ರಲ್ಲಿ ೧೭೬೬ ಹಾಗೂ ೧೯೬೧ರಲ್ಲಿ ೧೯೦೭ ಜನಸಂಖ್ಯೆ ಇದ್ದಿತು. ೧೯೬೧ರಲ್ಲಿ ಆದಿ ಕರ್ನಾಟಕಕ್ಕೆ ಸೇರಿದ ೩೨೮ ಜನರಿದ್ದರೆ, ಆದಿ ದ್ರಾವಿಡರು ೨೨ ಜನ ಹಾಗೂ ಬೋವಿ ಜನಾಂಗದ ಮೂರು ಜನರಿದ್ದರು.

ವಕ್ಕಲೇರಿಯ ೩೪೨ ಕುಟುಂಬಗಳಲ್ಲಿ ಒಂದೇ ಕೊಠಡಿಯುಳ್ಳ ಮನೆಗಳಲ್ಲಿ ೧೪೨ ಕುಟುಂಬಗಳು ವಾಸವಾಗಿದ್ದರೆ, ಎರಡು ಕೊಠಡಿಗಳನ್ನುಳ್ಳ ಮನೆಗಳಲ್ಲಿ ೧೨೧ ಕುಟುಂಬಗಳು, ಮೂರು ಕೊಠಡಿಗಳನ್ನುಳ್ಳ ಮನೆಗಳಲ್ಲಿ ೪೯ ಕುಟುಂಬಗಳು, ನಾಲ್ಕು ಕೊಠಡಿಗಳನ್ನುಳ್ಳ ಮನೆಗಳಲ್ಲಿ ೧೫ ಕುಟುಂಬಗಳು, ಐದು ಕೊಠಡಿಗಳನ್ನುಳ್ಳ ಒಂಭತ್ತು ಕುಟುಂಬಗಳು ಹಾಗೂ ಐದಕ್ಕಿಂತ ಹೆಚ್ಚು ಕೊಠಡಿಗಳಿರುವ ಆರು ಕುಟುಂಬಗಳು ವಾಸಿಸುತ್ತಿದ್ದರು. ಈ ಗ್ರಾಮದಲ್ಲಿದ್ದ ೩೪೨ ಕುಟುಂಬಗಳಲ್ಲಿ ೨೧೬ ಕುಟುಂಬಗಳ ಮನೆಯ ಗೋಡೆಗಳು ಮಣ್ಣಿನಿಂದ ಕಟ್ಟಲ್ಪಟ್ಟಿದ್ದರೆ, ೧೨೪ ಕುಟುಂಬಗಳ ಮನೆಯ ಗೋಡೆಗಳು ಇಟ್ಟಿಗೆಯಿಂದಲೂ, ಎರಡು ಕುಟುಂಬಗಳ ಮನೆಯ ಗೋಡೆಗಳು ಕಲ್ಲಿನಿಂದ ಕಟ್ಟಲ್ಪಟ್ಟಿದ್ದವು. ಅದೇ ರೀತಿ ೧೩೯ ಕುಟುಂಬಗಳ ಮನೆಗಳ ಛಾವಣಿ ಮಣ್ಣಿನಿಂದ ರಚನೆಯಾಗಿದ್ದರೆ, ೪೭ ಕುಟುಂಬಗಳ ಮನೆಗಳು ಪಕ್ಕ ಛಾವಣಿ, ೨೩ ಕುಟುಂಬಗಳ ಮನೆಗಳು ನಾಡಹೆಂಚಿನಿಂದಲೂ, ೮೨ ಕುಟುಂಬಗಳ ಮನೆಗಳು ಮಂಗಳೂರು ಹೆಂಚಿನಿಂದಲೂ, ಒಂದು ಕುಟುಂಬದ ಮನೆ ಮರದಿಂದಲೂ ಹಾಗೂ ೫೦ ಕುಟುಂಬಗಳ ಮನೆಗಳು ಹುಲ್ಲಿನ ಛಾವಣಿಯಿಂದಲೂ ರಚನೆಗೊಂಡಿದ್ದವು.

ವಕ್ಕಲೇರಿ ಗ್ರಾಮವು ವ್ಯವಸಾಯ ಪ್ರಧಾನ ಗ್ರಾಮವಾಗಿದ್ದು, ಒಟ್ಟು ೧೪೫೩ ಎಕರೆ ೨೭ ಗುಂಟೆ ಭೂ ವಿಸ್ತೀರ್ಣವನ್ನು ಹೊಂದಿತ್ತು. ಅದರಲ್ಲಿ ೮೮೯.೩೩ ಎಕರೆ ವ್ಯವಸಾಯ ಯೋಗ್ಯ ಭೂಮಿಯಾಗಿತ್ತು. ಇದರಲ್ಲಿ ೭೪೮.೩೮ ಎಕರೆ ಒಣಭೂಮಿಯಾಗಿದ್ದು, ೬೭.೧೧ ಎಕರೆ ನೀರಾವರಿ ಜಮೀನಾಗಿತ್ತು. ಉಳಿದ ೭೩.೨೪ ಎಕರೆ ತೋಟಪಟ್ಟಿ (ಭಾಗಾಯ್ತು) ಭೂಮಿಯಾಗಿತ್ತು. ಇದಲ್ಲದೆ ೫೬೨.೩೪ ಎಕರೆ ವ್ಯವಸಾಯ ಯೋಗ್ಯವಲ್ಲದ ಭೂಮಿ ಈ ಗ್ರಾಮದಲ್ಲಿತ್ತು. ಇಲ್ಲಿ ೭೪೮ ಕೆಲಸಗಾರರು ಹಾಗೂ ೧೧೩೯ ಕೆಲಸಗಾರರಲ್ಲದವರು ಇದ್ದರು. ವಕ್ಕಲೇರಿ ಗ್ರಾಮದಲ್ಲಿ ಈ ಅವಧಿಯಲ್ಲಿ ಸಾಂಪ್ರದಾಯಿಕ ಉಪಕರಣಗಳಾದ ಮರದ ನೇಗಿಲು, ಕುಂಟೆ, ಹಲುವೆ, ಕಳೆ ತೆಗೆಯುವ ಯಂತ್ರ, ಗುದ್ದಲಿ, ಪಿಕಾಸಿ ಮುಂತಾದವುಗಳನ್ನು ಬಳಸಲಾಗುತ್ತಿತ್ತು,

ಒಂದು ಎಕರೆ ಜಮೀನಿನಲ್ಲಿ ರಾಗಿ ಹಾಗೂ ಭತ್ತ ಬೆಳೆಯಲು ತಗಲುತ್ತಿದ್ದ ವೆಚ್ಚದ ವಿವರ ಹೀಗಿದೆ: ಒಂದು ಎಕರೆ ಜಮೀನಿನಲ್ಲಿ ರಾಗಿ ಬೆಳೆಯಲು ಉಳುಮೆ (ಮೂರು ಭಾರಿ) ರೂ. ೧೮.೦೦, ಗೊಬ್ಬರಕ್ಕೆ ರೂ. ೬೦.೦೦, ಬಿತ್ತನೆ ಬೀಜಕ್ಕೆ ರೂ. ೫.೦೦, ಕಳೆತೆಗೆಯಲು ರೂ. ೧೦.೦೦, ಕೊಯ್ಯುವಿಕೆಗೆ ರೂ. ೧೫.೦೦ ಹಾಗೂ ಒಕ್ಕಣೆ ಮಾಡಲು ರೂ.೧೦.೦೦ ಹೀಗೆ ಒಟ್ಟು ರೂ.೧೧೮.೦೦ ಗಳು ವೆಚ್ಚವಾಗುತ್ತಿತ್ತು. ಒಂದು ಎಕರೆಯಲ್ಲಿ ನಾಲ್ಕು ಪಲ್ಲ ರಾಗಿ ಬೆಳೆಯಲಾಗುತ್ತಿದ್ದು, ಇಳುವರಿಯ ಒಟ್ಟು ಮೊತ್ತ ರೂ.೫೬೦.೦೦ ಆಗಿದ್ದಿತು. ಭತ್ತಕ್ಕೆ ತಗಲುತ್ತಿದ್ದ ವೆಚ್ಚ, ಗದ್ದೆಯ ಸಿದ್ಧತೆ ಹಾಗೂ ಗೊಬ್ಬರಕ್ಕೆ ರೂ. ೮೦.೦೦, ಉಳುಮೆಗೆ ರೂ.೪೮.೦೦, ಬಿತ್ತನೆಗೆ ರೂ. ೧೦.೦೦, ಕಳೆತೆಗೆಯಲು ರೂ.೧೫.೦೦, ಕೊಯ್ಲು ಹಾಗೂ ಒಕ್ಕಣೆಗೆ ರೂ ೨೫.೦೦, ಹೀಗೆ ಒಟ್ಟು ರೂ.೧೭೮.೦೦ ವೆಚ್ಚವಾಗುತ್ತಿದ್ದು, ಎಕರೆಗೆ ಎಂಟು ಪಲ್ಲ ಭತ್ತ ಬೆಳೆಯಲಾಗುತ್ತಿತ್ತು. ಇಲ್ಲಿ ದೊಡ್ಡಬೈರನೆಲ್ಲು ಹಾಗೂ ಹಾಲುಬ್ಬಲು ಭತ್ತದ ತಳಿಗಳನ್ನು ಬಳಸಲಾಗುತ್ತಿತ್ತು. ಅಲ್ಲದೆ ಈ ಗ್ರಾಮದಲ್ಲಿ ಎಣ್ಣೆ ಗಾಣ, ಕಮ್ಮಾರಿಕೆ, ಮರಗೆಲಸ, ಕುಂಬಾರಿಕೆ, ಹೊಲಿಗೆ ಹಾಗೂ ಕಲ್ಲು ಕುಟಿಗ ಮುಂತಾದ ಇತರೆ ಕೆಲಸಗಳಲ್ಲಿ ಜನರು ತೊಡಗಿದ್ದರು.

## ಆದಾಯ

ವಕ್ಕಲೇರಿಯಲ್ಲಿ ಭೂ ಒಡೆತನ ಹೊಂದಿದ್ದ ೨೭೮ ಕುಟುಂಬಗಳು ಇದ್ದು, ಅವುಗಳ ಸರಾಸರಿ ವಾರ್ಷಿಕ ಆದಾಯ ರೂ. ೧೩೨೭.೦೦ ಆಗಿತ್ತು. ಇವರಲ್ಲಿ ೪೨ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ರೂ. ೩೦೦ ಕ್ಕಿಂತ ಕಡಿಮೆಯಿದ್ದರೆ, ೮೬ ಕುಟುಂಬಗಳು ರೂ. ೩೦೧–೬೦೦, ೪೨ ಕುಟುಂಬಗಳು ರೂ. ೬೦೧–೯೦೦, ೩೨ ಕುಟುಂಬಗಳು ರೂ. ೯೦೧–೧೨೦೦ ಹಾಗೂ ೭೬ ಕುಟುಂಬಗಳು ರೂ. ೧೨೦೧ ಕ್ಕಿಂತ ಅಧಿಕ ಸರಾಸರಿ ವಾರ್ಷಿಕ ಆದಾಯ ಹೊಂದಿದ ಗುಂಪಿಗೆ ಸೇರಿದ್ದವು. ಹಾಗೆಯೇ ಹತ್ತು ಕುಟುಂಬಗಳು ಗೇಣಿ ಆಧಾರಿತ ವ್ಯವಸಾಯವನ್ನು ಅವಲಂಬಿಸಿದ್ದು, ಇವರ ಸರಾಸರಿ ವಾರ್ಷಿಕ ಆದಾಯ ರೂ. ೪೯೪.೦೦ ಆಗಿತ್ತು. ಇವರಲ್ಲಿ ಎರಡು ಕುಟುಂಬಗಳ ವಾರ್ಷಿಕ ಆದಾಯ ರೂ. ೩೦೦.೦೦ ಕ್ಕಿಂತ ಕಡಿಮೆಯಿದ್ದರೆ, ಐದು ಕುಟುಂಬಗಳ ವಾರ್ಷಿಕ ಆದಾಯ ರೂ.೩೦೧–೬೦೦ ಆಗಿದ್ದು, ಉಳಿದ ಮೂರು ಕುಟುಂಬಗಳು ರೂ. ೬೦೧–೯೦೦ ವಾರ್ಷಿಕ ಆದಾಯದ ಗುಂಪಿಗೆ ಸೇರಿದ್ದವು. ೧೯ ಕುಟುಂಬಗಳು ವ್ಯವಸಾಯ ಕಾರ್ಮಿಕರಾಗಿದ್ದು, ಇವರ ಸರಾಸರಿ ವಾರ್ಷಿಕ ಆದಾಯ ರೂ. ೩೧೭ ಆಗಿತ್ತು. ಇವರಲ್ಲಿ ೧೨ ಕುಟುಂಬಗಳು ರೂ.೩೦೦ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿದ್ದರೆ, ಏಳು ಕುಟುಂಬಗಳು ರೂ. ೩೦೧–೬೦೦ ಆದಾಯ ಹೊಂದಿದ ಗುಂಪಿಗೆ ಸೇರಿದ್ದವು. ಎಂಟು ಕುಟುಂಬಗಳು ಗೃಹ ಕೈಗಾರಿಕೆಗಳಲ್ಲಿ ತೊಡಗಿದ್ದು, ಇವರ ಸರಾಸರಿ ವಾರ್ಷಿಕ ಆದಾಯ ರೂ. ೫೯೬.೦೦ ಆಗಿದ್ದಿತು. ಇವರಲ್ಲಿ ಎರಡು ಕುಟುಂಬಗಳು ರೂ. ೩೦೦ ಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿದ್ದರೆ, ಒಂದು ಕುಟುಂಬ ರೂ. ೩೦೧–೬೦೦, ಐದು ಕುಟುಂಬಗಳು ರೂ. ೬೦೧–೯೦೦ ಸರಾಸರಿ ವಾರ್ಷಿಕ ಆದಾಯವನ್ನು ಹೊಂದಿದ ಗುಂಪಿಗೆ ಸೇರಿದ್ದವು. ೨೭ ಇತರೆ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ರೂ. ೯೫೯ ಆಗಿತ್ತು. ಇವರಲ್ಲಿ ಐದು ಕುಟುಂಬಗಳು ರೂ. ೩೦೦ ಕ್ಕಿಂತ ಕಡಿಮೆ, ಹನ್ನೊಂದು ಕುಟುಂಬಗಳು ರೂ. ೩೦೧–೬೦೦, ನಾಲ್ಕು ಕುಟುಂಬಗಳು ರೂ. ೬೦೧–೯೦೦, ನಾಲ್ಕು ಕುಟುಂಬಗಳು ರೂ. ೯೦೧–೧೨೦೦ ಹಾಗೂ ಮೂರು ಕುಟುಂಬಗಳು ೧೨೦೧ ಕ್ಕಿಂತ ಹೆಚ್ಚು ಸರಾಸರಿ ವಾರ್ಷಿಕ ಆದಾಯವನ್ನು ಹೊಂದಿದ ಗುಂಪಿಗೆ ಸೇರಿದ್ದವು. ಒಂಬತ್ತು ಕುಟುಂಬಗಳು ವಾಣಿಜ್ಯ ರಂಗದಲ್ಲೂ, ೧೧ ಕುಟುಂಬಗಳು ಸೇವಾ ಕ್ಷೇತ್ರದ ಹಾಗೂ ಏಳು ಕುಟುಂಬಗಳು ಬಿಲ್ಲು ಕಲೆಕ್ಟರ್ ವೃತ್ತಿಯ ಗುಂಪಿಗೆ ಸೇರಿದ್ದವು.

ಈ ಗ್ರಾಮದ ೩೪೨ ಕುಟುಂಬಗಳ ಪೈಕಿ ೧೯೬ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಸಾಲದ ಒಟ್ಟು ಮೊತ್ತ ರೂ ೧,೬೮,೬೩೬ ಆಗಿದ್ದು, ಈ ಮುಂದಿನಂತೆ ವಿವಿಧ ಆದಾಯದ ಗುಂಪುಗಳಲ್ಲಿ ಹಂಚಿಕೆಯಾಗಿದ್ದವು. ಮಾಸಿಕ ರೂ. ೨೫ ಕ್ಕಿಂತ ಕಡಿಮೆ ಆದಾಯದ ೬೩ ಕುಟುಂಬಗಳಲ್ಲಿ ೧೫ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಒಟ್ಟು ಸಾಲದ ಮೊತ್ತ ರೂ. ೪೫೩೦ ಆಗಿತ್ತು. ಮಾಸಿಕ ರೂ. ೨೬ ರಿಂದ ೫೦ ವರಮಾನ ಹೊಂದಿದ ೧೧೦ ಕುಟುಂಬಗಳ ಪೈಕಿ ೬೪ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಒಟ್ಟು ಸಾಲದ ಮೊತ್ತ ರೂ. ೨೫,೬೭೪ ಆಗಿತ್ತು. ಮಾಸಿಕ ರೂ. ೫೧ ರಿಂದ ೭೫ ವರಮಾನ ಹೊಂದಿದ ೫೪ ಕುಟುಂಬಗಳಲ್ಲಿ ೩೪ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ

ಒಟ್ಟು ಸಾಲದ ಮೊತ್ತ ರೂ. ೧೮,೭೮೪ ಆಗಿತ್ತು. ಮಾಸಿಕ ರೂ. ೭೬ ರಿಂದ ೧೦೦ ವರಮಾನ ಹೊಂದಿದ ೩೬ ಕುಟುಂಬಗಳ ಪೈಕಿ ೨೫ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಒಟ್ಟು ಸಾಲದ ಮೊತ್ತ ರೂ. ೨೧,೯೬ ಆಗಿತ್ತು. ಮಾಸಿಕ ರೂ ೧೦೦ ಗಳಿಗಿಂತ ಹೆಚ್ಚು ವರಮಾನವುಳ್ಳ ೭೯ ಕುಟುಂಬಗಳ ಪೈಕಿ ೫೮ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಒಟ್ಟು ಸಾಲದ ಮೊತ್ತ ರೂ. ೯೮,೪೫೨ ಆಗಿತ್ತು. ಸಾಲದ ಮೊತ್ತವಾದ ರೂ. ೧,೬೮,೬೩೬ ಗಳ ಪೈಕಿ ರೂ. ೪೪,೮೦೦ ಗಳನ್ನು ಸಹಕಾರಿ ಸಂಘಗಳಿಂದ, ಭೂ ಅಡಮಾನ ಬ್ಯಾಂಕುಗಳಿಂದ ಹಾಗೂ ಸರ್ಕಾರದಿಂದಲೂ, ಉಳಿದ ಬೃಹತ್ ಸಾಲದ ಮೊತ್ತವನ್ನು ಸ್ಥಳೀಯ ಸಾಹುಕಾರರು ಹಾಗೂ ಹಣದ ಲೇವಾದೇವಿಗಾರರಿಂದಲೂ ಅವರು ಪಡೆದಿದ್ದರು. ರೂ. ೧೨,೭೪ ಗಳನ್ನು ಬಾವಿ ತೋಡಲು, ರೂ. ೨೮,೬೮೨ ಗಳನ್ನು ಭೂಮಿಯನ್ನು ಕೊಳ್ಳಲು, ರೂ. ೫,೩೦೦ ಗಳನ್ನು ಮನೆಕಟ್ಟಲು/ರಿಪೇರಿ ಮಾಡಲು, ರೂ. ೫೪,೭೭೩ಗಳನ್ನು ಮದುವೆ ಸಮಾರಂಭಗಳಿಗೂ, ರೂ. ೧೭,೬೬೮ ಗಳನ್ನು ಭೂಮಿಯನ್ನು ಅಭಿವೃದ್ಧಿ ಪಡಿಸಲು, ರೂ. ೨,೦೩೩ಗಳನ್ನು ಜಾನುವಾರುಗಳನ್ನು ಕೊಳ್ಳಲು, ರೂ. ೭,೬೫೦ ಗಳನ್ನು ಹಳೆಯ ಸಾಲ ತೀರಿಸಲು, ರೂ. ೧೫೦ ಗಳನ್ನು ವೈದ್ಯಕೀಯ ವೆಚ್ಚಕ್ಕಾಗಿಯೂ, ರೂ. ೨೫,೮೮೮ ಗಳನ್ನು ಸಾಮಾನ್ಯ ಬಳಕೆಗಾಗಿ, ರೂ. ೨,೩೩೮ ಗಳನ್ನು ವ್ಯವಸಾಯಕ್ಕಾಗಿ, ರೂ. ೧೫೦ ರೂ. ಗಳನ್ನು ಯಂತ್ರೋಪಕರಣಗಳನ್ನು ಕೊಳ್ಳಲು, ರೂ ೫,೩೩೦ ಗಳನ್ನು ವ್ಯಾಪಾರಕ್ಕಾಗಿ, ರೂ. ೪೫೦ಗಳನ್ನು ಎತ್ತಿನಗಾಡಿ ಕೊಳ್ಳಲು ಹಾಗೂ ರೂ. ೫,೫೦೦ ಗಳನ್ನು ನೀರಾವರಿಗಾಗಿ, ಹೀಗೆ ಒಟ್ಟು ರೂ. ೧,೬೮,೬೩೬ ಗಳನ್ನು ಸಾಲವನ್ನಾಗಿ ಪಡೆಯಲಾಗಿತ್ತು.

## ನಗರೀಕರಣ

ಕೋಲಾರವು ಜಿಲ್ಲಾ ಕೇಂದ್ರವಾಗಿದ್ದು, ರಾಜಧಾನಿ ಬೆಂಗಳೂರಿನಿಂದ ಸುಮಾರು ೭೦ ಕಿ.ಮೀ. ದೂರದಲ್ಲಿ ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಜಿಲ್ಲೆಯು ಹನ್ನೊಂದು ತಾಲೂಕುಗಳಿಂದ ಕೂಡಿದ್ದು, ವಿಸ್ತಾರವಾದ ಜಿಲ್ಲೆ ಎನಿಸಿದ್ದರೂ, ಇಲ್ಲಿ ಪಟ್ಟಣಗಳ ಬೆಳವಣಿಗೆ ಕಡಿಮೆ ಎಂದೇ ಹೇಳಬೇಕು. ೧೯೦೧ರಲ್ಲಿ ಕೋಲಾರದಲ್ಲಿ ೧೨ ಪಟ್ಟಣಗಳಿದ್ದು, ೧೯೪೧ರ ವರೆಗೂ ಅವುಗಳ ಸಂಖ್ಯೆಯಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ೧೯೦೧ರಿಂದ ೧೯೪೧ರವರೆಗಿದ್ದ ಪಟ್ಟಣಗಳು ಹಾಗೂ ಅವುಗಳ (೧೯೪೧ರ ಜನಗಣತಿಯಂತೆ) ಜನಸಂಖ್ಯೆಯನ್ನು ಆವರಣದಲ್ಲಿ ನೀಡಿದೆ. ಬಾಗೇಪಲ್ಲಿ (೨,೧೬೨), ಬಂಗಾರಪೇಟೆ (೭,೫೧೫), ಚಿಕ್ಕಬಳ್ಳಾಪುರ (೧೪,೯೮೯), ಚಿಂತಾಮಣಿ (೯,೨೯೨), ಗೌರಿಬಿದನೂರು (೫,೧೬೨), ಗುಡಿಬಂಡೆ (೨,೯೧೪), ಕೋಲಾರ (೧೯,೦೦೬), ಕೋಲಾರದ ಚಿನ್ನದ ಗಣಿಪ್ರದೇಶ (೧,೩೩,೮೫೯), ಮಾಲೂರು (೫೧೮೫), ಮುಳಬಾಗಿಲು (೬,೭೮೫), ಶಿಡ್ಲಘಟ್ಟ (೭,೨೬೩), ಶ್ರೀನಿವಾಸಪುರ (೪,೪೧೨). ನಂತರ ೧೯೫೧ರಲ್ಲಿ ಮಂಚೇನಹಳ್ಳಿಯು ಹೊಸ ಪಟ್ಟಣವಾಗಿ ಸೇರ್ಪಡೆಗೊಂಡ ಕಾರಣ ಆ ಅವಧಿಯಲ್ಲಿ ಪಟ್ಟಣಗಳ ಸಂಖ್ಯೆ ೧೩ಕ್ಕೆ ಏರಿತು. ೧೯೬೧ರಲ್ಲೂ ಸಹ ಪಟ್ಟಣಗಳ ಸಂಖ್ಯೆ ೧೩ ಆಗಿತ್ತು. ೧೯೭೧ರಲ್ಲಿ ರಾಬರ್ಟ್‌ಸನ್‌ಪೇಟೆ ಪಟ್ಟಣವಾಗಿ ಸೇರ್ಪಡೆಗೊಂಡ ಕಾರಣ ಕೋಲಾರ ಜಿಲ್ಲೆಯಲ್ಲಿ ಪಟ್ಟಣಗಳ ಸಂಖ್ಯೆ ೧೩ ರಿಂದ ೧೪ಕ್ಕೆ ಏರಿತು. ೧೯೮೧ರಲ್ಲಿ ಬಿ.ಇ.ಎಂ.ಎಲ್ ನಗರ ಪಟ್ಟಣವಾಗಿ ಸೇರ್ಪಡೆಗೊಂಡ ಕಾರಣ ಪಟ್ಟಣಗಳ ಸಂಖ್ಯೆ ೧೫ಕ್ಕೆ ಏರಿಕೊಂಡಿರುವುದು ಗಮನಾರ್ಹವಾಗಿದೆ. ಈ ಸಂಖ್ಯೆ ೧೯೯೧ರಲ್ಲೂ ಮುಂದುವರಿದಿತ್ತು, ಆದರೆ ೨೦೦೧ರಲ್ಲಿ ಪಟ್ಟಣಗಳ ಸಂಖ್ಯೆ ೧೨ಕ್ಕೆ ಇಳಿಮುಖವಾಯಿತು. ಕಾರಣ ಕೋಲಾರ ಗೋಲ್ಡ್‌ಫೀಲ್ಡ್, ಬಿ.ಇ.ಎಂ.ಎಲ್.ನಗರ ಹಾಗೂ ಮಂಚೇನಹಳ್ಳಿಯನ್ನು ರಾಬರ್ಟ್‌ಸನ್ ಪೇಟೆಯಲ್ಲಿ ವಿಲೀನಗೊಳಿಸಲಾಯಿತು. ೨೦೦೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ೬,೨೪,೬೩೫ ಲಕ್ಷ ಜನರು (ಶೇ. ೨೪.೭೫ ರಷ್ಟು) ನಗರ ಹಾಗೂ ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವುದು ಸ್ಪಷ್ಟವಾಗಿದೆ. ಇದು ಜಿಲ್ಲೆಯ ಜನರ ಆರ್ಥಿಕ ಸ್ಥಾನಮಾನ ಹಾಗೂ ಪ್ರಗತಿಯ ಸಂಕೇತವಾಗಿದೆ. ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ದರವನ್ನು ಕೋಷ್ಟಕ ೮.೧ರಲ್ಲಿ ಹಾಗೂ ಪಟ್ಟಣದ ಕೆಲಸಗಾರರ ಮಾಹಿತಿಯನ್ನು ಕೋಷ್ಟಕ ೮.೨ರಲ್ಲಿ ನೀಡಿದೆ.

## ಜಿಲ್ಲಾದಾಯ

ಜಿಲ್ಲಾ ಆದಾಯವೆಂದು ಸಾಮಾನ್ಯವಾಗಿ ಕರೆಯಲಾಗುವ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು, ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮುಖ್ಯ ಸೂಚಿಯಾಗಿದೆ. ಆಯಾ ವರ್ಷದಲ್ಲಿ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ

### ಕೋಷ್ಟಕ ೮.೧ ೧೯೦೧ ರಿಂದ ೨೦೦೧ರ ವರೆಗಿನ ಜಿಲ್ಲೆಯ ಪಟ್ಟಣಗಳ ಜನಸಂಖ್ಯಾ ಬೆಳವಣಿಗೆಯ ದರ.

| ತಾಲೂಕುಗಳ ಹೆಸರು | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|---|---|---|---|---|---|---|
| ಬಾಗೇಪಲ್ಲಿ(ಪಟ್ಟಣ ಪಂಚಾಯ್ತಿ) | ೧೭೮೯ | ೧೯೬೨ | ೧೭೧೬ | ೨೨೪೮ | ೨೧೬೨ | ೨೯೧೪ | ೩೫೧೯ | ೫೩೦೦ | ೭೯೨೩ | ೧೨೩೩೬ | ೨೦೧೯೯ |
| | | (೯.೬೭) | (–೧೨.೫೪) | (೨೯.೮೪) | (–೨.೯೬) | (೩೪.೭೮) | (೨೦.೭೬) | (೫೩.೪೫) | (೪೯.೭೨) | (೫೫.೭೦) | (೬೩.೧೦) |
| ಬಂಗಾರುಪೇಟೆ (ಟಿ.ಎಂ.ಸಿ) | ೨೮೯೩ | ೨೯೮೮ | ೫೫೯೩ | ೬೬೬೮ | ೭೫೧೫ | ೧೦೨೨೩ | ೧೧೩೬೦ | ೧೪೭೬೫ | ೨೨೫೭೦ | ೨೯೧೨೨ | ೩೮೭೦೩ |
| | | (೦.೫೨) | (೧೦೨.೬೫) | (೧೩.೧೫) | (೧೨.೭೦) | (೩೬.೦೩) | (೧೧.೧೨) | (೨೯.೯೭) | (೫೨.೮೬) | (೨೯.೦೩) | (೩೨.೯೩) |
| ಚಿಕ್ಕಬಳ್ಳಾಪುರ (ಸಿಎಂಸಿ) | ೫೫೮೧ | ೭೬೬೧ | ೧೦೫೩೧ | ೧೧೫೮೮ | ೧೫೯೮೯ | ೨೦೧೯೯ | ೨೩೦೫೫ | ೨೯೨೨೭ | ೪೦೦೯೬ | ೪೭೨೨೧ | ೫೫೯೬೮ |
| | | (೩೮.೭೬) | (೩೬.೧೬) | (೧೦.೩೨) | (೩೦.೨೫) | (೩೪.೮೯) | (೧೩.೮೮) | (೨೬.೯೪) | (೩೭.೧೯) | (೧೭.೭೭) | (೧೬.೪೧) |
| ಚಿಂತಾಮಣಿ (ಸಿಎಂಸಿ) | ೩೫೩೦ | ೨೫೭೦ | ೬೧೬೧ | ೪೯೮೫ | ೯೨೯೨ | ೧೫೪೧೧ | ೧೯೬೪೪ | ೨೬೮೪ | ೩೯೨೦೮ | ೫೦೩೯೭ | ೬೫೫೯೩ |
| | | (೫.೭೬) | (೧೩೯.೭೩) | (–೧೯.೦೯) | (೮೬.೪೦) | (೫೫.೦೯) | (೩೬.೩೧) | (೩೫೮೪) | (೪೬.೯೩) | (೨೮.೫೫) | (೨೯.೯೫) |
| ಗೌರಿಬಿದನೂರು (ಟಿಎಂಸಿ) | ೩೫೪೧ | ೩೬೧೭ | ೧೫೪೨ | ೪೩೦೬ | ೫೧೬೨ | ೬೭೭೯ | ೮೫೫೯ | ೧೨೮೭೬ | ೧೮೭೩೮ | ೨೫೫೭೭ | ೩೦೫೩೭ |
| | | (೭.೨೧) | (–೨೯.೬೧) | (೧೫೦.೦೫) | (೧೨.೦೭) | (೩೧.೧೩) | (೨೬.೪೪) | (೪೯.೮೫) | (೪೬.೦೯) | (೩೬.೫೦) | (೧೯.೩೯) |
| ಗುಡಿಬಂಡೆ (ಪಟ್ಟಣ ಪಂಚಾಯ್ತಿ) | ೨೩೮೪ | ೨೩೯೨ | ೨೫೫೦ | ೨೮೦೩ | ೨೯೧೪ | ೩೬೪೫ | ೪೪೮೮ | ೫೦೮೫ | ೬೪೧೯ | ೭೨೬೩ | ೮೦೦೭ |
| | | (೦.೩೪) | (೨.೪೨) | (೧೪.೪೧) | (೩.೯೬) | (೨೫.೦೯) | (೨೨.೮೫) | (೧೩.೫೬) | (೨೬.೨೩) | (೧೭.೮೨) | (೧೦.೨೫) |
| ಕೋಲಾರ (ಸಿಎಂಸಿ) | ೧೨೨೧೦ | ೮೧೯೩ | ೧೫೩೬೮ | ೧೬೧೬೧ | ೧೯೦೦೭ | ೨೭೧೬೬ | ೩೨೫೫೭ | ೪೩೪೫೮ | ೬೫೫೩೪ | ೮೩೨೮೭ | ೧೧೩೯೦೭ |
| | | (–೩೨.೯೦) | (೬೩.೧೬) | (೨೦.೮೯) | (೧೭.೬೦) | (೪೨.೯೯) | (೧೯.೯೧) | (೩೩.೨೪) | (೫೧.೬೩) | (೨೬.೫೧) | (೩೬.೭೭) |
| ಕೋಲಾರ ಚಿನ್ನದ ಗಣಿ ಪ್ರದೇಶ (ಯು.ಎ) | ೩೮೮೨೪ | ೪೮೬೩೫ | ೮೬೮೬೮ | ೮೫೧೮೩ | ೧೩೩೮೫೯ | ೧೫೯೧೮೪ | ೧೪೬೮೧೧ | ೧೬೭೮೬೧ | ೧೪೪೩೮೫ | ೧೫೬೭೭೩ | – |
| | | (೨೭.೩೦) | (೮೦.೨೯) | (–೨.೯೪) | (೫೭.೨೯) | (೧೮.೮೪) | (–೭.೭೧) | (೧೯.೦೪) | (೨೧.೪೭) | (೮.೫೬) | – |
| ರಾಬರ್ಟ್‌ಸನ್‌ಪೇಟೆ (ಸಿಎಂಸಿ) | – | – | – | – | – | – | – | ೪೨೭೮೯ | ೬೪೧೯೯ | ೬೮೫೩೦ | ೧೩೭೦೮೪* |
| | – | – | – | – | – | – | – | – | (೪೯.೯೨) | (೧೧.೬೭) | – |
| ಕೋಲಾರ ಚಿನ್ನದ ಗಣಿ ಪ್ರದೇಶ (ಎಸ್.ಬಿ.) | – | – | – | – | – | – | – | ೭೬೧೧೨ | ೭೭೬೭೯ | ೭೨೪೮೫ | – |
| | – | – | – | – | – | – | – | (–೪೮೧೬) | (೨.೦೬) | (–೬.೬೯) | – |
| ಬಿ.ಇ.ಎಂ.ಎಲ್. ನಗರ | – | – | – | – | – | – | – | – | ೫೬೦೭ | ೧೬೮೦೧ | – |
| | – | – | – | – | – | | – | | – | (೧೯೯.೯೧) | – |
| ಮಂಚೇನಹಳ್ಳಿ (ಎಂ.ಪಿ.) | – | – | – | – | – | ೩೫೩೭ | ೪೩೩೭ | ೪೮೬೩ | ೫೦೮೮ | ೬೩೫೪ | – |
| | – | – | – | – | – | – | (೨೨.೬೫) | (೧೧.೮೭) | (೨೯.೯೧) | (೯.೭೬) | – |
| ಮಾಲೂರು (ಟಿ.ಎಂ.ಸಿ.) | ೩೬೩೨ | ೪೬೧೨ | ೩೭೭೮ | ೪೭೭೦ | ೫೧೮೫ | ೬೯೩೭ | ೮೫೪೯ | ೧೦೭೯೨ | ೧೫೦೯೩ | ೨೧೦೩೭ | ೨೮೧೮೫ |
| | | (೧೯.೫೭) | (–೧೦.೨೮) | (೨೬.೨೨) | (೮.೭೦) | (೩೩.೭೯) | (೯.೪೦) | (೩೬.೩೪) | (೫೫.೮೪) | (೩೯.೫೮) | (೩೩.೨೨) |

| ತಾಲೂಕುಗಳ ಹೆಸರು | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|---|---|---|---|---|---|---|
| ಮುಳಬಾಗಿಲು (ಟಿ.ಎಂ.ಸಿ.) | ೬೫೬೭ | ೨೬೭೭ (−೫೯.೨೦) | ೫೬೭೧ (೧೧೧.೮೪) | ೬೧೩೧ (೮.೧೧) | ೬೭೮೫ (೧೦.೬೭) | ೯೦೨೫ (೩೩.೦೧) | ೧೧೯೭೭ (೩೨.೭೦) | ೧೬೪೪೪ (೩೭.೩೦) | ೨೬೭೬೭ (೬೨.೭೮) | ೩೫೫೧೯ (೩೨.೭೦) | ೪೪೦೩೩ (೨೩.೯೭) |
| ಶಿಡ್ಲಘಟ್ಟ (ಟಿ.ಎಂ.ಸಿ.) | ೭೬೩೬ | ೬೫೧೭ (−೧೪.೭೭) | ೩೬೯೭ (−೪೩.೨೭) | ೬೩೬೮ (೭೨.೨೫) | ೭೨೬೩ (೧೪.೦೫) | ೯೨೦೫ (೨೬.೭೪) | ೧೨೫೬೪ (೩೬.೪೯) | ೧೬೪೧೩ (೩೦.೬೪) | ೨೨೪೯೦ (೩೭.೦೩) | ೨೫೧೭೭ (೧೧.೯೫) | ೪೧೦೯೮ (೬೩.೨೪) |
| ಶ್ರೀನಿವಾಸಪುರ ಪಟ್ಟಣ ಪಂಚಾಯ್ತಿ | ೩೧೫೮ | ೩೪೩೦ (೮.೬೧) | ೩೧೧೯ (−೯.೦೭) | ೩೮೧೨ (೨೨.೨೨) | ೪೪೧೨ (೧೫.೭೪) | ೫೯೭೮ (೩೫.೪೯) | ೬೮೧೨ (೧೩.೯೫) | ೮೭೩೭ (೨೮.೨೬) | ೧೨೪೩೩ (೪೨.೩೦) | ೧೬೫೫೦ (೩೩.೧೧) | ೨೨೯೫೫ (೩೮.೭೩) |
| ಪಟ್ಟಣಗಳ ಸಂಖ್ಯೆ | ೧೨ | ೧೨ | ೧೨ | ೧೨ | ೧೨ | ೧೩ | ೧೩ | ೧೪ | ೧೫ | ೧೫ | ೧೨ |

* ೧೯೯೧ರಲ್ಲಿದ್ದ ಮಂಚೇನಹಳ್ಳಿ (ಎಂ.ಪಿ.), ಬಿ.ಇ.ಎಂ.ಎಲ್.ನಗರ ಹಾಗೂ ಕೆ.ಜಿ.ಎಫ್. ಪಟ್ಟಣಗಳನ್ನು ೨೦೦೧ರ ಜನಗಣತಿಯಲ್ಲಿ ರಾಬರ್ಟ್‌ಸನ್‌ಪೇಟೆ ಸಿ.ಎಂ.ಸಿ.ಯಲ್ಲಿ ವಿಲೀನಗೊಳಿಸಲಾಗಿದ್ದು, ೨೦೦೧ರಲ್ಲಿ ಜಿಲ್ಲೆಯಲ್ಲಿ ಒಟ್ಟು ೧೨ ಪಟ್ಟಣಗಳಿವೆ.

## ಜನಸಂಖ್ಯೆಯ ಆಧಾರದ ಮೇಲೆ ಪಟ್ಟಣಗಳ ವರ್ಗೀಕರಣ

| ೧೯೯೧ ಮತ್ತು ಅದಕ್ಕೆ ಮೊದಲು ಇದ್ದ ಸ್ಥಿತಿ | | ೨೦೦೧ ರಲ್ಲಿದ್ದ ಸ್ಥಿತಿ | | |
|---|---|---|---|---|
| ವರ್ಗ | ಜನಸಂಖ್ಯೆ | ವರ್ಗ | | ಜನಸಂಖ್ಯೆ |
| ವರ್ಗ–I | ೧,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು | ವರ್ಗ–I | ಅ) ಎಂ. ೭ | ೫೦,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು |
| | | | ಆ) ಎಂ. ೬ | ೨೦,೦೦,೦೦೦ ರಿಂದ ೪೯,೯೯,೯೯೯ |
| | | | ಇ) ಎಂ. ೫ | ೧೦,೦೦,೦೦೦ ರಿಂದ ೧೯,೯೯,೯೯೯ |
| | | | ಈ) ಎಂ. ೪ | ೫,೦೦,೦೦೦ ರಿಂದ ೯,೯೯,೯೯೯ |
| | | | ಉ) ಎಂ. ೩ | ೩,೦೦,೦೦೦ ರಿಂದ ೪,೯೯,೯೯೯ |
| | | | ಊ) ಎಂ. ೨ | ೨,೦೦,೦೦೦ ರಿಂದ ೨,೯೯,೯೯೯ |
| | | | ಋ) ಎಂ. ೧ | ೧,೦೦,೦೦೦ ರಿಂದ ೧,೯೯,೯೯೯ |
| ವರ್ಗ–II | ೫೦,೦೦೦ – ೯೯,೯೯೯ | ವರ್ಗ–II | | ೫೦,೦೦೦ ರಿಂದ ೯೯,೯೯೯ |
| ವರ್ಗ–III | ೨೦,೦೦೦ – ೪೯,೯೯೯ | ವರ್ಗ–III | | ೨೦,೦೦೦ ರಿಂದ ೪೯,೯೯೯ |
| ವರ್ಗ–IV | ೧೦,೦೦೦– ೧೯,೯೯೯ | ವರ್ಗ–IV | | ೧೦,೦೦೦ ರಿಂದ ೧೯,೯೯೯ |
| ವರ್ಗ–V | ೫,೦೦೦ – ೯,೯೯೯ | ವರ್ಗ–V | | ೫,೦೦೦ ರಿಂದ ೯,೯೯೯ |
| ವರ್ಗ–VI | ೫,೦೦೦ ಕ್ಕಿಂತ ಕಡಿಮೆ | ವರ್ಗ–VI | | ೫,೦೦೦ ಕ್ಕಿಂತ ಕಡಿಮೆ |

**ಕೋಷ್ಟಕ ೮.೨ ೧೯೯೧ ರ ಜನಗಣತಿಯಂತೆ ಪಟ್ಟಣಗಳಲ್ಲಿನ ಕೆಲಸಗಾರರು.**

| ತಾಲೂಕುಗಳು | ಮುಖ್ಯ ಕೆಲಸ ಗಾರರು | ವ್ಯವಸಾಯ ಗಾರರು | ವ್ಯವಸಾಯ ಕಾರ್ಮಿಕರು | ಜಾನುವಾರು ಅರಣ್ಯ ಮೀನುಗಾರಿಕೆ, ಬೇಟೆ ತೋಟಗಾರಿಕೆ | ಗಣಿಗಾರಿಕೆ | ತಯಾರಿಕೆ ಗೃಹ ಕೈಗಾರಿಕೆ | ತಯಾರಿಕೆ ಗೃಹ ಕೈಗಾರಿಕೆ ಬಿಟ್ಟು | ನಿರ್ಮಾಣ | ವ್ಯಾಪಾರ ಮತ್ತು ವಾಣಿಜ್ಯ | ಸಾರಿಗೆ, ಸಂಪರ್ಕ ಹಾಗೂ ಸಂಗ್ರಹ | ಇತರೆ ಸೇವೆಗಳು | ಸೀಮಾಂತ ಕೆಲಸಗಾರರು | ಅರೆ ಕೆಲಸಗಾರರು |
|---|---|---|---|---|---|---|---|---|---|---|---|---|---|
| | I-IX | I | II | III | IV | Vಎ | Vಬಿ | VI | VII | VIII | IX | | |
| ಬಾಗೇಪಲ್ಲಿ | ೩,೭೨೨ | ೫೮೫ | ೪೫೧ | ೬೭ | ೮ | ೫ | ೩೫ | ೩೪ | ೬೮೫ | ೩೬ | ೧೦೪ | ೩ | ೮೫೧ |
| ಬಂಗಾರಪೇಟೆ | ೭,೭೨೩ | ೩೦ | ೮೫ | ೭೭ | ೧೦ | ೬೫ | ೧೭೬ | ೪೪ | ೩೪೩ | ೭೦ | ೧೮೩ | ೧೪ | ೩೧೨೫ |
| ಚಿಕ್ಕಬಳ್ಳಾಪುರ | ೧೪,೬೩೩ | ೧,೨೩೧ | ೧,೬೧೭ | ೩೮೧ | ೨ | ೪೪ | ೨೦೪ | ೮೯ | ೩,೭೦೪ | ೧೪೦ | ೩೪೧ | ೧೮ | ೩,೪೫೦ |
| ಚಿಂತಾಮಣಿ | ೧೫೩೮ | ೮೮ | ೧,೫೪೮ | ೩೭ | ೩೮ | ೬೭ | ೩೫೦ | ೮೩ | ೪೫೯೫ | ೧೪೮೨ | ೨೭೦ | ೪೫ | ೩೪೫೮೪ |
| ಗೌರಿಬಿದನೂರು | ೭೬೮೬ | ೮೩ | ೭೪೮ | ೧೨೨ | ೮ | ೬೩ | ೬೯ | ೪೦೧ | ೧೯೦೮ | ೬೦೦ | ೧೯೫ | ೭ | ೧,೭೮೧೫ |
| ಗುಡಿಬಂಡೆ | ೨೫೮೧ | ೭೪ | ೭೫ | ೨೨ | ೧೦ | ೬೬ | ೧೦೫ | ೪೦ | ೫೦ | ೬೨ | ೪೧೨ | ೧೦ | ೫೦೮೨ |
| ಕೋಲಾರ | ೨೪,೯೪೪ | ೬೪ | ೧,೫೯೩ | ೫೮೦ | ೨೨ | ೮೭ | ೫,೯೭೨ | ೬೭ | ೫,೫೯೨ | ೨,೪೮೯ | ೫,೬೬೯ | ೩೯ | ೫೮,೪೫೪ |
| ಕೋಲಾರ ಚಿನ್ನದ ಗಣಿ ಪ್ರದೇಶ | | | | | | | | | | | | | |
| ೧. ರಾಬರ್ಟ್‌ಸನ್ ಪೇಟೆ | ೧೬,೫೧೮ | ೩೦೭ | ೨೨೨ | ೫ | ೧೩೯ | ೧೪೮ | ೪,೪೮೩ | ೮೧ | ೪,೫೧೪ | ೧,೦೯೦ | ೩,೬೮೫ | ೧೦೭ | ೫,೧೬೮೫ |
| ೨. ಮಂಚೇನಹಳ್ಳಿ | ೨,೪೭೯ | ೫೮೬ | ೮೧ | ೫ | ೮ | ೬ | ೧೯ | ೫ | ೪೮ | ೫೦ | ೩೭ | ೧೬೩ | ೩೬೨ |
| ೩. ಬಿ.ಇ.ಎಂ.ಎಲ್ ನಗರ | ೪,೭೪೭ | ೩೬೪ | ೮ | ೮ | ೮ | ೫೦ | ೩೭೮೭ | ೩೧ | ೧೦೩ | ೮ | ೪೯ | ೧೯ | ೧೧೦೫೫ |
| ೪. ಕೋಲಾರ ಚಿನ್ನದ ಗಣಿ ಪ್ರದೇಶ (ಎಸ್.ಬಿ.) | ೧೮೯೭ | ೫ | ೦ | ೫ | ೬೮೯ | ೫೩ | ೩೬೨ | ೫೯ | ೧೧ | ೪೯ | ೧೯೦೮ | ೮ | ೫೮,೫೧೮ |
| ಮಾಲೂರು | ೬,೪೪೫ | ೫೮೨ | ೧,೪೫೭ | ೧೧೪ | ೧೨ | ೩೧೬ | ೧,೪೩೬ | ೩೨ | ೧,೫೬೮ | ೩೮೪ | ೧,೩೦೪ | ೩೧೪ | ೧೪೬೮ |
| ಮುಳಬಾಗಿಲು | ೧೧,೨೧೩ | ೧,೪೫೪ | ೧,೪೫೬ | ೧೯ | ೫ | ೧,೦೮೧ | ೬೫ | ೩೩ | ೩,೧೪೪ | ೩೮ | ೧,೭೦೭ | ೫೫೧ | ೩,೯೪೫ |
| ಶಿಡ್ಲಘಟ್ಟ | ೬೮೦ | ೧೪೮ | ೪೫೯ | ೩೪೫ | ೭ | ೧೯ | ೩,೪೨ | ೧೪ | ೧,೪೧೪ | ೩೧೧ | ೧೦೪ | ೩೮ | ೧೬,೧೪ |
| ಶ್ರೀನಿವಾಸಪುರ | ೪,೭೭೫ | ೬೮೪ | ೮೯ | ೧೬ | ೧೦ | ೯ | ೫೮೦ | ೨೧ | ೧೦೦ | ೩೯ | ೬೭ | ೧೧೧ | ೧,೬೭೪ |

ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಇದರಿಂದ ತಿಳಿಯ ಬಹುದು. ಪ್ರಸಕ್ತ ಬೆಲೆಗಳು, ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು, ಚಾಲ್ತಿ ಯಲ್ಲಿರುವ ಬೆಲೆಗಳ ಮೇರೆಗೆ ಹುಟ್ಟುವಳಿ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಸ್ಥಿರ ಬೆಲೆಗಳು ಈ ಅಂದಾಜು ಬೆಲೆಗಳ ವ್ಯತ್ಯಾಸದ ಪರಿಣಾಮವನ್ನು ದೂರವಾಗಿಸಿ, ನಿಜವಾದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುವಲ್ಲಿ ನೆರವಾಗುತ್ತವೆ. ತಲಾವಾರು ನಿವ್ವಳ ಆಂತರಿಕ ಉತ್ಪನ್ನವು ಜಿಲ್ಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಮಾಪನವಾಗಿದ್ದು, ಪ್ರಾದೇಶಿಕ ಅಸಮತೋಲನವನ್ನು ಅಳೆಯಲೂ ಸಹಕರಿಸುತ್ತದೆ.

ಜಿಲ್ಲೆಯ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು, ಬಂಡವಾಳ ಮತ್ತು ಮಾನವಶ್ರಮಗಳು ಪ್ರತಿವರ್ಷವೂ ಉತ್ಪಾದಿಸುವ ಸರಕು ಮತ್ತು ಸೇವೆಗಳ ನಿವ್ವಳ ಮೊತ್ತದ ಮೌಲ್ಯವೇ ಜಿಲ್ಲಾದಾಯ. ಕೃಷಿ, ಅರಣ್ಯ, ಮೀನುಗಾರಿಕೆ, ಗಣಿ ಮತ್ತು ಕಲ್ಲು ಅಗೆತಗಳು ಪ್ರಾಥಮಿಕ ವಲಯದ ವ್ಯಾಪ್ತಿಗೂ; ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ), ನಿರ್ಮಾಣ, ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ದ್ವಿತೀಯ ವಲಯದ ವ್ಯಾಪ್ತಿಗೂ; ರೈಲ್ವೆ ಇತರೆ ಸಾರಿಗೆ–ಸಂಪರ್ಕ, ಸಂಗ್ರಹಣೆ, ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು, ಬ್ಯಾಂಕು ಮತ್ತು ವಿಮೆ, ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ, ಸಾರ್ವಜನಿಕ ಆಡಳಿತ ಹಾಗೂ ಇತರೆ ಸೇವೆಗಳೂ ತೃತೀಯ ವಲಯ ಅಥವಾ ಸೇವಾಕ್ಷೇತ್ರದ ವ್ಯಾಪ್ತಿಗೂ ಸೇರಿವೆ. ಇವುಗಳ ಉತ್ಪಾದನಾ ಪ್ರಾಮುಖ್ಯತೆಯನ್ನು ಅವುಗಳ ವರಮಾನದಿಂದ ಅರಿಯಬಹುದಾಗಿದೆ.

ಜಿಲ್ಲೆಯ ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆ ಶೇಕಡಾ ೪೦.ಕ್ಕಿಂತ ಅಧಿಕವಾಗಿದೆ. ಪ್ರಾಥಮಿಕ ವಲಯದಲ್ಲಿ ಗಣಿಗಾರಿಕೆ ಹಾಗೂ ಕಲ್ಲು ಗಣಿಗಾರಿಕೆಯಿಂದ ಬರುವ ಆದಾಯ ತುಂಬಾ ಕಡಿಮೆಯಾಗಿರುವುದು ಸ್ಪಷ್ಟವಾಗಿದೆ. ೧೯೭೦–೭೧ರ ಚಾಲ್ತಿ ಬೆಳೆಗಳಲ್ಲಿ ಪ್ರಾಥಮಿಕ ವಲಯದ ಕೊಡುಗೆ ೪,೬೫೨ ಲಕ್ಷ ರೂ.ಗಳಾಗಿದ್ದರೆ, ೧೯೮೦–೮೧ ರಲ್ಲಿ ೭,೮೯೯ ಲಕ್ಷ ರೂ.ಗಳಾಗಿತ್ತು. ಇದು ೧೯೯೦–೯೧ರಲ್ಲಿ ೩೬,೬೯೩ ಲಕ್ಷ ರೂ.ಗಳಿಗೂ, ೨೦೦೦–೦೧ರಲ್ಲಿ ೧,೫೩,೦೭೭ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವುದು ಉಲ್ಲೇಖಾರ್ಹವಾಗಿದೆ. ಆದರೆ ಜಿಲ್ಲಾದಾಯಕ್ಕೆ ದ್ವಿತೀಯ ವಲಯದ ಕೊಡುಗೆ ೧೯೭೦–೭೧ರಲ್ಲಿ ತುಂಬಾ ಕಡಿಮೆ ಇದ್ದರೂ. ನಂತರ ತೀವ್ರ ಹೆಚ್ಚಳ ಕಂಡಿರುವುದು ಅಂಕಿ–ಅಂಶಗಳಿಂದ ತಿಳಿದುಬರುತ್ತದೆ. ೧೯೭೦–೭೧ರಲ್ಲಿ ಕೇವಲ ೮೩ ಲಕ್ಷ ರೂ.ಗಳಿದ್ದದ್ದು, ೧೯೮೦–೮೧ರಲ್ಲಿ ೧,೯೯೦ಲಕ್ಷ ರೂ.ಗಳಿಗೂ, ೧೯೯೦–೯೧ರಲ್ಲಿ ೧೦,೨೧೨ ಲಕ್ಷ ರೂ.ಗಳಿಗೂ, ೧೯೯೫–೯೬ರಲ್ಲಿ ೧೬,೯೭೨ ಲಕ್ಷ ರೂ.ಗಳಿಗೂ ಮತ್ತು ೨೦೦೦–೦೧ರಲ್ಲಿ ೪೩,೩೩೩ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವುದು ಈ ವಲಯದ ಪ್ರಾಮುಖ್ಯತೆಯನ್ನು ಬಿಂಬಿಸುತ್ತದೆ. ಸಾರಿಗೆ, ವ್ಯಾಪಾರ, ಹೋಟೆಲ್, ಉಪಹಾರಗೃಹಗಳು, ಬ್ಯಾಂಕು ಮತ್ತು ವಿಮಾ ವಲಯಗಳು ಸಂವಾದಿಯಾಗಿ ಹೆಚ್ಚಿನ ಮಹತ್ವ ಪಡೆದುಕೊಂಡ ಕಾರಣ ಜಿಲ್ಲಾದಾಯಕ್ಕೆ ತೃತೀಯ ವಲಯದ ಕೊಡುಗೆ ಗಮನಾರ್ಹವಾಗಿ ಹೆಚ್ಚಳಗೊಂಡಿದೆ. ೧೯೭೦–೭೧ರಲ್ಲಿ ೧,೩೫೦ ಲಕ್ಷ ರೂ.ಗಳಿದ್ದ ಇದು ೧೯೮೦–೮೧ರಲ್ಲಿ ೬,೧೮೬ ಲಕ್ಷ ರೂ.ಗಳಿಗೂ, ೧೯೯೦–೯೧ರಲ್ಲಿ ೨೭,೩೧೭ ಲಕ್ಷ ರೂ.ಗಳಿಗೂ, ೧೯೯೫–೯೬ರಲ್ಲಿ ೫೫,೯೮೮ ಲಕ್ಷ ರೂ.ಗಳಿಗೂ ಹಾಗೂ ೨೦೦೦–೦೧ರಲ್ಲಿ ೧,೪೦,೯೯೧ ಲಕ್ಷ ರೂ.ಗಳಿಗೂ ಹೆಚ್ಚಳ ಗೊಂಡಿರುವುದನ್ನು ಗಮನಿಸಿದರೆ, ಜಿಲ್ಲಾದಾಯಕ್ಕೆ ತೃತೀಯ ವಲಯದ ಕೊಡುಗೆ ಗಮನಾರ್ಹವಾಗಿ ಹೆಚ್ಚಳಗೊಂಡಿರುವ ಅಂಶ ಸ್ಪಷ್ಟವಾಗುತ್ತದೆ.

ಜಿಲ್ಲಾದಾಯಕ್ಕೆ ವಲಯವಾರು ವರಮಾನ (೧೯೮೦–೮೧ರ ಸ್ಥಿರ ಬೆಲೆಗಳಲ್ಲಿ) ಪ್ರಾಥಮಿಕ ವಲಯದಿಂದ ೧೯೮೦–೮೧ರಲ್ಲಿ ೭,೮೯೯ ಲಕ್ಷ ರೂ.ಗಳಾಗಿತ್ತು. ಅದು ೧೯೯೦–೯೧ರಲ್ಲಿ ೧೩,೭೭೬ ಲಕ್ಷ ರೂ.ಗಳಿಗೂ, ೧೯೯೫–೯೬ರಲ್ಲಿ ೧೮,೨೦೩ಲಕ್ಷ ರೂ.ಗಳಿಗೂ ಹಾಗೂ ೨೦೦೦–೦೧ ರಲ್ಲಿ (೧೯೯೩–೯೪ರ ಸ್ಥಿರ ಬೆಲೆಗಳಲ್ಲಿ) ೧,೦೩,೬೮೪ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿದೆ. ಇದೇ ಅವಧಿಯಲ್ಲಿ (೧೯೮೦–೮೧ರ ಸ್ಥಿರ ಬೆಲೆಗಳಲ್ಲಿ) ದ್ವಿತೀಯ ವಲಯದ ಕೊಡುಗೆ ೧೯೮೦–೮೧ರಲ್ಲಿ ೧,೯೯೦ ಲಕ್ಷ ರೂ. ಗಳಿಂದ ೧೯೯೦–೯೧ರಲ್ಲಿ ೩,೪೮೮ ಲಕ್ಷ ರೂ. ಗಳಿಗೂ, ೧೯೯೫–೯೬ರಲ್ಲಿ ೪,೧೯೯ಲಕ್ಷ ರೂ.ಗಳಿಗೂ ಹಾಗೂ ೧೯೯೩–೯೪ರ ಸ್ಥಿರ ಬೆಲೆಗಳಲ್ಲಿ ೨೦೦೦–೦೧ರಲ್ಲಿ ೨೮,೫೯೮ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡಿದೆ. ಹಾಗೆಯೇ ತೃತೀಯ ವಲಯದ ಕೊಡುಗೆ (೧೯೮೦–೮೧ರ ಸ್ಥಿರ ಬೆಲೆಗಳಲ್ಲಿ) ೧೯೮೦–೮೧ ರಲ್ಲಿ ೬,೧೮೬ ಲಕ್ಷ ರೂ.ಗಳಿಂದ, ೧೯೯೦–೯೧ರಲ್ಲಿ ೧೧,೯೭೩ ಲಕ್ಷ ರೂ.ಗಳಿಗೂ, ೧೯೯೫–೯೬ರಲ್ಲಿ ೧೫,೩೬೧ ಲಕ್ಷ ರೂ.ಗಳಿಗೂ ಹಾಗೂ (೧೯೯೩–೯೪ರ ಸ್ಥಿರಬೆಲೆಗಳಲ್ಲಿ) ೨೦೦೦–೦೧ರಲ್ಲಿ ೮೪,೯೭೨ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವ ಅಂಶ ಉಲ್ಲೇಖಾರ್ಹವಾಗಿದೆ. ೧೯೮೦–೮೧ರಲ್ಲಿ ಚಾಲ್ತಿ

ಬೆಲೆಗಳಲ್ಲಿ ೧೬,೦೭೫ ಲಕ್ಷ ರೂ.ಗಳಷ್ಟಿದ್ದ ಜಿಲ್ಲಾದಾಯದಿಂದಾಗಿ ರಾಜ್ಯದಲ್ಲಿ ಜಿಲ್ಲೆಯ ಸ್ಥಾನ ೧೭ನೇಯದಾಗಿತ್ತು. ೧೯೯೦-೯೧ರಲ್ಲಿ ೭೪,೧೬೮ ಲಕ್ಷ ರೂ.ಗಳಿಸಿ ೧೩ನೇ ಸ್ಥಾನಕ್ಕೆ ಏರಿತ್ತು. ೧೯೯೫-೯೬ರಲ್ಲಿ ೧,೪೭,೯೩೪ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡರೂ ಜಿಲ್ಲೆಯು ೧೫ನೇ ಸ್ಥಾನಕ್ಕೆ ಕುಸಿಯಿತು. ೨೦೦೦-೦೧ರಲ್ಲಿ ೩,೩೬,೭೦೧ ಲಕ್ಷ ರೂ.ಗಳಿಸಿ ೮ನೇ ಸ್ಥಾನ ಪಡೆದುಕೊಂಡಿದೆ.

ಜಿಲ್ಲೆಯ ಆದಾಯ (೧೯೮೦-೮೧ರ ಸ್ಥಿರ ಬೆಲೆಗಳಲ್ಲಿ) ೧೯೮೦-೮೧ರಲ್ಲಿ ೧೬,೦೭೫ ಲಕ್ಷ ರೂ.ಗಳಿದ್ದು, ರಾಜ್ಯದಲ್ಲಿ ೧೭ನೇ ಸ್ಥಾನದಲ್ಲಿತ್ತು. ೧೯೯೦-೯೧ರಲ್ಲಿ ಜಿಲ್ಲಾದಾಯ ೨೯,೨೩೭ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡು ೧೫ನೇ ಸ್ಥಾನಕ್ಕೇರಿತು. ೧೯೯೫-೯೬ರಲ್ಲಿ ೩೭,೭೬೩ ಲಕ್ಷ ರೂ.ಗಳಿಗೇರಿದ್ದರೂ, ಜಿಲ್ಲೆಯ ಸ್ಥಾನದಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಆದರೆ ೨೦೦೦-೦೧ರಲ್ಲಿ ೨,೧೬,೦೭೪ ಲಕ್ಷ ರೂ.ಗಳಿಸಿ ರಾಜ್ಯದಲ್ಲಿ ೯ನೇ ಸ್ಥಾನಕ್ಕೇರುವ ಮೂಲಕ ಜನರ ಆರ್ಥಿಕ ಸ್ಥಾನಮಾನ ಸುಧಾರಿಸಿರುವ ಅಂಶ ಸ್ಪಷ್ಟವಾಗಿದೆ. ೧೯೮೦-೮೧ ರಿಂದ ೨೦೦೧-೦೨ರವರೆಗೆ ಮೂಲ ಉದ್ಯಮಗಳಿಂದ ಜಿಲ್ಲೆಯ ನಿವ್ವಳ ಆದಾಯವನ್ನು ಚಾಲ್ತಿ ಹಾಗೂ ಸ್ಥಿರ ಬೆಲೆಗಳಲ್ಲಿ ಕೋಷ್ಟಕ ೮.೩ ಹಾಗೂ ೮.೪ರಲ್ಲಿ ನೀಡಲಾಗಿದೆ.

## ತಲಾ ಆದಾಯ

ತಲಾ ಆದಾಯವು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಸೂಚಿಯಾಗಿದೆ. ವಿವಿಧ ಜಿಲ್ಲೆಗಳ ತಲಾವಾರು ವರಮಾನಗಳು ಸಂವಾದಿಯಾಗಿ ಹಾಗೂ ನಿರಂತರವಾಗಿ ಏರಿಕೆಯಾಗಿವೆ. ಚಾಲ್ತಿ ಬೆಲೆಗಳಲ್ಲಿ ಕೋಲಾರ ಜಿಲ್ಲೆಯ ತಲಾ ಆದಾಯವು ೧೯೬೦-೬೧ರಲ್ಲಿ ಕೇವಲ ೨೩೮ ರೂ.ಗಳಿದ್ದು, ರಾಜ್ಯದಲ್ಲಿ ೧೫ನೇ ಸ್ಥಾನವನ್ನು ಪಡೆದುಕೊಂಡಿತ್ತು. ಇದು ೧೯೭೦-೭೧ರಲ್ಲಿ ೪೭೪ ರೂ.ಗಳಿದ್ದು, ೧೬ನೇ ಸ್ಥಾನಕ್ಕೆ ಕುಸಿಯಿತು. ೧೯೮೦-೮೧ರಲ್ಲಿ ೮೫೩ ರೂ.ಗಳನ್ನು ಹೊಂದಿ, ೧೮ನೇ ಸ್ಥಾನಕ್ಕೂ, ೧೯೯೦-೯೧ರಲ್ಲಿ ೩,೩೮೭ರೂ.ಗಳನ್ನು ಹೊಂದಿ ೧೯ನೇ ಸ್ಥಾನಕ್ಕೂ, ೧೯೯೫-೯೬ರಲ್ಲಿ ೬,೨೨೩ ರೂ.ಗಳಿಗೇರಿದ್ದರೂ ೨೦ನೇ ಸ್ಥಾನಕ್ಕೂ ಹಾಗೂ ೨೦೦೦-೨೦೦೧ರಲ್ಲಿ ೧೩,೪೧೪ ಗಳನ್ನು ಹೊಂದಿದ್ದರೂ ೨೨ನೇ ಸ್ಥಾನಕ್ಕೆ ಕುಸಿದಿದೆ. ೧೯೬೦-೬೧ದಿಂದ ೨೦೦೧-೨೦೦೨ರವರೆಗೂ ತಲಾ ಆದಾಯದಲ್ಲಿ ಹೆಚ್ಚಳವಾಗಿದ್ದರೂ, ಅದು ರಾಜ್ಯ ತಲಾ ಆದಾಯಕ್ಕಿಂತ ಕಡಿಮೆಯಿರುವುದೇ ಜಿಲ್ಲೆಯ ಸ್ಥಾನ ಕುಸಿತಕ್ಕೆ ಮುಖ್ಯ ಕಾರಣವಾಗಿದೆ.

೧೯೭೦-೭೧ರ ಸ್ಥಿರ ಬೆಲೆಗಳಲ್ಲಿ ೧೯೭೦-೭೧ರಲ್ಲಿ ೪೭೪ ರೂ.ಗಳನ್ನು ಹೊಂದಿದ್ದು ಜಿಲ್ಲೆಯು ರಾಜ್ಯದಲ್ಲಿ ೧೬ನೇ ಸ್ಥಾನದಲ್ಲಿತ್ತು. ಇದು ೧೯೮೦-೮೧ರಲ್ಲಿ(೧೯೮೦-೮೧ರ ಸ್ಥಿರಬೆಲೆಗಳಲ್ಲಿ) ರೂ.೮೫೩ (೧೮) ಗಳಿಗೂ, ೧೯೯೦-೯೧ರಲ್ಲಿ ರೂ.೧,೩೩೫ (೨೦) ಗಳಿಗೂ, ೧೯೯೫-೯೬ರಲ್ಲಿ ರೂ.೧೫೮೮ (೨೦) ಗಳಿಗೂ ಹಾಗೂ ೨೦೦೧-೨೦೦೨ರಲ್ಲಿ (೧೯೯೩-೯೪ರ ಸ್ಥಿರ ಬೆಲೆಗಳಿಗೆ) ರೂ. ೮,೬೦೮ ಗಳಿಸಿ (೨೨)ನೇ ಸ್ಥಾನಕ್ಕೆ ಕುಸಿದಿದೆ. ಆವರಣದಲ್ಲಿ ಕೊಟ್ಟಿರುವ ಸಂಖ್ಯೆ ತಲಾದಾಯದಲ್ಲಿ ಜಿಲ್ಲೆಯ ಸ್ಥಾನವನ್ನು ಪ್ರತಿನಿಧಿಸುತ್ತದೆ.

ಜಿಲ್ಲಾವಾರು ಆದಾಯ ಹಾಗೂ ತಲಾದಾಯಗಳ ತುಲನಾತ್ಮಕ ಅಧ್ಯಯನದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಾಗಿರುವ ಪ್ರಗತಿಯ ಪ್ರಮಾಣದ ಅಂತರ, ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ಗುರುತಿಸಿ, ಕಾರಣಗಳನ್ನು ಕಂಡುಕೊಂಡು, ಅವುಗಳಿಗಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ, ಜಾರಿಗೆ ತರಲು ಅನುಕೂಲವಾಗುವುದು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩ ಹಾಗೂ ೮.೪ ಗಳನ್ನು ನೋಡಿ.

## ಬೆಲೆ

ಜಿಲ್ಲೆಯಲ್ಲಿ ೧೯೧೬ಕ್ಕೆ ಮೊದಲು ಬೆಲೆ ಹೆಚ್ಚಳದ ಪ್ರವೃತ್ತಿ ಕಂಡು ಬಂದಿದ್ದು, ಜನಸಂಖ್ಯಾ ಹೆಚ್ಚಳ, ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ವ್ಯತ್ಯಾಸ, ಬೆಲೆಬಾಳುವ ಲೋಹಗಳ ಬೆಲೆಗಳಲ್ಲಾದ ವ್ಯತ್ಯಾಸ ಮತ್ತು ಜನರ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟು ಸಂಪನ್ಮೂಲಗಳ ಕೊರತೆ ಮುಂತಾದವು ಬೆಲೆ ಹೆಚ್ಚಳಕ್ಕೆ ಮೂಲ ಕಾರಣಗಳಾಗಿವೆ.

## ಕೋಷ್ಟಕ ೮.೩: ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ (ಚಾಲ್ತಿ ಬೆಲೆಗಳಲ್ಲಿ)

(ಲಕ್ಷ ರೂ.ಗಳಲ್ಲಿ)

| ಆದಾಯದ ವಿವಿಧ ಮೂಲಗಳು | ೧೯೮೦-೮೧ | ೧೯೯೦-೯೧ | ೧೯೯೨-೯೩ | ೧೯೯೩-೯೪ | ೧೯೯೪-೯೫ | ೧೯೯೫-೯೬ | ೧೯೯೬-೯೭ | ೨೦೦೦-೦೧ | ೨೦೦೧-೦೨ |
|---|---|---|---|---|---|---|---|---|---|
| **ಪ್ರಾಥಮಿಕ ವಲಯ** | | | | | | | | | |
| ಕೃಷಿ | ೬೨೮ | ೩೩೮೭ | ೪೩೫೯ | ೫೩೫೮ | ೬೩೬೪ | ೬೯೧೪ | ೭೧೬೦ | ೧೪೩೭೧೭ | ೧೨೯೧೬೩ |
| ಅರಣ್ಯ | ೩೬೭ | ೨೬೧೮ | ೩೬೧೫ | ೩೭೯ | ೩೯೬೬ | ೪೭೯ | ೪೫೦೨ | ೭೫೧೧ | ೭೭೬೬ |
| ಮೀನುಗಾರಿಕೆ | ೧೦೫ | ೧೧೩ | ೩೦೧ | ೫೫೫ | ೫೯೪ | ೧೧೫೯ | ೧೪೩೨ | ೯೭೩ | ೧೫೩೬ |
| ಗಣಿ ಮತ್ತು ಕಲ್ಲು ಅಗೆತ | ೧೯೯ | ೧೪೩೧ | ೧೦೬ | ೧೫೩೦ | ೧೨೩೦ | ೧೫೮೨ | ೧೯೦೨ | ೮೭೬ | ೧೯೨ |
| **ಒಟ್ಟು (೧ರಿಂದ ೪)** | **೭೯೯** | **೩೬೬೭೯** | **೪೭೪೬೧** | **೫೯೩೦೨** | **೬೬೬೪೪** | **೫೯೮೪** | **೭೬೭೬** | **೧೪೩೦೨೨** | **೧೩೮೬೪೬** |
| **ದ್ವಿತೀಯ ವಲಯ** | | | | | | | | | |
| ತಯಾರಿಕೆ (ನೊಂದಣಿಯಾದ ಮತ್ತು ನೊಂದಣಿಯಾಗದ) | ೮೦೦ | ೩೬೭೯ | ೫೮೬೧ | ೫೩೪೬ | ೫೯೩೯ | ೫೮೦೪ | ೭೩೯ | ೧೯೪೦೬ | ೨೪೯೭ |
| ನಿರ್ಮಾಣ | ೭೫೬ | ೩೦೬೪ | ೫೯೨ | ೫೩೪೩ | ೬೦೩೦ | ೭೫೩೦ | ೯೧೫ | ೧೯೬೮ | ೧೧೮೨೦ |
| ವಿದ್ಯುತ್, ಅನಿಲ, ನೀರು ಸರಬರಾಜು | ೪೩೪ | ೩೪೭೯ | ೧೫೧೦ | ೨೧೨೨ | ೩೩೩೦ | ೩೦೧೮ | ೩೨೦೨ | ೪೯೪೯ | ೬೦೧೬ |
| **ಒಟ್ಟು (೫ ರಿಂದ ೭)** | **೧೯೯೦** | **೧೦೨೨೨** | **೧೦೫೬೩** | **೧೦೯೧೬** | **೧೯೧೯** | **೧೬೨೨** | **೨೦೫೬** | **೪೩೩೩೭** | **೫೧೩೩೩** |
| **ತೃತೀಯ ವಲಯ** | | | | | | | | | |
| ರೈಲ್ವೆ | ೫೯ | ೩೮ | ೫೮೧ | ೫೯೨ | ೪೫೬ | ೪೯೨ | ೬೧೨ | ೭೬ | ೧೯೯ |
| ಇತರೆ ಸಾರಿಗೆ | ೪೪೪ | ೩೧೫೨ | ೫೦೧೨ | ೫೪೬೭ | ೬೬೩೪ | ೭೪೯ | ೧೦೪೯೬ | ೯೧೦೯ | ೧೪೪೮೫ |
| ಸಂಗ್ರಹಣೆ | ೮ | ೪ | ೬೨ | ೫ | ೫ | ೧೬ | ೧೫೧ | ೬೧ | ೩೦ |
| ಸಂಪರ್ಕ | ೯೭ | ೫೯೬ | ೮೮ | ೧೨೫೬ | ೧೪೫೬ | ೧೬೬೭ | ೩೬೨೨ | ೪೭೫೫ | ೬೩೯ |
| ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು | ೧೮೪೩ | ೭೪೦೮ | ೮೪೦೫ | ೧೧೫೯೭ | ೧೧೮೩೫ | ೧೩೫೮೨ | ೧೪೬೩೧ | ೩೦೨೫೩ | ೩೬೩೯೪ |
| ಬ್ಯಾಂಕು ಮತ್ತು ವಿಮೆ | ೨೮೫ | ೨೮೪೫ | ೩೬೩೮ | ೪೦೮೩ | ೫೩೩೯ | ೬೦೯೮ | ೮೯೬೦ | ೧೦೮೨೩ | ೮೨೦೦ |
| ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೧೫೯೫ | ೪೨೯೩ | ೫೦೬೩ | ೫೯೦೨ | ೬೦೬೬ | ೬೬೬೨ | ೭೯೯ | ೨೯೪೭೧ | ೩೨೨೭೮ |
| ಸಾರ್ವಜನಿಕ ಆಡಳಿತ | ೫೬೦ | ೨೪೧ | ೪೦೬೮ | ೫೯೬೪ | ೬೨೩೬ | ೭೫೩೧ | ೯೫೮೦ | ೨೦೬೨೫ | ೨೦೦೦೭ |
| ಇತರೆ ಸೇವೆಗಳು | ೧೨೯೫ | ೫೯೧೪ | ೭೪೫೬ | ೮೯೮೮ | ೧೦೨೯ | ೧೧೪೪೧ | ೧೩೬೮೪ | ೩೪೪೧೮ | ೩೬೩೩೭ |
| **ಒಟ್ಟು ೮ ರಿಂದ ೧೬** | **೬೧೭೬** | **೨೩೩೧೭** | **೩೩೧೪೫** | **೪೨೯೯೩** | **೪೮೨೯೫** | **೫೯೦೯೮** | **೬೮೬೯೫** | **೧೪೦೨೯೦** | **೧೫೫೮೯** |
| ನಿವ್ವಳ ಜಿಲ್ಲಾದಾಯ | ೧೬೦೭೫ | ೨೪೧೬೮ | ೯೫೪೧೨ | ೧೪೫೪೧ | ೧೫೩೧೮ | ೧೪೮೯೩೪ | ೧೬೯೧೪೭ | ೩೩೬೬೯೯ | ೩೪೫೮೩೮ |
| ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆ) | ೧೭ | ೧೩ | ೧೪ | ೧೪ | ೧೫ | ೧೫ | ೧೫ | ೮ | ೭ |
| ತಲಾದಾಯ (ರೂ.ಗಳಲ್ಲಿ) | ೮೩೩ | ೩೩೮೭ | ೪೧೯೫ | ೪೯೬೧ | ೫೪೩೮ | ೬೨೩ | ೭೦೭೭ | ೧೫೪೧೯ | ೧೫೫೦ |
| ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆ) | ೧೮ | ೧೯ | ೨೦ | ೧೯ | ೨೦ | ೨೦ | ೧೯ | ೨೨ | ೨೧ |

### ಕೋಷ್ಟಕ ೮.೪: ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ (೧೯೮೦–೮೧ರ ಸ್ಥಿರ ಬೆಲೆಗಳಲ್ಲಿ)

(ಲಕ್ಷ ರೂ.ಗಳಲ್ಲಿ)

| ಆದಾಯದ ವಿವಿಧ ಮೂಲಗಳು | ೧೯೮೦-೮೧ | ೧೯೯೦-೯೧ | ೧೯೯೨-೯೩ | ೧೯೯೩-೯೪ | ೧೯೯೪-೯೫ | ೧೯೯೫-೯೬ | ೧೯೯೬-೯೭ | ೨೦೦೦-೦೧ | ೨೦೦೧-೦೨ |
|---|---|---|---|---|---|---|---|---|---|
| | | | | ಪ್ರಾಥಮಿಕ ವಲಯ | | | | | |
| ಕೃಷಿ | ೬೨೮ | ೧೩೧೭೫ | ೧೩೨೮೦ | ೧೨೨೯ | ೧೬೫೧೭ | ೧೭೪೪ | ೧೨೧೪೦ | ೯೮೩೦೨ | ೮೯೧೬೩ |
| ಅರಣ್ಯ | ೩೬೭ | ೩೭೯ | ೪೮೪ | ೩೮೪ | ೩೮೮ | ೩೯೮ | ೩೮೭ | ೪೫೩೯ | ೪೬೧೦ |
| ಮೀನುಗಾರಿಕೆ | ೧೦೫ | ೫೮ | ೧೨೫ | ೨೫೮ | ೧೫೫ | ೨೯ | ೨೯ | ೨೯೩ | ೪೧೧ |
| ಗಣಿ ಮತ್ತು ಕಲ್ಲು ಅಗೆತ | ೧೯೯ | ೧೬೪ | ೧೫೭ | ೧೧೩ | ೧೭ | ೭ | ೧೦೮ | ೫೮೦ | ೧೫೬ |
| ಒಟ್ಟು (೧ ರಿಂದ ೪) | ೭೮೯ | ೧೩೭೭೬ | ೧೪೦೧೧ | ೧೭೮೪ | ೧೭೩೨ | ೧೮೦೩ | ೧೭೮೯ | ೧೦೫೬೮೪ | ೯೪೩೦ |
| | | | | ದ್ವಿತೀಯ ವಲಯ | | | | | |
| ತಯಾರಿಕೆ (ನೊಂದಣಿಯಾದ ಮತ್ತು ನೊಂದಣಿಯಾಗದ) | ೮೦ | ೧೬೪೧ | ೨೨೮೪ | ೧೦೭೭ | ೧೭೪೫ | ೧೯೦೩ | ೧೯೭೪ | ೧೩೨೨೧ | ೧೯೧೮೧ |
| ನಿರ್ಮಾಣ | ೭೫೬ | ೧೦೬೪ | ೧೫೯ | ೧೩೪೨ | ೧೨೮೨ | ೧೯೬೫ | ೧೬೬೭ | ೧೨೬೮೪ | ೧೩೫೪೮ |
| ವಿದ್ಯುತ್, ಅನಿಲ, ನೀರು ಸರಬರಾಜು | ೪೮೪ | ೭೮೩ | ೭೮೨ | ೭೯ | ೯೬೦ | ೮೧ | ೭೦೬ | ೨೯೫೩ | ೩೯೦ |
| ಒಟ್ಟು (೫ ರಿಂದ ೭) | ೧೯೦ | ೩೪೮ | ೪೪೮೫ | ೩೮೭೮ | ೩೯೮೭ | ೪೯೯ | ೪೩೪೭ | ೨೮೯೮ | ೩೫೮೦ |
| | | | | ತೃತೀಯ ವಲಯ | | | | | |
| ರೈಲ್ವೆ | ೫೯ | ೮೫ | ೧೦೦ | ೮೦ | ೪೭ | ೭೦ | ೮೦ | ೫೭೯ | ೮೦೬ |
| ಇತರೆ ಸಾರಿಗೆ | ೪೪೪ | ೧೧೦೫ | ೧೪೭೯ | ೧೫೬೪ | ೧೬೨೭ | ೧೪೮೧ | ೧೯೮೧ | ೩೮೧೬ | ೪೨೩೫ |
| ಸಂಗ್ರಹಣೆ | ೮ | ೧೫ | ೨೧ | ೨೩ | ೨೮ | ೩೦ | ೩೫ | ೩೫ | ೩೫ |
| ಸಂಪರ್ಕ | ೯೭ | ೧೭೯ | ೧೬೭ | ೧೮೪ | ೨೧೮ | ೨೬೦ | ೪೦೮ | ೪೧೫೪ | ೭೭೬ |
| ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು | ೧೫೩ | ೩೧೫೪ | ೨೯೪೬ | ೪೦೫೩ | ೩೫೧೯ | ೩೫೬೧ | ೩೬೫೮ | ೧೯೬೦೩ | ೨೩೦೩೬ |
| ಬ್ಯಾಂಕು ಮತ್ತು ವಿಮೆ | ೨೮೫ | ೧೪೨೦ | ೧೫೧೮ | ೧೭೧೫ | ೧೬೭೩ | ೧೦೦೭ | ೨೫೩೩ | ೭೭೭೭ | ೫೪೯೯ |
| ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೧೫೯೫ | ೨೩೮೪ | ೨೫೮೯ | ೨೫೯೭ | ೨೭೯೪ | ೨೯೨೧ | ೩೦೩೪ | ೧೬೩೭೯ | ೧೭೫೦೨ |
| ಸಾರ್ವಜನಿಕ ಆಡಳಿತ | ೫೬೦ | ೧೧೫೭ | ೧೩೭೫ | ೧೬೦೭ | ೧೭೭೯ | ೧೯೬೧ | ೨೨೬೨ | ೧೧೯೭೮ | ೧೦೭೪೬ |
| ಇತರೆ ಸೇವೆಗಳು | ೧೭೯೫ | ೨೫೮೪ | ೨೫೬೬ | ೨೦೮೭ | ೩೧೫೩ | ೩೦೦೦ | ೩೧೯೯ | ೨೦೧೩೨ | ೨೧೬೪೫ |
| ಒಟ್ಟು ೮ ರಿಂದ ೧೬ | ೬೧೮೬ | ೧೯೯೭೩ | ೧೫೬೬೧ | ೧೫೮೦೦ | ೧೫೮೮೮ | ೧೯೯೦೧ | ೧೭೦೮೮ | ೮೯೯೯೩ | ೯೦೯೦೦ |
| ನಿವ್ವಳ ಜಿಲ್ಲಾದಾಯ | ೧೬೦೭೫ | ೨೯೩೨೭ | ೩೧೦೭೭ | ೩೬೫೬೮ | ೩೬೦೦೧ | ೩೬೩೦೩ | ೩೯೩೩೬ | ೨೧೬೦೭೫ | ೨೨೧೦೪೦ |
| ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆ) | ೧೭ | ೧೫ | ೧೬ | ೧೫ | ೧೬ | ೧೫ | ೧೪ | ೯ | ೯ |
| ತಲಾದಾಯ (ರೂ.ಗಳಲ್ಲಿ) | ೮೫೩ | ೧೩೩೫ | ೧೩೬೬ | ೧೫೮೩ | ೧೫೩೬ | ೧೫೮೮ | ೧೬೩೧ | ೮೬೦೮ | ೮೬೬೫ |
| ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆ) | ೧೮ | ೨೦ | ೨೦ | ೨೦ | ೨೦ | ೨೦ | ೨೦ | ೨೨ | ೨೧ |

ಕಳೆದ ಶತಮಾನದ ಪೂರ್ವಾರ್ಧ ಭಾಗದಲ್ಲಿ ಜರುಗಿದ ಎರಡು ಮಹಾಯುದ್ಧಗಳು ವಾಣಿಜ್ಯ ಮತ್ತು ವ್ಯಾಪಾರ ವಹಿವಾಟನ್ನು ಗಣನೀಯವಾಗಿ ವೃದ್ಧಿಸಿದವು. ಅದರಲ್ಲೂ, ವಾಣಿಜ್ಯ ರಂಗದಲ್ಲಾದ ಆರ್ಥಿಕ ಬೆಳವಣಿಗೆಯ ಪ್ರಮಾಣವು ಗಮನಾರ್ಹವಾಗಿತ್ತು. ಮಿಗಿಲಾಗಿ, ವಾಣಿಜ್ಯದ ಬೆಳವಣಿಗೆಗೆ ವಿವಿಧ ಸಾಲ ಸೌಲಭ್ಯಗಳು ನೆರವಾದವು. ಆದರೆ ಬೇಡಿಕೆಯನ್ನು ಪೂರೈಸುವಲ್ಲಿ ಉತ್ಪಾದನಾ ಸಂಪನ್ಮೂಲಗಳ ಕೊರತೆ ಉಂಟಾಯಿತು. ಈ ಅಸಮತೋಲನವು ತೀವ್ರ ಬೆಲೆ ಏರಿಕೆಗೆ ಅನುವು ಮಾಡಿಕೊಟ್ಟಿತು. ಇದರಿಂದಾಗಿ ಬೆಳೆಗಾರರು ಹಾಗೂ ಉತ್ಪಾದಕರಿಗೆ ಗಣನೀಯ ಪ್ರಮಾಣದಲ್ಲಿ ಲಾಭವಾಯಿತು.

೧೮೯೦ ರಿಂದ ಮೊದಲ ಮಹಾಯುದ್ಧದವರೆಗೆ (೧೯೧೪), ನಂತರ ೧೯೨೩ರಿಂದ ಎರಡನೇ ಮಹಾಯುದ್ಧದ ಮುಕ್ತಾಯದವರೆಗೆ (೧೯೪೫) ಬೆಲೆಗಳಲ್ಲಾದ ತುಲನಾತ್ಮಕ ವ್ಯತ್ಯಾಸಗಳನ್ನು ಮುಂದಿನ ಕೋಷ್ಟಕ ೮.೫ರಲ್ಲಿ ನೀಡಿದೆ.

**ಕೋಷ್ಟಕ ೮.೫: ಜಿಲ್ಲೆಯಲ್ಲಿ ಒಂದು ರೂಪಾಯಿಗೆ ೮೦ತೊಲದ ಸೇರಿನಲ್ಲಿ ಅಕ್ಕಿ, ರಾಗಿಗಳ ಬೆಲೆ ವಿವರ**

| ವರ್ಷಗಳು | ಅಕ್ಕಿ | ರಾಗಿ | ವರ್ಷಗಳು | ಅಕ್ಕಿ | ರಾಗಿ |
|---|---|---|---|---|---|
| ೧೮೯೦ | ೧೦.೫೧ | ೩೨.೪೦ | ೧೯೦೩ | ೯.೫೬ | ೨೭.೬೦ |
| ೧೮೯೧ | ೮.೫೩ | ೨೨.೮೩ | ೧೯೦೪ | ೧೧.೧೨ | ೩೦.೫೦ |
| ೧೮೯೨ | ೭.೫೬ | ೧೮.೪೬ | ೧೯೦೫ | ೯.೮೫ | ೧೭.೭೫ |
| ೧೮೯೩ | ೭.೯೯ | ೨೨.೭೪ | ೧೯೦೬ | ೭.೮೧ | ೧೪.೧೭ |
| ೧೮೯೪ | ೮.೫೯ | ೨೮.೩೪ | ೧೯೦೭ | ೭.೬೨ | ೧೩.೭೧ |
| ೧೮೯೫ | ೯.೨೬ | ೩೦.೦೦ | ೧೯೦೮ | ೬.೫೫ | ೧೧.೦೪ |
| ೧೮೯೬ | ೯.೧೮ | ೨೬.೭೯ | ೧೯೦೯ | ೭.೬೦ | ೧೨.೪೯ |
| ೧೮೯೭ | ೯.೨೯ | ೧೭.೯೬ | ೧೯೧೦ | ೭.೭೧ | ೧೫.೩೭ |
| ೧೮೯೮ | ೭.೬೧ | ೧೭.೭೮ | ೧೯೧೧ | ೬.೭೧ | ೧೪.೧೪ |
| ೧೮೯೯ | ೧೦.೨೪ | ೨೨.೨೩ | ೧೯೧೨ | ೫.೬೯ | ೧೩.೪೭ |
| ೧೯೦೦ | ೨.೪೦ | ೧೩.೪೪ | ೧೯೧೩ | ೫.೫೦ | ೧೨.೫೮ |
| ೧೯೦೧ | ೮.೪೨ | ೧೩.೨೭ | ೧೯೧೪ | ೫.೯೬ | ೧೩.೫೯ |
| ೧೯೦೨ | ೯.೫೯ | ೨೦.೭೧ | | | |

ಆಧಾರ: ಕೋಲಾರ ಗ್ಯಾಸೆಟಿಯರ್ ೧೯೬೭ ಪುಟ–೨೯೭

ಅಕ್ಕಿಯು ೧೮೯೦ರಲ್ಲಿ ರೂಪಾಯಿಗೆ ೧೦.೫೧ ಸೇರು ಲಭಿಸುತ್ತಿದ್ದರೆ, ೧೯೦೦ರಲ್ಲಿ ೨.೪೦ಸೇರು ಲಭಿಸುತ್ತಿದ್ದು, ಅಕ್ಕಿಯ ಬೆಲೆಯಲ್ಲಿ ತೀವ್ರ ಹೆಚ್ಚಳವಾಗಿರುವುದು ಕೋಷ್ಟಕ ೮.೫ರಲ್ಲಿ ಗೋಚರಿಸುತ್ತದೆ. ನಂತರದ ವರ್ಷಗಳಲ್ಲಿ ಅಕ್ಕಿಯ ಬೆಲೆಯಲ್ಲಿ ಕುಸಿತ ಕಂಡುಬಂದರೂ, ೧೯೧೪ರಲ್ಲಿ ರೂಪಾಯಿಗೆ ೫.೯೬ ಸೇರು ಲಭ್ಯವಾಗುತ್ತಿತ್ತು. ಕೋಲಾರ ಜಿಲ್ಲೆಯ ಪ್ರಧಾನ ಬೆಳೆಯಾದ ರಾಗಿಯು ೧೮೯೦ರಲ್ಲಿ ರೂಪಾಯಿಗೆ ೩೨.೪೦ ಸೇರು ಲಭಿಸುತ್ತಿದ್ದರೆ, ೧೯೦೦ರಲ್ಲಿ ೧೩.೪೪ ಸೇರುಗಳು, ೧೯೧೪ರಲ್ಲಿ ೧೩.೫೯ ಸೇರು ಲಭಿಸುತ್ತಿತ್ತು. ಆದರೂ ಬೆಲೆಗಳು ಒಂದೇ ಸಮನಾಗಿ ಹೆಚ್ಚಳಗೊಂಡಿರುವ ಅಂಶ ಸ್ಪಷ್ಟವಾಗಿದೆ.

**ಕೋಷ್ಟಕ ೮.೬ ೧೯೨೩–೨೪ರಿಂದ ೧೯೪೪–೪೫ರವರೆಗೆ ಅಕ್ಕಿ ಮತ್ತು ರಾಗಿಯ ಸಗಟು ಬೆಲೆಯ ವಿವರ**

(ಒಂದು ಪಲ್ಲಕ್ಕೆ ೧೦೦ ಸೇರುಗಳು)

| ವರ್ಷಗಳು | ಅಕ್ಕಿ ರೂ.–ಆಣೆ–ಪೈ | ರಾಗಿ ರೂ.–ಆಣೆ–ಪೈ | ವರ್ಷಗಳು | ಅಕ್ಕಿ ರೂ.–ಆಣೆ–ಪೈ | ರಾಗಿ ರೂ.–ಆಣೆ–ಪೈ |
|---|---|---|---|---|---|
| **೧೯೨೩–೨೪** | ೨೮–೦೦–೦ | ೧೩–೦೧–೦ | **೧೯೩೪–೩೫** | ೧೪–೧೧–೦ | ೭–೦೪–೦ |
| **೧೯೨೪–೨೫** | ೩೦–೦೦–೦ | ೧೨–೦೫–೦ | **೧೯೩೫–೩೬** | ೧೩–೧೦–೦ | ೬–೦೮–೦ |
| **೧೯೨೫–೨೬** | ೩೦–೦೦–೦ | ೧೧–೦೨–೦ | **೧೯೩೬–೩೭** | ೧೪–೦೮–೦ | ೬–೦೦–೦ |
| **೧೯೨೬–೨೭** | ೩೦–೦೦–೦ | ೧೧–೦೦–೦ | **೧೯೩೭–೩೮** | ೧೪–೦೮–೦ | ೫–೦೭–೦ |
| **೧೯೨೭–೨೮** | ೨೮–೦೦–೦ | ೧೦–೦೮–೦ | **೧೯೩೮–೩೯** | ೧೪–೦೦–೦ | ೬–೧೦–೦ |
| **೧೯೨೮–೨೯** | ೨೬–೦೦–೦ | ೧೦–೧೨–೦ | **೧೯೩೯–೪೦** | ೧೬–೦೦–೦ | ೬–೧೪–೦ |
| **೧೯೨೯–೩೦** | ೨೬–೦೦–೦ | ೧೦–೦೬–೦ | **೧೯೪೦–೪೧** | ೨೨–೦೪–೦ | ೬–೦೨–೦ |
| **೧೯೩೦–೩೧** | ೧೬–೧೦–೦ | ೫–೧೨–೦ | **೧೯೪೧–೪೨** | ೨೧–೦೮–೦ | ೫–೦೪–೦ |
| **೧೯೩೧–೩೨** | ೧೪–೦೪–೦ | ೬–೦೦–೦ | **೧೯೪೨–೪೩** | ೨೪–೧೦–೦ | ೮–೦೩–೦ |
| **೧೯೩೨–೩೩** | ೧೩–೦೮–೦ | ೪–೦೮–೦ | **೧೯೪೩–೪೪** | ೨೭–೧೧–೦ | ೧೪–೦೦–೦ |
| **೧೯೩೩–೩೪** | ೧೨–೦೩–೦ | ೩–೧೧–೦ | **೧೯೪೪–೪೫** | ೩೫–೦೪–೦ | ೧೫–೦೯–೦ |

**ಸೂಚನೆ:** ಹನ್ನೆರಡು ತಾಸಿಗೆ ಒಂದಾಣೆ; ಹದಿನಾರು ಆಣೆಗೆ ಒಂದು ರೂಪಾಯಿ ಲೆಕ್ಕದಲ್ಲಿ

**೧೯೫೦ರ ನಂತರ:** ೧೯೫೦ರ ದಶಕದಲ್ಲಿಯೂ ಬೆಲೆ ಕಡಿಮೆಯಾಗುವ ಸೂಚನೆ ಕಂಡುಬರಲಿಲ್ಲ. ೧೯೫೭, ೧೯೫೮ ಹಾಗೂ ೧೯೫೯ರಲ್ಲಿ ಇದ್ದ ಆಹಾರ ಪದಾರ್ಥಗಳ ಬೆಲೆ ಮುಂದಿನಂತಿದೆ.

**ಕೋಷ್ಟಕ ೮.೭: ೧೯೫೭–೫೯ರ ಅವಧಿಯಲ್ಲಿದ್ದ ಸರಾಸರಿ ಸಗಟು ಬೆಲೆ**

(ಪ್ರತಿ ಬಿ.ಎಂಡಿಗೆ ರೂ.ಗಳಲ್ಲಿ)

| ವರ್ಷಗಳು | ಅಕ್ಕಿ ರೂ.ಪೈ | ರಾಗಿ ರೂ.ಪೈ |
|---|---|---|
| **೧೯೫೭** | ೧೯.೪೭ | ೧೧.೯೨ |
| **೧೯೫೮** | ೧೯.೯೫ | ೧೧.೮೪ |
| **೧೯೫೯** | ೨೧.೫೯ | ೧೩.೩೯ |

(ಬಿ.ಎಂಡಿ.–ಬೆಂಗಾಲ್ ಮಾಂಡ್)

ಮೇಲೆ ತೋರಿಸಿರುವ ಅವಧಿಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಹಣದುಬ್ಬರದ ಪರಿಣಾಮವಾಗಿ ಸತತವಾಗಿ ಹೆಚ್ಚಳಗೊಂಡಿರುವುದು ಸ್ಪಷ್ಟವಾಗಿದೆ. ಈ ರೀತಿಯ ಬೆಲೆಯಲ್ಲಾದ ಬದಲಾವಣೆಯ ಬಗ್ಗೆ ವಿಶ್ಲೇಷಣೆ ಮಾಡುವುದರಿಂದ ಮಾನವನ ಆರ್ಥಿಕ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಬಹುದು. ಹಣದುಬ್ಬರದ ಪ್ರವೃತ್ತಿ ಹಲವಾರು ಫಲಿತಾಂಶಗಳನ್ನು ನೀಡುತ್ತದೆ. ಎಲ್ಲಾ ಕಾಲದಲ್ಲೂ ಬೆಲೆಯ ಹೆಚ್ಚಳಕ್ಕೆ ಜನಸಂಖ್ಯೆಯ ಹೆಚ್ಚಳವೇ ಕಾರಣವಲ್ಲ. ಬೆಲೆ ಬಾಳುವ ಲೋಹಗಳಿಂದ, ಅಗತ್ಯ ವಸ್ತುಗಳ ಉತ್ಪಾದನಾ ಕ್ರಮ ಹಾಗೂ ಆಮದು ಮತ್ತು ರಫ್ತು ಬೆಲೆ ಮುಂತಾದವು ಬೆಲೆ ಏರಿಕೆಯಲ್ಲಿ ತಮ್ಮದೇ ಆದ ಪಾತ್ರವಹಿಸಿವೆ.

ಸೆಪ್ಟೆಂಬರ್ ೧೯೩೯ರಲ್ಲಿ ಎರಡನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾದ ಮೇಲೆ ಬೆಲೆಗಳು ಗಗನಕ್ಕೇರಿದವು. ಇದಕ್ಕೆ ಹಲವಾರು ಕಾರಣಗಳಿದ್ದರೂ, ವ್ಯಾಪಾರಸ್ಥರು ಹಾಗೂ ದಾಸ್ತಾನುಕಾರರು ಪ್ರಮುಖ ಕಾರಣಕರ್ತರಾಗಿದ್ದರು. ಬೆಲೆ ಏರಿಕೆಯನ್ನು ತಡೆಯಲು ಸರ್ಕಾರ ಹಲವಾರು ಕಠಿಣ ಕ್ರಮಗಳನ್ನು ಕೈಗೊಂಡಿತು. ಪ್ರತಿಫಲವಾಗಿ ಯುದ್ಧ ನಿಲುಗಡೆಯಾಗುವವರೆಗೆ ಭತ್ತ ಹಾಗೂ ರಾಗಿಯನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಕೊಡಬೇಕಾಯಿತು. ಪಡಿತರ ಪದ್ಧತಿಯ ಕಾನೂನುಗಳನ್ನು ಎಲ್ಲಾ ನಗರ ಪ್ರದೇಶದಲ್ಲೂ ಜಾರಿಗೆ ತರಲಾಯಿತು. ಯುದ್ಧಾನಂತರದಲ್ಲಿ ಬೆಲೆ ಏರಿಕೆ ತಡೆ ಬಗ್ಗೆ ಸರ್ಕಾರ ಕಠಿಣ ನಿಲುವು ತಳೆದು ಬೆಲೆ ಏರಿಕೆಗೆ ತಡೆಯುಂಟು ಮಾಡಿತು.

ಸರ್ಕಾರದ ಈ ಕಠಿಣ ನಿಲುವಿನಿಂದ ಪೂರೈಕೆ ಮತ್ತು ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಯಾಗಲಿಲ್ಲ. ಬದಲಾಗಿ ಆಹಾರ ಪದಾರ್ಥಗಳ ನಿಯಂತ್ರಣವನ್ನು ಎಷ್ಟು ಸಾಧ್ಯವೋ ಅಷ್ಟು ಬೇಗನೆ ತೆಗೆದು ಹಾಕಬೇಕೆಂದು ಜನರು ಒತ್ತಾಯಿಸಿದರು. ಹೀಗಾಗಿ ೧೯೪೭ರಲ್ಲಿ ಆಹಾರ ಪದಾರ್ಥಗಳ ಮೇಲೆ ವಿಧಿಸಿದ್ದ ಎಲ್ಲಾ ನಿರ್ಬಂಧಗಳನ್ನು ಸರ್ಕಾರ ಹಿಂದಕ್ಕೆ ಪಡೆಯಿತು. ಆದರೂ ಬೆಲೆಯು ಕಡಿಮೆಯಾಗಲಿಲ್ಲ. ೧೯೬೦ರಲ್ಲಿ ಜಿಲ್ಲೆಯಲ್ಲಿ ಅಕ್ಕಿ ಹಾಗೂ ರಾಗಿಯ ಬೆಲೆಯಲ್ಲಿ ಹೆಚ್ಚಳವುಂಟಾಯಿತು. ಅಕ್ಕಿ ಒಂದು ರೂಪಾಯಿಗೆ 1¼ ಸೇರು ಹಾಗೂ ರಾಗಿ 2½ ಸೇರು ದೊರೆಯುತ್ತಿತ್ತು. ಆದ್ದರಿಂದ ರಾಜ್ಯ ಸರ್ಕಾರ ನ್ಯಾಯ ಬೆಲೆ ಅಂಗಡಿಗಳನ್ನು ತೆರೆದು, ಮಧ್ಯಮ ದರ್ಜೆಯ ಅಕ್ಕಿಯನ್ನು ರಿಯಾಯಿತಿ ಬೆಲೆಯಲ್ಲಿ ಕೊಡಲು ನಿರ್ಧರಿಸಿತು. ಅಗತ್ಯ ವಸ್ತುಗಳ ಸಗಟು ಬೆಲೆಯಲ್ಲಿ ಆದ ಹೆಚ್ಚಳ ಸ್ವಾಭಾವಿಕವಾಗಿ ಚಿಲ್ಲರೆ ಬೆಲೆಯ ಮೇಲೆ ಪ್ರಭಾವ ಬೀರಿತು ಹಾಗೂ ಇದು ಇತರೆ ಆಹಾರ ಸಾಮಗ್ರಿಗಳ ಮೇಲೂ ಪರಿಣಾಮ ಬೀರಿತು. ಇದು ಬೆಲೆಯಲ್ಲಿ ಸ್ಥಿರತೆಯನ್ನು ಸಾಧಿಸಲು ನಾಂದಿಯಾಯಿತು. ಬ್ಯಾಂಕುಗಳು ಹಣದ ಉತ್ಪಾದನೆಯನ್ನು ನಿಲ್ಲಿಸುವಂತೆ ಸಲಹೆ ನೀಡಿದವು. ಕೇಂದ್ರ ಸರ್ಕಾರವು ಸಹ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಆಹಾರ ಪದಾರ್ಥಗಳನ್ನು ಮುಂಜಾಗ್ರತೆಯಾಗಿ ಸಂಗ್ರಹಿಸುವುದರ ಮೂಲಕ ಬೆಲೆಯಲ್ಲಿ ಸ್ಥಿರತೆಯನ್ನು ತರಬೇಕೆಂದು ಸೂಚಿಸಿತು.

೧೯೬೪ರ ಮಾರ್ಚ್ ಅಂತ್ಯಕ್ಕೆ ಆಹಾರ ಪದಾರ್ಥಗಳ ಬೆಲೆಯಲ್ಲಿ ಮತ್ತೆ ಹೆಚ್ಚಳ ಉಂಟಾಯಿತು. ಪರಿಣಾಮವಾಗಿ ಅನುಭೋಗಿಗಳಿಗೆ ಬಹಳ ತೊಂದರೆಯಾಯಿತು. ೧೯೬೪ನೇ ವರ್ಷದ ಕೊನೆಯ ತಿಂಗಳು ಹಾಗೂ ೧೯೬೫ ಮತ್ತು ೧೯೬೬ರ ವರೆಗೆ ಮಾರುಕಟ್ಟೆಯಲ್ಲಿದ್ದ ಅಕ್ಕಿ, ರಾಗಿ, ಖಾದ್ಯ ತೈಲ, ದ್ವಿದಳಧಾನ್ಯ, ಮೆಣಸಿನಕಾಯಿ ಮುಂತಾದವುಗಳ ಬೆಲೆ ಅನಿಯಮಿತವಾಗಿ ಹೆಚ್ಚಾಯಿತು. ಇದಕ್ಕಾಗಿ ರಾಜ್ಯ ಸರ್ಕಾರ ಅನುಭೋಗಿಗಳಿಗಾಗುತ್ತಿದ್ದ ತೊಂದರೆಗಳನ್ನು ನಿವಾರಿಸಲು ಕೆಲವು ಕ್ರಮಗಳನ್ನು ಕೈಗೊಂಡಿತು. ಸರ್ಕಾರ ಸಗಟು ಮತ್ತು ಚಿಲ್ಲರೆ ಬೆಲೆಯಲ್ಲಿ ಮಾರಾಟ ಮಾಡುವ ಆಹಾರ ಧಾನ್ಯಗಳನ್ನು ತನ್ನ ಆಧೀನಕ್ಕೆ ತೆಗೆದುಕೊಂಡು, ಖರೀದಿಸುವ ಹಾಗೂ ಮಾರಾಟ ಮಾಡುವ ಬೆಲೆಗಳನ್ನು ನಿಗದಿಪಡಿಸಿ ಆಗಾಗ್ಗೆ ಬೆಲೆಯ ನಿಗದೀಕರಣದ ಬಗ್ಗೆ ಪರಿಶೀಲಿಸಲಾರಂಭಿಸಿತು. ಅಲ್ಲದೆ, ಸಗಟು ಮಾರಾಟಗಾರರು ತಮ್ಮಲ್ಲಿರುವ ಆಹಾರ ಪದಾರ್ಥಗಳ ದಾಸ್ತಾನನ್ನು ನಿಯತಕಾಲಿಕವಾಗಿ ಪ್ರಕಟಪಡಿಸಬೇಕು. ಮಾರಾಟಗಾರರು ಆಹಾರ ಪದಾರ್ಥಗಳ ಬೆಲೆ ಪಟ್ಟಿಯನ್ನು ಪ್ರದರ್ಶಿಸಬೇಕು. "ಭಾರತದ ಆಹಾರ ನಿಗಮ"ವನ್ನು ಸ್ಥಾಪಿಸಿ ಅಗತ್ಯವಿರುವಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸುವುದರ ಜೊತೆಗೆ ಪಡಿತರ ಪದ್ಧತಿಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ವ್ಯವಸಾಯಗಾರರು ತಾವು ಬೆಳೆದ ಉತ್ಪನ್ನಗಳಲ್ಲಿ ಸ್ವಲ್ಪ ಭಾಗವನ್ನು ಲೆವಿಯ ರೂಪದಲ್ಲಿ ಸರ್ಕಾರಕ್ಕೆ ನೀಡಬೇಕು. ಹೀಗೆ ಸಂಗ್ರಹಿಸಿದ ಆಹಾರ ಪದಾರ್ಥಗಳನ್ನು ಬಳಕೆದಾರರ ಸಹಕಾರಿ ಸಂಘಗಳ ಮೂಲಕ ನ್ಯಾಯ ಬೆಲೆಗೆ ಒದಗಿಸಬೇಕು ಮುಂತಾದವು ಸರ್ಕಾರ ಕೈಗೊಂಡ ಇತರ ಪೂರಕ ಕ್ರಮಗಳಾಗಿದ್ದವು.

ಅನೌಪಚಾರಿಕ ಪಡಿತರ ಪದ್ಧತಿಯನ್ನು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಒಂದನೇ ಮೇ ೧೯೬೫ರಲ್ಲಿ ಜಾರಿಗೆ ತರಲಾಯಿತು. ಈ ಪ್ರದೇಶದಲ್ಲಿ ಪಡಿತರ ಪದ್ಧತಿಯಲ್ಲಿ ನಿಗದಿಪಡಿಸಿದ ಪ್ರಮಾಣದ ಆಹಾರ ಪದಾರ್ಥಗಳನ್ನು ನ್ಯಾಯಯುತವಾದ ಬೆಲೆಯಲ್ಲಿ ನೀಡಲು ಕುಟುಂಬದ ಯಜಮಾನನ ಹೆಸರಿನಲ್ಲಿ ಪಡಿತರ ಚೀಟಿಯನ್ನು ನೀಡಲಾಯಿತು. ನ್ಯಾಯಬೆಲೆ ಅಂಗಡಿ ಹಾಗೂ ಬಳಕೆದಾರರ ಸಹಕಾರಿ ಸಂಘಗಳ ಮೂಲಕ ನೀಡುವ ಆಹಾರ ಪದಾರ್ಥಗಳ ಹೆಸರು ಮತ್ತು ಪ್ರಮಾಣಗಳನ್ನು ಈ ಚೀಟಿಯಲ್ಲಿ ಸೂಚಿಸಲಾಯಿತು. ಆ ಪ್ರಕಾರ ಪ್ರತಿ ವ್ಯಕ್ತಿಗೆ ತಿಂಗಳಿಗೆ ನೀಡುವ ಆಹಾರ ಪದಾರ್ಥಗಳ ಪ್ರಮಾಣ ಕೆಳಗಿನಂತಿದ್ದಿತು. ಎರಡು ಕೆ.ಜಿ. ಗೋಧಿ, ಮೂರು ಕೆ.ಜಿ. ಅಕ್ಕಿ, ಮೂರು ಕೆ.ಜಿ. ಇತರೆ ಧಾನ್ಯಗಳು ಎಲ್ಲಾ ಸೇರಿ ಒಟ್ಟು ಎಂಟು ಕೆ.ಜಿ. ಆಹಾರ

ಧಾನ್ಯಗಳು. ಜಿಲ್ಲೆಯ ಇತರೆ ಭಾಗಗಳಲ್ಲಿ ಆಹಾರ ಪದಾರ್ಥಗಳು ದೊರೆಯುವ ಆಧಾರದ ಮೇಲೆ ಪ್ರತಿಯೊಬ್ಬ ವ್ಯಕ್ತಿಗೆ ತಿಂಗಳಿಗೆ ಐದು ಕೆ.ಜಿ.ಗಳಿಗಿಂತ ಹೆಚ್ಚಾಗದಂತೆ ಆಹಾರ ಪದಾರ್ಥಗಳನ್ನು ವಿತರಿಸಲಾಯಿತು. ಆದರೆ ಈ ವ್ಯವಸ್ಥೆ ತಾತ್ಕಾಲಿಕವಾಗಿತ್ತು.

**ಮುಕ್ತ ಮಾರುಕಟ್ಟೆಯಲ್ಲಿ ವಿವಿಧ ಆಹಾರ ಪದಾರ್ಥಗಳ ಬೆಲೆ ೧೯೬೬-೬೭ರಲ್ಲಿ ಕೆಳಕಂಡಂತಿತ್ತು.**

| ಪದಾರ್ಥಗಳು | ಒಂದು ಕಿಲೋಗ್ರಾಂ.ಗೆ ರೂ.ಗಳಲ್ಲಿ |
|---|---|
| **ಅಕ್ಕಿ ಉತ್ತಮ** | ೧.೫೦ |
| **ಅಕ್ಕಿ ಮಧ್ಯಮ** | ೧.೩೦ |
| **ಅಕ್ಕಿ ದಪ್ಪ** | ೧.೨೫ |
| **ಗೋಧಿ** | ೦.೬೫ |
| **ಜೋಳ** | ೦.೭೩ ರಿಂದ ರೂ. ೧.೩೦ |
| **ಮೈಲೊ** | ೦.೫೦ |
| **ಸಜ್ಜೆ** | ೦.೭೩ |
| **ರಾಗಿ** | ೧.೧೦ |
| **ಮೆಕ್ಕೆಜೋಳ** | ೧.೧೦ ರಿಂದ ೧.೧೫ |
| **ಬಾರ್ಲಿ** | ೧.೧೦ ರಿಂದ ೩.೦೦ |
| **ದ್ವಿದಳ ಧಾನ್ಯಗಳು** | ೧.೧೦ ರಿಂದ ೨.೨೫ |

ಜಿಲ್ಲೆಯಲ್ಲಿ ೧೯೮೦ ರಿಂದ ೨೦೦೩ರವರೆಗೆ ಅಗತ್ಯ ವಸ್ತುಗಳ ಸಗಟು ಹಾಗೂ ಚಿಲ್ಲರೆ ಬೆಲೆಯನ್ನು ಕೋಷ್ಟಕ ೮.೮ ಹಾಗೂ ೮.೯ರಲ್ಲಿ ನೀಡಿದೆ.

## ಕೂಲಿ

ಯಾವುದೇ ಪ್ರದೇಶದಲ್ಲಿ ಕೂಲಿಯ ಸೂಚ್ಯಂಕವು ಬೆಲೆಯ ಪ್ರವೃತ್ತಿಯೊಂದಿಗೆ ನಿಕಟವಾದ ಸಂಬಂಧ ಹೊಂದಿದೆ. ಪ್ರತಿಫಲವಾಗಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಳದಿಂದಾಗಿ ಕೂಲಿ ದರದಲ್ಲೂ ಹೆಚ್ಚಳ ಉಂಟಾಗುತ್ತದೆ. ಈ ಪ್ರವೃತ್ತಿ ಹಣದುಬ್ಬರ ಸ್ಥಿತಿಯನ್ನು ಸೂಚಿಸುತ್ತದೆ. ಕೂಲಿಯ ದರಗಳು ಆಯಾ ಪ್ರದೇಶದ ಆರ್ಥಿಕ ಸ್ಥಿತಿ-ಗತಿಗಳ ಆಧಾರದ ಮೇಲೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ದಿನಗೂಲಿಯು ೧೮೯೩ರಲ್ಲಿ ಕುಶಲಕರ್ಮಿಗಳಿಗೆ ೦-೧೦-೦ಆಣೆಯಿಂದ ರೂ. ೧-೦-೦ ಇದ್ದದ್ದು, ೧೯೨೩-೨೪ರಲ್ಲಿ ರೂ.೧-೦-೦ ರಿಂದ ರೂ. ೧-೮-೦ಗೆ ಹೆಚ್ಚಳಗೊಂಡಿದೆ. ಹಾಗೆಯೇ ೧೮೯೩ರಲ್ಲಿ ಕುಶಲರಲ್ಲದ ಕಾರ್ಮಿಕರಿಗೆ ಕೂಲಿ ದರವು ೦-೪-೦ ಆಣೆಯಿಂದ ೦-೬-೦ ಆಣೆಗೂ, ೧೯೨೩-೨೪ರಲ್ಲಿ ೦-೮-೦ ಆಣೆಯಿಂದ ೦-೧೨-೦ ಆಣೆಗೆ ಹೆಚ್ಚಳಗೊಂಡಿದೆ. ೧೮೯೩ ರಿಂದ ೧೯೧೬ರವರೆಗಿನ ೨೩ ವರ್ಷಗಳ ಅವಧಿಯಲ್ಲಿ ದಿನಗೂಲಿಯ ದರವು ಶೇ.೨೦ ರಷ್ಟು ಹೆಚ್ಚಾಯಿತು. ದಿನಗೂಲಿ ಕಾರ್ಮಿಕರ ಕೂಲಿಯು ದಿನಕ್ಕೆ ರೂ ೧.೫೦ ರಿಂದ ರೂ. ೨.೦೦ ಗಳಿಗೆ ಹೆಚ್ಚಳವಾಯಿತು. ಆದಾಗ್ಯೂ ಈ ವರ್ಗದ ಕೂಲಿಯು, ವ್ಯವಸಾಯ ಕಾರ್ಮಿಕರ ಕೂಲಿಗಿಂತ ಹೆಚ್ಚಾಗಿದ್ದಿತು. ಚಿಕ್ಕಬಳ್ಳಾಪುರ ಪಟ್ಟಣದಲ್ಲಿ ದಿನಗೂಲಿ ಕಾರ್ಮಿಕನೊಬ್ಬ ದಿನಕ್ಕೆ ರೂ. ೧.೫೦ ಪಡೆದರೆ, ಚಿನ್ನದ ಗಣಿ ಪ್ರದೇಶದಲ್ಲಿ ಆತ ದಿನಕ್ಕೆ ರೂ. ೨.೦೦ ಪಡೆಯುತ್ತಿದ್ದನು. ಬೇಡಿಕೆ ನಿಯಮದ ಪ್ರಕಾರ ಹೆಚ್ಚು ಜನಸಂಖ್ಯೆ ಇರುವ ಪ್ರದೇಶದಲ್ಲಿ ಶ್ರಮಕ್ಕೆ ಬೇಡಿಕೆ ಕಡಿಮೆಯಾಗುತ್ತದೆ. ಅದರಂತೆ ಕೂಲಿಯ ದರವೂ ಕಡಿಮೆಯಾಗುತ್ತದೆ. ಕಡಿಮೆ ಜನಸಂಖ್ಯೆಯಿದ್ದರೆ, ಶ್ರಮಕ್ಕೆ ಬೇಡಿಕೆ ಹೆಚ್ಚಾಗಿ ಕೂಲಿಯದರ ಹೆಚ್ಚಾಗುತ್ತದೆ.

## ಕೋಷ್ಟಕ ೮.೮
## ೧೯೮೦ ರಿಂದ ೨೦೦೩ ರವರೆಗೆ ಅಗತ್ಯ ವಸ್ತುಗಳ ಸಗಟು ಬೆಲೆಗಳ ವಿವರ.

(ಕ್ವಿಂಟಾಲ್‌ಗೆ)

| ಪದಾರ್ಥಗಳು | ವರ್ಷ | | | | | | | | | | | |
|---|---|---|---|---|---|---|---|---|---|---|---|---|
| | ೧೯೮೦ | ೧೯೯೦ | ೧೯೯೧ | ೧೯೯೨ | ೧೯೯೩ | ೧೯೯೪ | ೧೯೯೫ | ೧೯೯೬ | ೧೯೯೭ | ೨೦೦೦ | ೨೦೦೧ | ೨೦೦೩ |
| ಭತ್ತ (ಮಧ್ಯಮ) | ೧೨೦.೧೫ | – | – | – | – | – | ೩೮೫.೪೬ | ೪೦೪.೫೫ | ೪೭೭.೯೨ | ೬೧೨.೦೦ | ೫೪೮.೦೦ | ೫೮೬ |
| ಅಕ್ಕಿ (ಮಧ್ಯಮ) | ೨೩೬.೫೦ | ೫೧೧.೨೫ | ೫೫೫.೦೦ | ೭೯೫.೮೩ | ೭೩೨.೦೮ | ೮೮೨.೫೦ | ೯೮೧.೩೬ | ೧೦೦೭.೯೨ | ೧೨೧೩.೩೩ | ೧೩೯೧.೦೦ | ೧೩೧೧.೦೦ | ೧೯೯೪ |
| ಜೋಳ (ಬಿಳಿ) | ೧೧೧.೩೧ | – | – | – | – | – | ೩೦೦.೦೦ | ೫೫೦.೦೦ | ೬೩೭.೦೦ | – | – | – |
| ರಾಗಿ | ೧೨೫.೦೩ | ೨೨೯.೩೩ | ೨೧೪.೪೨ | ೩೨೩.೫೦ | ೩೦೬.೬೯ | ೩೧೩.೭೫ | ೩೮೨.೦೫ | ೩೮೮.೧೩ | ೪೬೨.೨೭ | ೬೭೬.೦೦ | ೫೩೮.೦೦ | ೫೧೧ |
| ಹುರಳಿ | ೧೪೭.೫೦ | ೩೨೫.೦೦ | – | ೩೩೭.೯೨ | ೩೨೦.೬೬ | ೪೦೫.೫೦ | ೪೬೦.೬೪ | ೪೮೨.೬೭ | ೭೫೪.೩೮ | ೯೨೦.೦೦ | ೧೧೦೫.೦೦ | – |
| ನೆಲಗಡಲೆ (ಕಡಲೆಕಾಯಿ) | ೩೦೨.೩೩ | – | ೯೪೫.೮೩ | ೯೯೩.೭೫ | ೯೧೨.೯೨ | ೧೦೪೫.೦೦ | ೧೦೭೦.೪೫ | ೧೧೧೬.೬೭ | ೧೯೦೦.೦೦ | – | ೧೩೦೦ | ೧೩೧೮ |
| ಒಣಮೆಣಸಿನ | | | | | | | | | | | | |
| ಕಾಯಿ | ೭೩೩.೨೫ | ೧೩೮೮.೦೦ | – | – | – | – | ೫೪೬೦.೦೦ | ೫೦೭೮.೫೭ | ೫೬೬೬.೬೭ | ೬೮೦೩.೦೦ | – | ೪೧೫೦ |
| ಈರುಳ್ಳಿ | ೮೬೮ | ೧೫೦.೭೧ | – | ೨೦೫.೨೧ | – | – | ೫೦೦.೦೦ | – | ೨೬೫.೦೦ | ೬೮೧.೦೦ | ೬೫೪.೦೦ | ೫೭೬ |
| ಆಲೂಗಡ್ಡೆ | ೧೪೭.೬೩ | ೨೨೯.೭೧ | – | – | – | – | – | – | – | ೬೪೭.೦೦ | ೫೭೦.೦೦ | ೭೭೮ |
| ತೆಂಗಿನಕಾಯಿ (ಸಾವಿರಕ್ಕೆ) | ೧೧೦೬.೦೫ | ೨೫೬೫.೯೧ | ೨೫೮೧.೨೫ | ೪೧೬೮.೭೫ | ೩೫೨೫.೦೦ | ೩೪೪೫.೦೦ | ೨೯೦೮.೩೩ | ೩೦೨೯.೫೫ | ೪೨೨೯.೧೭ | ೪೩೭೭.೦೦ | ೪೦೭೪.೦೦ | ೪೫೧೯ |
| ಗೋಧಿ (ಬಿಳಿ) | ೨೧೩.೧೮ | – | – | – | – | – | ೬೬೦.೦೦ | – | ೮೭೨.೫೦ | ೧೦೪೫.೦೦ | ೯೦೫.೦೦ | ೯೬೦ |
| ಹುಣಸೆಹಣ್ಣು | ೫೮೯.೦೫ | – | – | – | – | – | ೧೫೯೦.೦೦ | ೧೬೬೬.೬೭ | – | ೨೩೦೯.೦೦ | ೧೨೦೦.೦೦ | – |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

## ಕೋಷ್ಟಕ ೮.೯

### ೧೯೮೦, ೧೯೯೦ ರಿಂದ ೧೯೯೭ ಹಾಗೂ ೨೦೦೦ ರಿಂದ ೨೦೦೩ ರವರೆಗೆ ಅಗತ್ಯ ವಸ್ತುಗಳ ಚಿಲ್ಲರೆ ಬೆಲೆಗಳ ವಿವರ.

(ಕೆ.ಜಿ.ಗೆ)

| ಪದಾರ್ಥಗಳು | ವರ್ಷ | | | | | | | | | | | |
|---|---|---|---|---|---|---|---|---|---|---|---|---|
| | ೧೯೮೦ | ೧೯೯೦ | ೧೯೯೧ | ೧೯೯೨ | ೧೯೯೩ | ೧೯೯೪ | ೧೯೯೫ | ೧೯೯೬ | ೧೯೯೭ | ೨೦೦೦ | ೨೦೦೧ | ೨೦೦೩ |
| ಅಕ್ಕಿ (ಮಧ್ಯಮ) | ೨.೪೬ | ೫.೪೮ | ೫.೯೭ | ೮.೩೭ | ೭.೭೭ | ೯.೩೩ | ೧೦.೪೪ | ೧೦.೭೨ | ೧೩.೦೨ | ೧೫.೦೦ | ೧೪.೦೦ | ೧೫.೯೨ |
| ಜೋಳ (ಬಿಳಿ) | ೧.೧೧ | – | – | – | – | – | ೬.೮೫ | ೭.೮೫ | ೭.೨೫ | – | – | – |
| ರಾಗಿ | ೧.೩೩ | ೨.೬೨ | ೨.೫೬ | ೩.೬೯ | ೩.೬೩ | ೩.೩೩ | ೪.೪೮ | ೪.೪೯ | ೪.೮೭ | ೭.೦೦ | ೬.೦೦ | ೬.೦೫ |
| ಹುರುಳಿ | ೧.೫೬ | ೪.೬೪ | ೪.೦೨ | ೩.೯೦ | ೩.೮೮ | ೪.೫೦ | ೫.೯೯ | ೬.೧೮ | ೮.೬೪ | ೧೦.೦೦ | ೧೩.೦೦ | ೧೩.೮೮ |
| ನೆಲಗಡಲೆ (ಕಡಲೆಕಾಯಿ) | ೩.೩೨ | ೯.೬೭ | ೧೦.೮೯ | ೧೧.೭೨ | ೧೦.೭೮ | ೧೨.೩೦ | ೧೩.೫೦ | ೧೪.೨೧ | ೧೮.೨೦ | – | ೧೫.೦೦ | ೧೫.೦೮ |
| ಒಣಮೆಣಸಿನಕಾಯಿ | ೭.೮೩ | ೧೫.೩೫ | ೩೦.೫೪ | ೪೬.೯೬ | ೬೦.೩೩ | ೫೨.೨೦ | ೫೯.೯೫ | ೬೫.೫೮ | ೬೯.೭೫ | ೭೦.೦೦ | ೭೦.೦೦ | ೭೫.೭೫ |
| ಈರುಳ್ಳಿ | ೧.೦೧ | ೩.೧೧ | ೪.೧೦ | ೨.೪೫ | ೪.೩೭ | ೫.೧೯ | ೫.೩೧ | ೫.೫೮ | ೬.೧೮ | ೮.೦೦ | ೮.೦೦ | ೭.೭೫ |
| ಆಲೂಗಡ್ಡೆ | ೧.೬೮ | ೩.೨೩ | ೩.೭೭ | ೪.೨೮ | ೬.೨೬ | ೪.೩೫ | ೫.೭೮ | ೫.೮೮ | ೬.೦೫ | ೭.೦೦ | ೭.೦೦ | ೧೦.೫೮ |
| ತೆಂಗಿನಕಾಯಿ (ಒಂದಕ್ಕೆ) | ೧.೩೪ | ೩.೨೪ | ೩.೭೮ | ೫.೪೭ | ೪.೪೮ | ೪.೧೯ | ೪.೩೭ | ೪.೫೫ | ೫.೮೮ | ೫.೦೦ | ೬.೦೦ | ೫.೮೮ |
| ಗೋಧಿ (ಬಿಳಿ) | ೨.೧೪ | ೫.೧೯ | ೫.೭೩ | ೭.೬೮ | ೬.೪೩ | ೭.೪೧ | ೭.೭೬ | ೭.೭೨ | ೯.೭೩ | ೧೧.೦೦ | ೧೧.೦ | ೧೧.೫೪ |
| ಹುಣಸೆಹಣ್ಣು | ೬.೫೯ | ೧೦.೦೦ | ೯.೪೨ | ೯.೩೨ | ೧೨.೦೦ | ೧೩.೫೦ | ೧೭.೧೮ | ೧೭.೬೨ | – | ೨೪.೦೦ | ೧೯.೦೦ | ೧೮.೧೩ |
| ಹರಳು | – | – | – | ೯.೫೯ | – | – | ೧೫.೫೦ | ೧೫.೫೦ | – | – | – | – |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

ಮನೆಗೆಲಸ ಮಾಡುವವರಿಗೆ ಯಾವುದೇ ಕನಿಷ್ಠ ಕೂಲಿ ನಿಗದಿಗೊಂಡಿರಲಿಲ್ಲ. ಆದ್ದರಿಂದ ಇವರಿಗೆ ಲಭಿಸುವ ಕೂಲಿ ದರದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಿದ್ದಿತು. ಕೆಲವು ಭಾಗಗಳಲ್ಲಿ ದಿನಪೂರ್ತಿ ಮನೆಗೆಲಸ ಮಾಡುವ ಕೆಲಸಗಾರರು ಊಟದ ಜೊತೆಗೆ ಅಥವಾ ಊಟವಿಲ್ಲದೆ ಮಾಸಿಕ ಸಂಬಳ ಪಡೆಯುತ್ತಿದ್ದರು. ಇನ್ನೂ ಕೆಲವು ಪ್ರದೇಶಗಳಲ್ಲಿ ಅರೆಕಾಲಿಕ ಅಥವಾ ಗಂಟೆಯ ಆಧಾರದ ಮೇಲೆ ಮನೆಗೆಲಸ ಮಾಡುತ್ತಿದ್ದರು. ಆದರೆ, ಇವರು ಅಸಂಘಟಿತರಾದ ಕಾರಣ, ನಿಗದಿತ ದರದಲ್ಲಿ ಕೂಲಿಯನ್ನು ನಿಗದಿ ಪಡಿಸಲಾಗಿರಲಿಲ್ಲ. ಉದಾಹರಣೆಗೆ ಕೋಲಾರ ಚಿನ್ನದ ಗಣಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಯ ಮನೆಯಲ್ಲಿ ಕೆಲಸ ಮಾಡುವವರಿಗೆ ಮಾಸಿಕ ರೂ ೫೦.೦೦ ಸಿಗುತ್ತಿದ್ದರೆ. ಕೋಲಾರ ಪಟ್ಟಣದಲ್ಲಿನ ಅಧಿಕಾರಿಯ ಮನೆಯಲ್ಲಿ ಮಾಸಿಕ ರೂ. ೪೦.೦೦ ಕೂಲಿ ದೊರಕುತ್ತಿತ್ತು. ಅರೆಕಾಲಿಕ ಮನೆಗೆಲಸದ ಕಾರ್ಮಿಕರಿಗೆ ಮಾಸಿಕ ರೂ. ೧೫.೦೦ ರಿಂದ ೨೦.೦೦ ಸಿಗುತ್ತಿತ್ತು. ಹೀಗೆ ಮನೆಗೆಲಸಗಾರರು ಬೆಳಗಿನಿಂದ ಸಂಜೆಯವರಿಗೆ ದಿನಕ್ಕೆ ಮೂರು–ನಾಲ್ಕು ಮನೆಗಳಲ್ಲಿ ಕೆಲಸ ಮಾಡುತ್ತಿದ್ದರು. ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ನೆಲಒರೆಸುವುದು, ಮನೆ ಮುಂಭಾಗದ ತೋಟಕ್ಕೆ ನೀರು ಹಾಕುವುದು ಹಾಗೂ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುವ ಕೆಲಸ ಮಾಡುತ್ತಿದ್ದರು.

ಖಾಸಗಿ ಉದ್ಯಮಗಳಲ್ಲಿ ಕೆಲಸ ಮಾಡುವ ಕಛೇರಿ ಹುಡುಗರಿಗೆ ಮಾಸಿಕ ರೂ. ೬೦.೦೦ ರಿಂದ ೭೫.೦೦ ಸಿಗುತ್ತಿದ್ದರೆ, ಸರ್ಕಾರಿ ಕಛೇರಿಯಲ್ಲಿ ನಾಲ್ಕನೇ ದರ್ಜೆಯ ನೌಕರನ (೧೯೬೮) ಮೂಲ ವೇತನ ರೂ. ೫೦.೦೦ ಆಗಿದ್ದು, ಅದಕ್ಕೆ ತುಟ್ಟಿ ಭತ್ಯೆಯನ್ನು ನೀಡಲಾಗುತ್ತಿತ್ತು.

ಮೋಟಾರ್ ವಾಹನಗಳ ಚಾಲಕರು ನಗರ ಕೂಲಿ ಕಾರ್ಮಿಕರಲ್ಲಿ ಪ್ರಮುಖರಾಗಿದ್ದಾರೆ. ಉಲ್ಲೇಖಾರ್ಹವಾಗಿ ಬೆಳೆದ ನಗರ ಹಾಗೂ ಪಟ್ಟಣಗಳಾದ ಕೋಲಾರ, ರಾಬರ್ಟ್‌ಸನ್‌ಪೇಟೆ, ಚಿಂತಾಮಣಿ ಹಾಗೂ ಚಿಕ್ಕಬಳ್ಳಾಪುರಗಳಲ್ಲಿರುವ ವ್ಯಾಪಾರಸ್ಥರು, ಅಧಿಕಾರಿಗಳು ಆರ್ಥಿಕವಾಗಿ ಸಬಲರಾಗಿದ್ದು, ತಮ್ಮ ಕಾರುಗಳಿಗೆ ದಿನಗೂಲಿಯ ಆಧಾರದ ಮೇಲೆ ಚಾಲಕರನ್ನು ನೇಮಕ ಮಾಡಿಕೊಂಡಿದ್ದು, ಅವರಿಗೆ ತಿಂಗಳಿಗೆ ರೂ. ೭೫ ರಿಂದ ರೂ. ೮೫ ಕೂಲಿಯಾಗಿ ನೀಡುತ್ತಿದ್ದರು. ಈ ಜಿಲ್ಲೆಯ ಹಲವು ನಗರ ಪ್ರದೇಶಗಳ ಚಾಲಕರು ಇನ್ನೂ ಉತ್ತಮ ಸಂಬಳ ಹಾಗೂ ಸಮೃದ್ಧ ಜೀವನ ಬಯಸಿ ಬೆಂಗಳೂರಿನಂತಹ ಮಹಾನಗರಗಳಿಗೆ ವಲಸೆ ಬಂದರು. ಈ ವಲಸೆಗೆ ಚಾಲಕರ ಕೊರತೆಯೆ ಮುಖ್ಯ ಕಾರಣವಾಗಿತ್ತು. ಅಲ್ಲದೆ ನಗರ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆ ಅಧಿಕವಾಗಿದ್ದುದರಿಂದ, ಚಾಲಕರಿಗೆ ಹೆಚ್ಚಿನ ಬೇಡಿಕೆ ಇತ್ತು. ಭಾರಿ ವಾಹನಗಳಾದ ಲಾರಿ, ಹಾಗೂ ಟ್ರಕ್ಕುಗಳಿಗೆ ಚಾಲಕರ ಕೊರತೆಯಿದ್ದುದ್ದರಿಂದ, ಅವರಿಗೆ ಮಾಸಿಕ ರೂ ೧೦೦ ಅಥವಾ ರೂ. ೧೨೫, ಖಾಸಗಿ ಬಸ್ಸು ಚಾಲಕರಿಗೆ ಮಾಸಿಕ ರೂ. ೧೦೦ ರಿಂದ ರೂ. ೧೧೫ರ ಜೊತೆಗೆ ಹೆಚ್ಚುವರಿ ಭತ್ಯೆಯನ್ನು ನೀಡಲಾಗುತ್ತಿತ್ತು. ಕುಶಲ ಕೆಲಸಗಾರರಾದ ಮರಗೆಲಸದವರು, ಕಮ್ಮಾರರು, ದರ್ಜಿಗಳು, ಅಗಸರು (ಧೋಬಿ) ಹಾಗೂ ಕ್ಷೌರಿಕರು, ಕುಶಲರಲ್ಲದ ಕಾರ್ಮಿಕರಿಗಿಂತ ದುಪ್ಪಟ್ಟು ಸಂಪಾದಿಸುತ್ತಿದ್ದರು.

## ಗ್ರಾಮೀಣ ಪ್ರದೇಶದಲ್ಲಿ ಕೂಲಿ

ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ಹೆಚ್ಚಿ ಜನರು ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಮಳೆಯ ಅನಿಶ್ಚಿತತೆಯಿಂದ ರೈತರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಸಾರ್ವಜನಿಕ, ಖಾಸಗಿ, ಸರ್ಕಾರಿ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗ ಹುಡುಕುತ್ತಿದ್ದಾರೆ. ಇದು ಕೇವಲ ಈ ಜಿಲ್ಲೆಗೆ ಸಂಬಂಧಿಸಿದ ವಿಚಾರವಲ್ಲ. ಭಾರತದ ಉಳಿದ ರೈತವಾರಿ ಪ್ರದೇಶಗಳಲ್ಲೂ ಸಹ ಈ ಸ್ಥಿತಿ ಕಂಡು ಬರುತ್ತಿದೆ. ಭೂಮಿಯಿಂದ ಬರುವ ಇಳುವರಿಯು ಅವರ ಜೀವನದ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲದ ಪ್ರಯುಕ್ತ ಅವರು ಅನಿವಾರ್ಯವಾಗಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಬೇಕಿದೆ.

ಜಿಲ್ಲೆಯಲ್ಲಿ ೧೯೭೧ರ ಜನಗಣತಿಯಂತೆ ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿರುವವರ ಸಂಖ್ಯೆ ಶೇ. ೭೨.೭೩ ರಷ್ಟಿದ್ದು, ಉಳುಮೆ, ಬಿತ್ತನೆ, ನಾಟಿ ಮಾಡುವುದು, ಕಳೆ ತೆಗೆಯುವುದು, ನೀರಾವರಿ ಕೆಲಸ ಹಾಗೂ ಒಕ್ಕಣೆ ಮಾಡುವುದೇ ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ಜಮೀನ್ದಾರರು ಆರ್ಥಿಕವಾಗಿ ತೃಪ್ತಿಕರವಾದ ಜೀವನ ನಡೆಸುತ್ತಿದ್ದರು. ಹಳ್ಳಿಯಲ್ಲಿ ಮರಗೆಲಸದವರು, ಕಮ್ಮಾರ, ಬಾವಿ ತೋಡುವವರೂ, ನೂಲುವಿಕೆ ಹಾಗೂ ನೇಯ್ಗೆಯವರು ಇದ್ದರು. ಇವರು ದಿನಗೂಲಿಯ ಆಧಾರದ ಮೇಲೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಅವರಿಗೆ ವೇತನ ನೀಡುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿ

ನೀಡುವ ಕ್ರಮದಲ್ಲಿ ವ್ಯತ್ಯಾಸವಿತ್ತು. ಕೆಲವು ಕಡೆ ಪ್ರತಿದಿನ ಕೂಲಿ ನೀಡುತ್ತಿದ್ದರೆ, ಇನ್ನು ಕೆಲವು ಪ್ರದೇಶಗಳಲ್ಲಿ ತಿಂಗಳಿಗೊಮ್ಮೆ ಕೂಲಿ ನೀಡುತ್ತಿದ್ದರು. ಕೆಲವು ಪ್ರದೇಶಗಳಲ್ಲಿ ಹಣದ ರೂಪದಲ್ಲಿ ಕೂಲಿ ನೀಡುತ್ತಿದ್ದರೆ, ಮತ್ತೆ ಕೆಲವು ಪ್ರದೇಶಗಳಲ್ಲಿ ಹಣದ ಜೊತೆಗೆ ದಿನಸಿಯನ್ನು ಕೂಲಿ ರೂಪದಲ್ಲಿ ನೀಡುತ್ತಿದ್ದರು.

ಮಹಿಳಾ ಕಾರ್ಮಿಕರಿಗೆ ದಿನಕ್ಕೆ ರೂ ೧.೦೦ ರಿಂದ ರೂ. ೧.೫೦ ಪೈಸೆ ನೀಡುತ್ತಿದ್ದರು. ಬಿತ್ತನೆ ಕಾಲವನ್ನು ಬಿಟ್ಟರೆ ವ್ಯವಸಾಯ ಕಾರ್ಮಿಕರು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿದ್ದರು, ಪುರುಷರು ಕಠಿಣವಾದ ಕೆಲಸಗಳನ್ನು ಮಾಡುತ್ತಿದ್ದುದರಿಂದ ಮಹಿಳೆಯರಿಗಿಂತ ಹೆಚ್ಚು ಕೂಲಿ ಪಡೆಯುತ್ತಿದ್ದರು. ಇವರು ಎಂಟು ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದರು. ವ್ಯವಸಾಯ ಕಾರ್ಮಿಕರು ಅಸಂಘಟಿತರಾಗಿದ್ದರು. ಹಾಗಾಗಿ ಸರ್ಕಾರ ಕನಿಷ್ಠ ವೇತನ ನಿಗದಿಪಡಿಸಿತು. ೧೯೪೮ರ ಕನಿಷ್ಠ ವೇತನ ನಿಯಮದ ಪ್ರಕಾರ (ಕೇಂದ್ರದ ಕಾಯಿದೆ ೧೯೪೮) ರಾಜ್ಯ ಸರ್ಕಾರ ವ್ಯವಸಾಯ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ೧೯೬೫ ಹಾಗೂ ೧೯೭೮ರಲ್ಲಿದ್ದ ಕನಿಷ್ಠ ವೇತನವನ್ನು ಕೋಷ್ಟಕ ೮.೧೦ ರಲ್ಲಿ ನೀಡಿದೆ.

**ಕೋಷ್ಟಕ ೮.೧೦ ವಿವಿಧ ವ್ಯವಸಾಯ ಕಾರ್ಮಿಕರಿಗೆ ಕೂಲಿಯ ದರ**

(ಪ್ರತಿ ದಿನಕ್ಕೆ ರೂ. ಗಳಲ್ಲಿ)

| ಕೆಲಸದ ವಿಧಾನ | ಖುಷ್ಕಿ | | ನೀರಾವರಿ | | ಬಾಗಾಯ್ತು | |
|---|---|---|---|---|---|---|
| | ೧೯೬೫ | ೧೯೭೮ | ೧೯೬೫ | ೧೯೭೮ | ೧೯೬೫ | ೧೯೭೮ |
| **ವರ್ಗ– ಎ** | | | | | | |
| ಉಳುವುದು | | | | | | |
| ಅಗೆಯುವುದು | | | | | | |
| ಕುಂಟೆ ಹೊಡೆಯುವುದು | | | | | | |
| ಬೀಜ ಬಿತ್ತುವುದು | ೧.೨೫ | ೧.೮೫ | ೧.೫೦ | ೨.೨೦ | ೧.೭೫ | ೨.೨೫ |
| ಇಂಟರ್ ಕಲ್ಚರಿಂಗ್ | | | | | | |
| ನೀರಾಯಿಸುವುದು | | | | | | |
| ಬೇರು ತೆಗೆಯುವಿಕೆಗೆ | | | | | | |
| **ವರ್ಗ– ಬಿ** | | | | | | |
| ಗೊಬ್ಬರ ಹಾಕುವುದು | | | | | | |
| ನಾಟಿ ಮಾಡುವುದು | | | | | | |
| ಕಳೆ ತೆಗೆಯುವುದು | | | | | | |
| ಕೊಯ್ಯುವುದು | ೧.೦೦ | ೧.೪೫ | ೧.೧೨ | ೧.೬೫ | ೧.೩೭ | ೨.೦೦ |
| ಅ. ಕೊಯ್ಲು ಮಾಡುವಿಕೆ | | | | | | |
| ಆ) ಒಕ್ಕಣೆ | | | | | | |
| ಇ) ತೂರುವಿಕೆ | | | | | | |
| ಪ್ಯಾಕಿಂಗ್ (ಕಾಟನ್ ಆಗಿದ್ದರೆ) | | | | | | |
| **ವರ್ಗ– ಸಿ** | | | | | | |
| ದನ, ಕುರಿ ಹಾಗೂ ಮೇಕೆ ಮೇಯಿಸುವಿಕೆ | ೦.೫೦ | ೦.೭೫ | ೦.೫೦ | ೦.೭೫ | ೦.೫೦ | ೦.೭೫ |

೧೯೬೮ರಲ್ಲಿ ಎ–ವರ್ಗದಲ್ಲಿ ಖಾಯಂ ಕೆಲಸ ಮಾಡುವ ಯುವಕರಿಗೆ ಹಾಗೂ ಮಕ್ಕಳಿಗೆ ಮಾಸಿಕ ಕನಿಷ್ಠ ಕೂಲಿಯನ್ನು ನಿಗದಿಪಡಿಸಲಾಗಿತ್ತು. ಇವರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ ೨೨.೦೫ ಪೈಸೆ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ. ೪೪.೦೫ ಪೈಸೆಗಳನ್ನು ನೀಡುತ್ತಿದ್ದರು. 'ಬಿ' ವರ್ಗದ ಕೆಲಸಗಾರರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ. ೧೪.೭೦ ಪೈಸೆ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ ೨೨.೦೫ ನೀಡುತ್ತಿದ್ದರು. 'ಸಿ' ವರ್ಗದ ಕೆಲಸಗಾರರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ. ೭.೩೫ ಪೈಸೆ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ. ೨೨.೦೫ ಪೈಸೆ ನೀಡುತ್ತಿದ್ದರು.

ಕೃಷಿ ಕ್ಷೇತ್ರದ ಕಾರ್ಮಿಕರ ಕೂಲಿಯನ್ನು ಕೈಗಾರಿಕಾ ಕ್ಷೇತ್ರದ ಕೂಲಿಯೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಜಿಲ್ಲೆಯ ಚಿನ್ನದ ಗಣಿ ಪ್ರದೇಶಕ್ಕಿಂತ ಬೆಂಗಳೂರಿನ ನಗರದಲ್ಲಿ ಹೆಚ್ಚು ಕೂಲಿ ದೊರಕುತ್ತಿದ್ದುದರಿಂದ ಜನರು ಕೈಗಾರಿಕಾ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿನ ಕುಶಲ ಕೆಲಸಗಾರರು ಸಹ ನಿಧಾನಗತಿಯಲ್ಲಿ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದರು. ನಗರ ಪ್ರದೇಶದಲ್ಲಿನ ಕೂಲಿಗಿಂತ ಗ್ರಾಮೀಣ ಪ್ರದೇಶದಲ್ಲಿನ ಕೂಲಿ ಅತ್ಯಂತ ಕಡಿಮೆ ಇರುವುದೇ ವಲಸೆಗೆ ಪ್ರಮುಖ ಕಾರಣವಾಗಿತ್ತು. ೧೯೭೦ರಲ್ಲಿ ಕುಶಲ ಕಾರ್ಮಿಕರಾದ ಬಡಗಿಗೆ ರೂ ೫.೦೦, ಕಮ್ಮಾರರಿಗೆ ರೂ. ೪.೦೦ ಹಾಗೂ ಮೋಚಿಗೆ ರೂ ೪.೦೦ ಕೂಲಿ ಮಾತ್ರ ಇತ್ತು ಇದು ೨೦೦೧ರಲ್ಲಿ ಕ್ರಮವಾಗಿ ರೂ. ೧೦೦.೦೦, ರೂ. ೭೨.೦೦ ಹಾಗೂ ೫೦.೦೦ ಗಳಿಗೆ ಹೆಚ್ಚಳಗೊಂಡಿತ್ತು. ಈ ಹೆಚ್ಚಳ ಕುಶಲ ಕಾರ್ಮಿಕರುಗಳ ಜೀವನ ಮಟ್ಟದ ಸುಧಾರಣೆಯನ್ನು ಸೂಚಿಸುತ್ತದೆ. ೧೯೭೦ ರಿಂದ ೨೦೦೩ರವರೆಗೆ ಕುಶಲ ಕಾರ್ಮಿಕರು ಹಾಗೂ ಕುಶಲರಲ್ಲದ ಕಾರ್ಮಿಕರು ಪಡೆಯುತ್ತಿದ್ದ ಕೂಲಿಯ ವಿವರಗಳನ್ನು ಕೋಷ್ಟಕ ೮.೧೧ ರಲ್ಲಿ ನೀಡಿದೆ.

## ಉದ್ಯೋಗ

ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ವ್ಯವಸಾಯ ಹಾಗೂ ವ್ಯವಸಾಯೋದ್ಯಮ ಕ್ಷೇತ್ರಗಳು ಇಲ್ಲಿನ ಉದ್ಯೋಗದ ಪ್ರಮುಖ ಮೂಲಗಳಾಗಿವೆ. ಆದರೆ ಅರೆ ಉದ್ಯೋಗದ (ಅಂಡರ್ ಎಂಪ್ಲಾಯ್‌ಮೆಂಟ್) ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಪ್ರಚ್ಛನ್ನವಾಗಿದೆ. ಈ ಅರೆಉದ್ಯೋಗದಲ್ಲಿ ಎರಡು ಬಗೆ, ದೃಶ್ಯ ಮತ್ತು ಅದೃಶ್ಯ. ದೃಶ್ಯ ಅಥವಾ ಕಾಣುವಂತಹ ಅರೆಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುತಿಸಬಹುದು. ಆದರೆ, ಅದೃಶ್ಯ ಅಥವಾ ಕಾಣದೆ ಇರುವ ಅರೆಉದ್ಯೋಗವು ಕಡಿಮೆ ಆದಾಯ, ಕೌಶಲ್ಯದ ಪೂರ್ಣ ಉಪಯೋಗ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಿಯ ಉದ್ಯೋಗಗಳಲ್ಲಿ ಕಾಣಬಹುದು.

ಜಿಲ್ಲೆಯ ಒಟ್ಟು ಜನಸಂಖ್ಯೆ ೧೯೬೧ರಲ್ಲಿ ೧೨,೯೦,೧೪೪ ಇದ್ದು, ಇವರಲ್ಲಿ ಒಟ್ಟು ಕೆಲಸಗಾರರ ಪ್ರಮಾಣ ಶೇಕಡಾ ೪೭೧೩ ರಷ್ಟಿತ್ತು. ೧೯೭೧, ೧೯೮೧ ಮತ್ತು ೧೯೯೧ ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆ ಕ್ರಮವಾಗಿ ೧೫,೧೬,೬೪೬ (ಶೇ.೩೪.೯೧), ೧೯,೦೫,೪೯೨ (ಶೇ.೩೬.೧೧) ಮತ್ತು ೨೨,೧೬,೮೮೯ (ಶೇ.೩೯.೭೬) ರಷ್ಟಿರುವುದು ಅಂಕಿಅಂಶಗಳಿಂದ ತಿಳಿದುಬಂದಿದೆ. ಆವರಣದಲ್ಲಿ ಕೆಲಸಗಾರರ ಪ್ರಮಾಣವನ್ನು ನೀಡಿದೆ.

ಕೋಲಾರ ಜಿಲ್ಲೆಯಲ್ಲಿ ಹಿಂದೆ ಎರಡು ಉದ್ಯೋಗ ವಿನಿಮಯ ಕಛೇರಿಗಳಿದ್ದು, ಒಂದು ಕೋಲಾರದಲ್ಲಿ, ಮತ್ತೊಂದು ಬಂಗಾರಪೇಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಆದರೆ ಪ್ರಸ್ತುತ ಒಂದು ಉದ್ಯೋಗ ವಿನಿಮಯ ಕಛೇರಿ ಮಾತ್ರ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿದ್ದ ಚಾಲ್ತಿ ದಾಖಲೆ ಪ್ರಕಾರ (ಲೈವ್ ರಿಜಿಸ್ಟರ್) ನೋಂದಾವಣೆಗೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ೧೯೯೦–೯೧ರಲ್ಲಿ ೩೩,೧೮೭ ಪುರುಷರು, ೬,೨೩೮ ಮಹಿಳೆಯರು ಆಗಿದ್ದರೆ, ೯೪–೯೫ರಲ್ಲಿ ೫೬,೩೧೫ ಪುರುಷರು, ೧೩,೨೮೮ ಮಹಿಳೆಯರು ನೋಂದಾಯಿಸಿಕೊಂಡಿದ್ದರು. ೧೯೯೭–೯೮ ರಲ್ಲಿ ೬೦,೧೨೨ ಪುರುಷರು, ೧೪,೬೬೪ ಮಹಿಳೆಯರು ನೋಂದಾಯಿಸಿಕೊಂಡಿದ್ದರು. ಮೇಲಿನ ಅಂಕಿಅಂಶಗಳಿಂದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಗೋಚರವಾಗುತ್ತದೆ. ಕೋಷ್ಟಕ ೮.೧೨ ರಲ್ಲಿ ೧೯೯೦–೯೧ ರಿಂದ ೨೦೦೪–೨೦೦೫ ರವರೆಗೆ ಚಾಲ್ತಿ ದಾಖಲೆ ಪ್ರಕಾರ (ಲೈವ್ ರಿಜಿಸ್ಟರ್) ನೋಂದಣಿಗೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆಯನ್ನು ಕೋಷ್ಟಕ ೮.೧೨ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೧೧**

**೧೯೬೦ ರಿಂದ ೨೦೦೩ರ ವರೆಗೆ ಜಿಲ್ಲೆಯ ಕುಶಲಕರ್ಮಿಗಳು ಮತ್ತು ಕೃಷಿ ಕಾರ್ಮಿಕರ ದಿನಗೂಲಿಯ ವಿವರ**

(ರೂ.ಗಳಲ್ಲಿ)

| ವರ್ಷ | ಕುಶಲ ಕಾರ್ಮಿಕರು | | | ಕುಶಲರಲ್ಲದ ಕಾರ್ಮಿಕರು | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | ಕ್ಷೇತ್ರ ಕಾರ್ಮಿಕರು | | | | | | | | ಇತರೆ ಕೃಷಿ ಕಾರ್ಮಿಕರು | | | | | | | | ದನಕಾಯುವವರು | | | | | | | |
| | ಬಡಗಿ | ಕಮ್ಮಾರ | ಮೋಚಿ | ಗ | | | | ಹೆ | | | | ಗ | | | | ಹೆ | | | | ಗ | | | | ಹೆ | | | |
| ೧೯೬೦ | ೫.೦೦ | ೪.೦೦ | ೪.೦೦ | ೨೩೪ | | | | ೧೬೧ | | | | ೨೨೩ | | | | ೧೫೪ | | | | ೧೭೭ | | | | ೧೭೬ | | | |
| | | | | ಖುಷ್ಕಿ ಭೂಮಿ ಕಾರ್ಮಿಕರು | | | | | | | | ತರಿ ಭೂಮಿ ಕಾರ್ಮಿಕರು | | | | | | | | ಬಾಗಾಯ್ತು ಕಾರ್ಮಿಕರು | | | | | | | |
| | | | | ಎ | | ಬಿ | | ಸಿ | | ಡಿ | | ಎ | | ಬಿ | | ಸಿ | | ಡಿ | | ಎ | | ಬಿ | | ಸಿ | | ಡಿ | |
| | | | | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ |
| ೧೯೭೦ | ಇಲ್ಲ | ಇಲ್ಲ | ಇಲ್ಲ | ೫.೦೦ | ಇಲ್ಲ | ೫.೦೦ | ಇಲ್ಲ | ೩.೦೦ | ಇಲ್ಲ | ೪.೦೦ | ಇಲ್ಲ | ೫.೦೦ | ಇಲ್ಲ | ೫.೦೦ | ಇಲ್ಲ | ೩.೦೦ | ಇಲ್ಲ | – | – | ೫.೦೦ | ಇಲ್ಲ | ೫.೦೦ | ಇಲ್ಲ | ೩.೦೦ | ಇಲ್ಲ | – | – |
| ೧೯೮೦ | ೨೬.೦೦ | ೨೫.೦೦ | ೧೬.೦೦ | ೨೩.೦೦ | ಇಲ್ಲ | ೧೬.೦೦ | ಇಲ್ಲ | ೧೧.೦೦ | ಇಲ್ಲ | – | – | ೨೦.೦೦ | ಇಲ್ಲ | ೧೪.೦೦ | ಇಲ್ಲ | ೮.೦೦ | ಇಲ್ಲ | – | – | ೧೭.೦೦ | ಇಲ್ಲ | ೧೫.೦೦ | ಇಲ್ಲ | ೧೦.೦೦ | ಇಲ್ಲ | ೨೨.೦೦ | ಇಲ್ಲ |
| ೨೦೦೦ | ೯೩.೦೦ | ೮೪.೦೦ | ೭೮.೦೦ | ೭೧.೦೦ | ೩೩.೦೦ | ೪೨.೦೦ | ೩೫.೦೦ | ೩೦.೦೦ | ೩೦.೦೦ | – | – | ೪೮.೦೦ | ೩೫.೦೦ | ೪೪.೦೦ | ೩೬.೦೦ | ೩೦.೦೦ | ೩೦.೦೦ | – | – | ೪೯.೦೦ | ೩೩.೦೦ | ೪೮.೦೦ | ೩೬.೦೦ | – | – | – | – |
| ೨೦೦೧ | ೧೦೦.೦೦ | ೭೨.೦೦ | ೫೦.೦೦ | ೮೮.೦೦ | ೩೫.೦೦ | ೪೧.೦೦ | ೩೬.೦೦ | ೩೦.೦೦ | ೩೦.೦೦ | ೬೦.೦೦ | – | ೭೧.೦೦ | ೩೫.೦೦ | ೪೧.೦೦ | ೩೫.೦೦ | ೩೦.೦೦ | ೩೦.೦೦ | – | – | ೫೦.೦೦ | ೩೫.೦೦ | ೪೧.೦೦ | ೩೭.೦೦ | – | – | – | – |
| ೨೦೦೨ | ೭೫.೦೦ | ೬೦.೦೦ | ೬೦.೦೦ | ೧೫೦.೦೦ | ಇಲ್ಲ | ೭೫.೦೦ | ೫೦.೦೦ | ೩೫.೦೦ | ೩೩.೦೦ | – | – | ೮೮.೦೦ | ೩೮.೦೦ | ೪೦.೦೦ | ೩೭.೦೦ | ೩೪.೦೦ | ೩೩.೦೦ | – | – | ೫೦.೦೦ | ೩೯.೦೦ | ೪೦.೦೦ | ೩೫.೦೦ | – | – | – | – |
| ೨೦೦೩ | ೯೫.೪೨ | ೭೧.೬೭ | ೭೧.೬೭ | ೧೫೦.೦೦ | – | ೬೦.೦೦ | ೪೦.೦೦ | ೩೬.೬೭ | ೩೫.೦೦ | – | – | ೬೯.೪೪ | ೩೫.೬೩ | ೫೬.೬೭ | ೩೫.೫೪ | ೩೬.೨೫ | ೩೬.೬೭ | – | – | ೫೦.೦೦ | ೩೫.೬೩ | ೬೦.೦೦ | ೪೦.೦೦ | – | – | – | – |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

**ಕೋಷ್ಟಕ ೮.೧೨ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಚಾಲ್ತಿ ದಾಖಲೆ ಪ್ರಕಾರ (ಲೈವ್ ರಿಜಿಸ್ಟರ್) ನೋಂದಾಯಿಸಿಕೊಂಡ ಉದ್ಯೋಗಾರ್ಥಿಗಳ ವಿವರ**

| ವರ್ಷ | ಪುರುಷರು | | ಮಹಿಳೆಯರು | | ಒಟ್ಟು | |
|---|---|---|---|---|---|---|
| | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು |
| ೧೯೯೦–೯೧ | – | ೩೩೧೮೭ | – | ೬೨೩೮ | – | ೩೯೪೨೫ |
| ೧೯೯೧–೯೨ | – | ೩೩೩೩೨ | – | ೭೫೭೯ | – | ೪೦೯೧೧ |
| ೧೯೯೨–೯೩ | – | ೪೩೩೪೯ | – | ೯೪೪೧ | – | ೫೨೭೯೦ |
| ೧೯೯೩–೯೪ | – | ೪೮೬೭೨ | – | ೧೧೩೨೪ | – | ೫೯೯೯೬ |
| ೧೯೯೪–೯೫ | – | ೫೬೩೧೫ | – | ೧೩೨೮೮ | – | ೬೯೪೨೩ |
| ೧೯೯೫–೯೬ | – | ೫೫೦೮೮ | – | ೧೩೬೦೫ | – | ೬೮೬೯೩ |
| ೧೯೯೬–೯೭ | – | ೬೦೭೬೯ | – | ೧೪೯೯೨ | – | ೭೫೭೬೧ |
| ೧೯೯೭–೯೮ | – | ೬೦೧೨೨ | – | ೧೪೬೬೪ | – | ೭೪೭೮೬ |
| ೧೯೯೯–೦೦ | – | ೭೩೭೨೬ | – | ೨೧,೫೨೦ | – | ೭೫,೭೦೯ |
| ೨೦೦೨–೦೩ | – | ೭೪೦೧೫ | – | ೨೯೭೧ | – | ೯೫೯೮೬ |
| ೨೦೦೩–೦೪ | – | ೬೬೮೫೩ | – | ೨೧೦೩೮ | – | ೮೭೮೯೧ |
| ೨೦೦೪–೦೫ | – | ೭೦೫೬೦ | – | ೨೨೮೪೫ | – | ೯೩೪೦೫ |

ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಕೋಲಾರ

### ಉದ್ಯೋಗ ಸೇವೆಗಳು

ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರ, ಉದ್ಯೋಗಾರ್ಥಿಗಳ ಹೆಸರುಗಳನ್ನು ನೋಂದಣಿ ಮಾಡುವುದರಲ್ಲಿ ಮತ್ತು ವಿವಿಧ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುತ್ತಿವೆ. ತಮ್ಮಲ್ಲಿ ನೋಂದಣಿ ಹೊಂದಿದ ಉದ್ಯೋಗಾರ್ಥಿಗಳನ್ನು ಮತ್ತು ವಿವಿಧ ಸಂಸ್ಥೆಗಳು ಸೂಚಿಸಿದ ಹುದ್ದೆಗಳನ್ನು ವಿವಿಧ ರೀತಿಯಲ್ಲಿ ವರ್ಗೀಕರಣ ಮಾಡಲಾಗುತ್ತದೆ. ೧೯೫೯ರ ಖಾಲಿ ಹುದ್ದೆಗಳ ಕಡ್ಡಾಯ ನೋಂದಣಿ ಕಾಯಿದೆಯು ಸೂಚಿಸುವಂತೆ ೨೫ಕ್ಕೂ ಹೆಚ್ಚಿಗೆ ಕೆಲಸಗಾರರನ್ನು ನೇಮಿಸಿಕೊಳ್ಳುವ ಮತ್ತು ಮಾಸಿಕ ರೂ ೬೦ ಮತ್ತು ಮೇಲ್ಪಟ್ಟು ಸಂಬಳದ ಉದ್ಯೋಗ ಒದಗಿಸುವ ಎಲ್ಲಾ ಸಂಸ್ಥೆಗಳು ತಮ್ಮಲ್ಲಿರುವ ಖಾಲಿ ಹುದ್ದೆಗಳ ಬಗ್ಗೆ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಮಾಹಿತಿಯನ್ನು ಸಲ್ಲಿಸಬೇಕಾಗುತ್ತದೆ. ಆದರೆ ಉದ್ಯೋಗ ವಿನಿಮಯ ಕೇಂದ್ರಗಳು ತಯಾರಿಸಿದ ಪಟ್ಟಿಯಿಂದಲೇ ಹುದ್ದೆಗಳನ್ನು ತುಂಬಬೇಕೆಂಬ ಯಾವ ನಿಬಂಧನೆಗೂ ಸಂಸ್ಥೆಗಳು ಒಳಪಡುವುದಿಲ್ಲ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂಥ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ತುಂಬಬೇಕೆಂದು ಸೂಚಿಸಿವೆ. ೧೯೮೦–೮೧ ರಿಂದ ೨೦೦೪–೨೦೦೫ರ ವರೆವಿಗೆ ಆಯ್ದ ವರ್ಷಗಳಲ್ಲಿ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ನೋಂದಣಿಗೊಂಡವರ ಸಂಖ್ಯೆಯನ್ನು ಕೋಷ್ಟಕ ೮.೧೩ ರಲ್ಲಿ ನೀಡಲಾಗಿದೆ.

## ಕೋಷ್ಟಕ ೮.೧೩

## ೧೯೮೦–೮೧ ರಿಂದ ೨೦೦೩–೨೦೦೪ರ ವರೆಗೆ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ಆಯ್ದ ವರ್ಷಗಳಲ್ಲಿ ನೋಂದಾಯಿಸಿಕೊಂಡವರ ಸಂಖ್ಯೆಯ ವಿವರ

| ಉದ್ಯೋಗ ಪ್ರಭೇದ | ನೋಂದಣಿಗೊಂಡ ವರ್ಷ ೧೯೮೦–೧೯೮೧ | | ೧೯೮೫–೧೯೮೬ | | ೧೯೯೦–೧೯೯೧ | | ೧೯೯೫–೧೯೯೬ | | ೧೯೯೯–೨೦೦೦ | | ೨೦೦೨–೨೦೦೩ | | ೨೦೦೪–೦೫ | |
|---|---|---|---|---|---|---|---|---|---|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ಪದವೀಧರರು | | | | | | | | | | | | | | |
| ಕಲೆ | ೧೨೦ | ೩೨ | ೧೯ | ೩೬ | ೧೨೦ | ೪೮ | ೧೫೫ | ೫೫ | ೧೨೮ | ೮೧ | ೧೨೮ | ೬೬ | ೧೩೧ | ೧೧೮ |
| ವಿಜ್ಞಾನ | ೫೨ | ೨೬ | ೪೫ | ೨೮ | ೬೦ | ೩೨ | ೬೨ | ೪೨ | ೬೯ | ೫೨ | ೬೬ | ೪೫ | ೧೯ | ೨೧ |
| ವಾಣಿಜ್ಯ | ೩೯ | ೧೪ | ೩೮ | ೧೨ | ೫೫ | ೨೦ | ೩೮ | ೨೧ | ೪೩ | ೨೬ | ೪೧ | ೨೦ | ೩೯ | ೨೮ |
| ಬಿ.ಎಡ್. | – | – | – | – | – | – | ೧೪೧ | ೭೩ | ೭೫ | ೬೮ | ೧೧೦ | ೮೨ | ೩೫ | ೩೪ |
| ಬಿ.ಪಿ.ಎಡ್. | – | – | – | – | – | – | ೧ | – | ೨ | – | – | – | – | – |
| ಡಿಪ್ಲೋಮಾ ದಾರರು | ೧೪೧ | ೨ | ೧೩೨ | ೩ | ೧೩೦ | ೬ | ೧೪೨ | ೧೩ | ೧೧೬ | ೮ | ೧೩೨ | ೧೨ | ೬೫ | ೧೫ |
| ಐ.ಟಿ.ಐ. ಉತ್ತೀರ್ಣ | ೧೯೪ | ೪ | ೧೯೨ | ೨ | ೧೨೪ | ೨ | ೫೨೯ | ೬ | ೮೫೪ | ೨೬ | ೬೪೪ | ೩೦ | ೪೯೧ | ೫೮ |
| ಬೆರಳಚ್ಚುಗಾರರು | ೧೧೫ | ೧೩೦ | ೧೧೨ | ೧೪೨ | ೧೦೪ | ೧೯೮ | ೧೦೮ | ೨೦೬ | ೧೨೬ | ೨೪ | ೫೯ | ೧೩೩ | ೧೬ | ೪೩ |
| ಶೀಘ್ರಲಿಪಿಗಾರರು | ೮ | ೧೬ | ೧೦ | ೧೫ | ೧೨ | ೨೧ | ೧೦ | ೨೬ | ೮ | ೬ | ೩ | ೮ | – | ೨ |
| ಪ್ರಾಥಮಿಕ ಶಾಲಾ ಶಿಕ್ಷಕರು | ೪೯೫ | ೩೯೨ | ೫೮೦ | ೪೨೨ | ೬೩೦ | ೩೮೦ | ೬೧೯ | ೫೫೩ | ೬೧೨ | ೪೯೨ | ೩೮೬ | ೩೮೯ | ೫೨ | ೮೪ |
| ನರ್ಸರಿ ಶಿಕ್ಷಕರು | – | ೭೯ | – | ೧೧೦ | – | ೧೧೨ | – | ೧೩೮ | – | ೪೪ | – | ೨೧ | – | ೧ |
| ದೈಹಿಕ ಶಿಕ್ಷಕರು | ೪ | ೨ | ೩೨ | ೨ | ೪೫ | ೩ | ೬೫ | ೮ | ೩೫ | ೬ | ೩೮ | ೮ | ೫ | ೧ |
| ನಿರ್ವಾಹಕರು | – | – | ೧೨೦ | – | ೭೮೨ | – | ೭೫೨ | – | ೧,೧೩೪ | ೩೯೨ | ೬೬೫ | ೧೦೮ | ೧೯೪ | ೧೦೬ |
| ಎಸ್.ಎಸ್.ಎಲ್.ಸಿ ಉತ್ತೀರ್ಣ | ೨,೯೧೨ | ೧,೦೦೨ | ೩,೮೧೦ | ೧,೦೧೧ | ೩,೯೮೦ | ೧,೦೮೨ | ೪,೧೬೬ | ೧,೦೫೩ | ೪,೩೪೬ | ೧,೩೫೬ | ೫,೩೦೯ | ೧,೨೩೧ | ೧,೮೧೬ | ೮೫೩ |
| ಪಿ.ಯು.ಸಿ. ಉತ್ತೀರ್ಣ | ೧,೫೬೩ | ೫೨೨ | ೧,೬೧೨ | ೫೮೨ | ೧,೬೧೧ | ೬೬೫ | ೧,೬೦೬ | ೬೫೬ | ೧,೧೩೫ | ೬೩೯ | ೧,೨೨೬ | ೫೯೬ | ೭೬೬ | ೬೧೫ |
| ಮಾಧ್ಯಮಿಕ ಪರೀಕ್ಷೆ ಉತ್ತೀರ್ಣ | ೪೯೮ | ೬೫ | ೫೯೦ | ೬೦ | ೬೪೦ | ೮೦ | ೬೪೫ | ೭೩ | ೧,೦೦೬ | ೩೩ | ೬೩೬ | ೧೩೩ | ೧೩೫ | ೭೦ |
| ಅಕ್ಷರಸ್ಥರು | ೬೦ | ೧೨ | ೫೯ | ೧೦ | ೫೦ | ೧೨ | ೬೬ | ೨೪ | ೬೮ | ೩೯ | ೫೨ | ೨೬ | ೩೧ | ೯ |
| ಅನಕ್ಷರಸ್ಥರು | ೧ | ೩ | ೧೦ | ೨ | ೯ | ೩ | ೯ | ೧೫ | ೫ | ೩ | ೨ | ೪ | ೫ | ೨ |

ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಕೋಲಾರ

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೮೦–೮೧ ರಿಂದ ೨೦೦೪–೨೦೦೫ರವರೆಗೆ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಹುದ್ದೆಗಳು ಹಾಗೂ ಭರ್ತಿಗೊಂಡ ಹುದ್ದೆಗಳ ವಿವರವನ್ನು ಕೋಷ್ಟಕ ೮.೧೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೪**

| ವರ್ಷ | ನೋಂದಾಯಿಸಿ–ಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೧೯೮೦–೮೧ | – | ೧೨೮೪ | ೬೨೬ | ೧೯೮ |
| ೧೯೮೫–೮೬ | – | ೫೩೬ | ೮೩೨ | ೧೦೦೨ |
| ೧೯೯೦–೯೧ | – | ೧೧೩೮ | ೧೧೫೧ | ೯೮ |
| ೧೯೯೫–೯೬ | ೬೫೨೯ | ೧೫೨೬ | ೧೫೦೫ | ೧೦೬೦ |
| ೧೯೯೯–೨೦೦೦ | ೯೫೨೪೬ | ೪೦೧ | ೮೯೯ | ೫೬೨ |
| ೨೦೦೨–೨೦೦೩ | ೯೫೯೮೬ | ೧೪೮ | ೧೫೨ | ೫೫೮ |
| ೨೦೦೩–೨೦೦೪ | – | ೩೫ | ೮೮ | ೫೪೮ |
| ೨೦೦೪–೨೦೦೫ | ೨೦೨೬ | ೩೫ | ೮೯ | ೫೪೮ |

ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಕೋಲಾರ,

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೮೦–೮೧ ರಿಂದ ೨೦೦೪–೨೦೦೫ರ ವರೆಗೆ ನೋಂದಾಯಿಸಿಕೊಂಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಹಾಗೂ ಉದ್ಯೋಗ ಪಡೆದವರ ಸಂಖ್ಯೆಯ ವಿವರವನ್ನು ಮುಂದಿನ ಕೋಷ್ಟಕ ೮.೧೫ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೫**

| ವರ್ಷ | ನೋಂದಾಯಿಸಿಕೊಂಡವರು | | ಉದ್ಯೋಗ ಪಡೆದವರು | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ೧೯೮೦–೮೧ | ೨೯೮ | ೪೫೩ | ೨೧ | ೯ |
| ೧೯೮೫–೮೬ | ೨೧೧ | ೪೯೩ | ೨೪೬ | ೧೫೨ |
| ೧೯೯೦–೯೧ | ೨೯೧ | ೫೮೪ | ೩೨೪ | ೧೦ |
| ೧೯೯೫–೯೬ | ೨೦೫೧ | ೫೫೩ | ೪೧೨ | ೨೦೧ |
| ೧೯೯೯–೨೦೦೦ | ೨೯೪ | ೫೬೮ | ೯೨ | ೩ |
| ೨೦೦೨–೨೦೦೩ | ೨೪೩೮ | ೪೮೫ | ೧೨ | ೬ |
| ೨೦೦೩–೨೦೦೪ | ೧೯೨೮ | ೩೮೨ | ೧೨ | ೧ |
| ೨೦೦೪–೨೦೦೫ | ೨೪೩೮ | ೪೮೫ | ೩ | ೧ |

ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಕೋಲಾರ

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ನೆರವಿನೊಂದಿಗೆ ಕೇಂದ್ರ ಸರ್ಕಾರ, ಅರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅರೆರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡ ವಿವರವನ್ನು ಕೋಷ್ಟಕ ೮.೧೬ ರಲ್ಲಿ ನೀಡಲಾಗಿದೆ.

## ಕೋಷ್ಟಕ ೮.೧೬

| ವರ್ಷಗಳು | ಸೇವೆಯನ್ನು ಉಪಯೋಗಿಸಿಕೊಂಡವರ ಸಂಖ್ಯೆ | | | | | | | ಭರ್ತಿಗೊಂಡವರ ಸಂಖ್ಯೆ | | | | | | |
|---|---|---|---|---|---|---|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೮೦-೮೧ | ೧೩ | ೪೦ | ೫೨ | ೩ | ೫ | ೧೨ | ೧೨೫ | ೧೬ | ೪೫ | ೧೬೮ | ೩ | ೯ | ೨೫ | ೨೬೬ |
| ೧೯೮೫-೮೬ | ೧೧ | ೧೪ | ೨೪ | ೩ | ೮ | ೧೬ | ೭೬ | ೪೩ | ೨೨ | ೬೦ | ೧೬ | ೪೧ | ೨೦ | ೨೦೨ |
| ೧೯೯೦-೯೧ | ೧೬ | ೧೩ | ೧೩ | ೨ | ೨ | ೭ | ೫೩ | ೪೨ | ೬೭೫ | ೪೦೧ | ೧೦ | ೪ | ೧೯ | ೧೧೫೧ |
| ೧೯೯೫-೯೬ | ೧೫ | ೧೦ | ೨೦ | ೪ | – | ೨ | ೫೧ | ೧೦ | ೧೯ | ೧,೨೧೭ | ೨೫೩ | ೨ | ೪ | ೧೫೦೫ |
| ೧೯೯೯-೨೦೦೦ | ೧೦ | ೬ | ೯ | ೨ | – | ೪ | ೩೧ | ೭ | ೨೩ | ೬೧ | ೧೨೫ | ೧ | ೨ | ೨೧೯ |
| ೨೦೦೨-೨೦೦೩ | ೯ | ೪ | ೨ | ೧ | – | ೧ | ೧೬ | ೨೦ | ೧೪ | ೧೦೨ | ೧೨ | – | ೪ | ೧೫೨ |
| ೨೦೦೩-೨೦೦೪ | ೭ | ೮ | ೩ | – | – | ೪ | ೧೮ | ೨ | ೪ | ೧೩ | – | – | – | ೧೯ |
| ೨೦೦೪-೨೦೦೫ | ೩ | ೨ | ೨ | – | – | ೧ | ೮ | ೧ | ೩ | ೪ | ೧ | – | – | ೯ |

ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಕೋಲಾರ

೧೯೮೦-೮೧ರಲ್ಲಿ ಜಿಲ್ಲೆಯ ನಾಲ್ಕು ವಿವಿಧ ವಿಷಯಗಳ ಸ್ನಾತಕೋತ್ತರ ಪದವೀಧರರು (ಕಲೆ, ವಿಜ್ಞಾನ ವಾಣಿಜ್ಯ ಹಾಗೂ ಶಿಕ್ಷಣ), ಇಂಜನೀಯರಿಂಗ್ ಹಾಗೂ ವೈದ್ಯಕೀಯ ಪದವೀಧರರು ಬೆಂಗಳೂರಿನಲ್ಲಿರುವ ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿದ್ದರು. ಜಿಲ್ಲೆಯಲ್ಲಿ ೧೯೮೦-೮೧ರಲ್ಲಿ ಕೇವಲ ಏಳು ಮಂದಿ ವಿವಿಧ ಸ್ನಾತಕೋತ್ತರ ಪದವೀಧರರು ಉದ್ಯೋಗ ಬಯಸಿ ನೋಂದಾಯಿಸಿಕೊಂಡಿದ್ದರು. ಇವರ ಸಂಖ್ಯೆ ೧೯೯೦-೯೧ ರಲ್ಲಿ ೨೩ ಕ್ಕೆ ಹೆಚ್ಚಳಗೊಂಡಿತು. ೨೦೦೩-೨೦೦೪ರಲ್ಲಿ ಇವರ ಸಂಖ್ಯೆ ೨೯೫ ಕ್ಕೆ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೭ ಅನ್ನು ನೋಡಿ.

## ಕೋಷ್ಟಕ ೮.೧೭ ೧೯೮೦-೮೧ ರಿಂದ ೨೦೦೨-೨೦೦೩ರ ವರೆಗೆ ಜಿಲ್ಲೆಯಲ್ಲಿ ಸ್ನಾತಕೋತ್ತರ ಪದವೀಧರರ ವಿವರಗಳು

| ಕ್ರ. ಸಂ | ವಿದ್ಯಾರ್ಹತೆ | ವರ್ಷಗಳು | | | | | | | | | | | |
|---|---|---|---|---|---|---|---|---|---|---|---|---|---|
| | | ೧೯೮೦-೮೧ | | ೧೯೮೫-೮೬ | | ೧೯೯೦-೯೧ | | ೧೯೯೫-೯೬ | | ೨೦೦೦-೦೧ | | ೨೦೦೩-೦೪ | |
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| | | | | | | ಸ್ನಾತಕೋತ್ತರ | | | | | | | |
| ೧ | ಕಲೆ | ೪ | ೧ | ೧ | – | ೩ | – | ೧೫ | ೮ | ೧೫೨ | ೪೮ | ೧೩ | ೯ |
| ೨ | ವಿಜ್ಞಾನ | ೧ | – | ೨ | – | ೩ | – | ೮ | ೫ | ೪೫ | ೨೫ | ೧೨ | ೭ |
| ೩ | ವಾಣಿಜ್ಯ | ೧ | – | ೧ | – | – | – | – | ೨ | ೫೧ | ೯ | ೪ | ೨ |
| | | | | | | ಇಂಜನೀಯರ್ | | | | | | | |
| ೪ | ಸಿವಿಲ್ | – | – | – | – | ೮ | – | ೮ | – | ೫೫ | ೧೫ | ೫ | ೧ |
| ೫ | ಮೆಕಾನಿಕಲ್ | – | – | – | – | ೧ | – | ೭ | – | ೧೦ | ೬೧ | ೪ | ೨೫ |
| ೬ | ಎಲೆಕ್ಟ್ರಿಕಲ್ | – | – | – | – | ೧ | – | ೯ | ೩ | ೬೦ | ೧೪ | ೧೬ | ೪ |
| ೭ | ಇತರೆ | – | – | – | – | – | – | ೭ | ೩ | ೧೦೬ | ೫೦ | ೪೫ | ೯ |
| ೮ | ವೈದ್ಯಕೀಯ | – | – | – | – | ೧ | – | – | – | ೪೦ | ೧೬ | ೫ | ೧ |
| ೯ | ವ್ಯವಸಾಯ | – | – | – | – | ೨ | – | ೩ | ೧ | ೧೩ | ೧೦ | ೪ | ೪ |

ಮುಂದುವರಿದಿದೆ.............

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
|---|---|---|---|---|---|---|---|---|---|---|---|---|---|
| ೧೦ | ಶಿಕ್ಷಣ | – | – | – | – | ೧೩ | – | – | – | ೧೮ | ೧೪ | ೧೨ | – |
| ೧೧ | ವ್ಯಾಯಾಮ ಶಿಕ್ಷಣ | – | – | – | – | – | – | – | – | ೧೫ | ೧೨ | ೧೧ | – |
| ೧೨ | ಪಶು ವೈದ್ಯಕೀಯ | – | – | – | – | – | – | – | – | ೧೦ | ೧೨ | ೧೨ | – |
| ೧೩ | ಇತರೆ ವೃತ್ತಿ ಪದವೀಧರರು | – | – | – | – | – | – | ೧೭ | ೧೩ | ೯೦ | ೨೫ | ೧೪ | ೧೧ |
| | ಒಟ್ಟು | ೧೭ | ೧೧ | ೧೪ | – | ೨೩ | – | ೬೩ | ೨೫ | ೯೧೫ | ೩೩೩ | ೧೯೩ | ೬೬ |

ಆಧಾರ: ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ, ಬೆಂಗಳೂರು.

## ಭೂ ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ಜಿಲ್ಲೆಯು ೮೨೨೩ ಚದರ ಕಿ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ರಾಜ್ಯದಲ್ಲಿ ಭೌಗೋಳಿಕವಾಗಿ ೧೩ನೇ ಸ್ಥಾನವನ್ನು ಪಡೆದುಕೊಂಡಿದೆ. ಇದರಲ್ಲಿ ಭೂ ಬಳಕೆ ಈ ರೀತಿಯಿದೆ. ಅರಣ್ಯ ಭೂಮಿ ೧೯೭೦–೭೧, ೧೯೮೦–೮೧, ೧೯೯೦–೯೧ ಮತ್ತು ೧೯೯೯–೨೦೦೦ದಲ್ಲಿ ಕ್ರಮವಾಗಿ ಶೇ. ೯.೪೩, ಶೇ. ೯.೦೨ , ಶೇ. ೯.೦೨ ಮತ್ತು ೯.೦೨ ರಷ್ಟಿತ್ತು. ಈ ಅಂಕಿಅಂಶಗಳಿಂದ ೧೯೭೦–೭೧ ರಿಂದ ೧೯೯೯–೨೦೦೦ರವರೆಗೆ ಅರಣ್ಯ ಪ್ರದೇಶವು ಇಳಿಮುಖವಾಗಿರುವುದು ಕಂಡು ಬರುತ್ತದೆ.

ಮೇಲಿನ ಅವಧಿಗಳಲ್ಲಿ ಕ್ರಮವಾಗಿ ವ್ಯವಸಾಯೇತರ ಭೂಮಿ ಶೇ. ೮.೩೩, ಶೇ. ೯.೨೩, ಶೇ. ೯.೪೬ ಮತ್ತು ಶೇ. ೯.೪೭ ಆಗಿದ್ದರೆ, ಬಂಜರು ಭೂಮಿ ಮತ್ತು ಸಾಗುವಳಿ ಮಾಡದಿರುವ ಭೂಮಿ ಶೇ ೭.೩೫, ಶೇ. ೮.೨೨, ಶೇ. ೮.೧೧ ಮತ್ತು ಶೇ.೮.೧೦ ಆಗಿತ್ತು. ಖಾಯಂ ಬಂಜರು ಮತ್ತು ಗೋಮಾಳ ಶೇ. ೨೫.೮೨, ಶೇ ೧೮.೯೭, ಶೇ. ೧೫.೧೦, ಮತ್ತು ಶೇ.೧೪.೨೦ ರಷ್ಟು, ವೃಕ್ಷಗಳು ಮತ್ತು ತೋಪುಗಳು ಶೇ. ೧.೬೧, ಶೇ. ೧.೭೩, ಶೇ.೧.೮೭ ಮತ್ತು ಶೇ.೧.೭೩ರಷ್ಟು, ಸಾಗುವಳಿ ಯೋಗ್ಯವಾದ ಬಂಜರು ಭೂಮಿ ಶೇ. ೧.೯೧, ಶೇ. ೨.೨೩, ಶೇ.೧.೬೯ ಮತ್ತು ಶೇ.೧.೬೧ರಷ್ಟು, ಇತರೆ ಬೀಳುಭೂಮಿ ಶೇ.೨.೨೬, ಶೇ.೧.೯೭, ಶೇ. ೧.೬೪ ಮತ್ತು ಶೇ. ೧.೨೯ ರಷ್ಟು, ಚಾಲ್ತಿ ಬೀಳೂಭೂಮಿ ಶೇ. ೫.೭೦, ಶೇ. ೯.೩೨, ಶೇ.೫.೨೭, ಮತ್ತು ೧೧.೩೧ ರಷ್ಟು, ನಿವ್ವಳ ಬಿತ್ತನೆಯಾದ ಪ್ರದೇಶ ಶೇ. ೩೮.೫೮, ಶೇ.೩೯.೩೨, ಶೇ. ೪೭.೮೩ ಮತ್ತು ೩೧.೬೦ ರಷ್ಟಿತ್ತು.

ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶ ಶೇ. ೮.೩೩, ಶೇ.೦.೬೧, ಶೇ.೫.೧೪ ಹಾಗೂ ಶೇ. ೫.೪೭ರಷ್ಟು, ನಿವ್ವಳ ಬಿತ್ತನೆಯಾದ ಪ್ರದೇಶದಲ್ಲಿ ನಿವ್ವಳ ನೀರಾವಳಿಯಾದ ಪ್ರದೇಶ. ಶೇ. ೨೪.೯, ಶೇ.೧೮.೬, ಶೇ. ೨೩.೯ ಹಾಗೂ ಶೇ.೧೮.೮೪ ರಷ್ಟು ಹಾಗೂ ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿ ಪ್ರದೇಶ ಶೇ. ೨೭.೩೦, ಶೇ.೧೯.೧೦, ಶೇ.೨೭.೬೨ ಮತ್ತು ಶೇ.೨೩.೩೩ ಆಗಿರುವುದು ಮೇಲಿನ ಅಂಕಿಅಂಶಗಳು ಸ್ಪಷ್ಟಪಡಿಸುತ್ತವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೮ ಅನ್ನು ನೋಡಿ.

### ಭೂ ಹಿಡುವಳಿ

ಭೂ ಹಿಡುವಳಿ ಗಣತಿಯನ್ನು ಪ್ರತಿ ಐದು ವರ್ಷಗಳಿಗೊಂದಾವರ್ತಿ ನಡೆಸಲಾಗುತ್ತಿದ್ದು, ಜನಸಂಖ್ಯಾ ಹೆಚ್ಚಳದಿಂದಾಗಿ ದೊಡ್ಡ ಹಿಡುವಳಿದಾರರ ಸಂಖ್ಯೆ ಕುಂಠಿತಗೊಂಡು, ಚಿಕ್ಕ ಹಿಡುವಳಿದಾರರ ಸಂಖ್ಯೆ ಹೆಚ್ಚಳ ಗೊಂಡಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೯ಅನ್ನು ನೋಡಿ.

## ಕೋಷ್ಟಕ ೮.೧೮
## ಕೋಲಾರ ಜಿಲ್ಲೆಯ ಭೂ ಬಳಕೆಯ ವಿವರ

| ವರ್ಷ | ಭೌಗೋಳಿಕ ವಿಸ್ತೀರ್ಣ | ಅರಣ್ಯ ಪ್ರದೇಶ | ಭೂ ಬಳಕೆ: ಸಾಗುವಳಿಗೆ ಲಭ್ಯವಿಲ್ಲದ ಭೂಮಿ – ವ್ಯವಸಾಯೇತರ | ಬಂಜರು | ಒಟ್ಟು | ಸಾಗುವಳಿ ಮಾಡದಿರುವ ಇತರೆ ಭೂಮಿ – ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ವೃಕ್ಷ ಮತ್ತು ತೋಪುಗಳು | ಒಟ್ಟು | ಬೀಳು ಭೂಮಿ – ಚಾಲ್ತಿ | ಇತರೆ | ಒಟ್ಟು | ಬಿತ್ತನೆಯಾದ ಪ್ರದೇಶ – ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು |
|---|---|---|---|---|---|---|---|---|---|---|---|---|---|---|---|
| ೧೯೬೦–೬೧* | ೧೮೦೫೭೮೨ | ೧೬೮೧೬೩ | ೧೪೫೭೧೨ | ೧೦೭೬೪೨ | ೨೫೩೩೫೪ | ೪೨೦೦೦ | ೫೮೯೩೭ | ೯೨೩೮ | ೫೮೦೧೭೫ | ೯೩೩೮೧ | ೨೧೪೮೦ | ೧೧೪೮೬೧ | ೬೮೯೨೨೯ | ೧೫೧೧೪ | ೭೦೪೩೪೩ |
| ೧೯೭೦–೭೧ | ೭೩೨೮೫೮ | ೬೯೦೬೬ | ೬೧೦೬೬ | ೪೬೩೫೬ | ೧೦೭೪೨೨ | ೧೪೩೧೨ | ೧೮೯೨೯ | ೧೧೭೪ | ೩೫೫೦೬೩ | ೪೧೭೯೮ | ೧೬೫೭೩ | ೫೮೩೭೧ | ೨೫೨೭೪೪ | ೨೩೪೩೪ | ೩೦೬೨೭೯ |
| ೧೯೮೦–೮೧ | ೭೭೯೪೬೭ | ೭೦೨೯೩ | ೭೧೯೧೮ | ೬೪೦೬೩ | ೧೩೫೯೮೧ | ೧೭೩೪೬ | ೧೪೭೮೧ | ೧೩೪೭ | ೧೭೮೬೭೯ | ೭೨೬೭೯ | ೧೫೩೫೯ | ೮೮೦೩೮ | ೩೦೬೪೭೬ | ೧೩೬೪ | ೩೦೭೮೪೦ |
| ೧೯೯೦–೯೧ | ೭೭೯೪೬೭ | ೭೦೩೨೪ | ೭೩೭೫೧ | ೬೩೧೮೨ | ೧೩೬೯೩೩ | ೧೩೨೦೦ | ೧೧೭೭೧೩ | ೧೪೬೦೫ | ೧೪೫೫೧೮ | ೪೧೦೯೪ | ೧೭೮೧೪ | ೫೮೯೦೮ | ೩೨೨೨೮೪ | ೯೧೭೯ | ೩೩೧೪೬೩ |
| ೨೦೦೦–೨೦೦೧ | ೭೭೯೪೬೭ | ೭೦೩೨೪ | ೭೩೮೭೫ | ೬೩೧೭೨ | ೧೪೪೧೯೯ | ೧೨೫೪೦ | ೯೮೭೨೮ | ೧೩೪೯೧ | ೧೧೧೪೬೮ | ೭೫೧೫೧ | ೯೪೦೩ | ೮೪೫೫೪ | ೩೬೨೫೯೩ | ೩೩೮೧೮ | ೩೯೬೪೧೧ |
| ೨೦೦೩–೨೦೦೪ | ೭೭೯೪೬೭ | ೭೦೩೨೪ | ೭೩೯೩೫ | ೬೩೧೭೨ | ೧೩೭೧೦೭ | ೧೨೫೪೦ | ೯೮೭೨೮ | ೧೩೪೯೧ | ೧೨೪೯೫೯ | ೮೦೩೪೭ | ೧೧೮೮೭ | ೯೨೨೩೪ | ೩೩೪೮೪೩ | ೭೬೩೯ | ೩೪೨೪೮೨ |

* ಕ್ಷೇತ್ರ ಎಕರೆಗಳಲ್ಲಿ

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

**ಕೋಷ್ಟಕ ೮.೧೯: ೧೯೭೦–೭೧ ರಿಂದ ೨೦೦೦–೦೧ರ ವರೆಗಿನ ಭೂ ಹಿಡುವಳಿಯ ವಿವರ.**

| ಭೂ ಹಿಡುವಳಿಯ ವಿವರ | | ೧೯೭೦–೭೧ | ೧೯೭೬–೭೭ | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ |
|---|---|---|---|---|---|---|---|---|
| ಅತಿ ಸಣ್ಣ (೧ ಹೆ.ಗಿಂತ ಕಡಿಮೆ) | ಸಂ | ೯೧,೪೫೦ | ೯೮,೬೩೪ | ೧,೧೧,೫೧೧ | ೧,೩೦,೩೪೮ | ೧,೬೩,೧೭೦ | ೧,೯೧,೪೯೨ | ೨,೩೪,೬೧೮ |
| | ವಿ | ೪೮,೦೯೩ | ೪೯,೧೧೬ | ೫೪,೯೪೨ | ೬೪,೧೩೪ | ೮೦,೭೪೮ | ೯೨,೧೭೯ | ೧,೦೮,೮೪೬ |
| ಸಣ್ಣ (೧–೨ ಹೆ) | ಸಂ | ೫೬,೬೫೩ | ೫೭,೫೭೧ | ೫೮,೭೬೪ | ೬೬,೮೩೬ | ೭೯,೦೫೮ | ೮೨,೦೦೨ | ೯೧,೮೨೨ |
| | ವಿ | ೮೧,೩೯೦ | ೯೩,೭೬೯ | ೮೪,೪೯೯ | ೯೫,೪೧೧ | ೧,೧೧,೦೪೭ | ೧,೧೫,೬೩೩ | ೧,೨೮,೩೧೮ |
| ಅರೆ ಮಧ್ಯಮ (೨–೪ ಹೆ) | ಸಂ | ೩೯,೮೬೦ | ೩೫,೯೨೬ | ೩೯,೦೦೮ | ೪೦,೧೨೪ | ೪೩,೯೮೬ | ೪೪,೩೨೨ | ೪೩,೫೭೪ |
| | ವಿ | ೧,೦೯,೦೮೭ | ೯೮,೪೦೬ | ೧,೦೮,೦೧೧ | ೧,೧೦,೩೯೧ | ೧,೧೯,೨೫೪ | ೧,೨೦,೩೧೧ | ೧,೧೭,೭೬೬ |
| ಮಧ್ಯಮ (೪–೧೦ ಹೆ) | ಸಂ | ೧೮,೨೩೧ | ೧೭,೪೮೧ | ೧೮,೫೭೨ | ೧೭,೮೯೦ | ೧೭,೭೪೦ | ೧೭,೬೮೧ | ೧೫,೨೩೨ |
| | ವಿ | ೧,೦೪,೦೫೫ | ೯೮,೨೨೪ | ೧,೦೭,೧೭೨ | ೧,೦೨,೭೧೧ | ೧,೦೦,೯೪೯ | ೯೯,೭೬೭ | ೮೫,೮೫೪ |
| ದೊಡ್ಡ (೧೦ ಹೆ. ಗಿಂತ ಹೆಚ್ಚು) | ಸಂ | ೩,೧೪೮ | ೨,೯೩೧ | ೨,೮೪೧ | ೨,೭೩೨ | ೨,೪೩೮ | ೨,೨೭೫ | ೧,೮೦೬ |
| | ವಿ | ೫೧,೪೧೯ | ೪೫,೮೮೨ | ೪೩,೦೭೭ | ೪೧,೭೧೪ | ೩೬,೧೦೨ | ೩೩,೪೭೮ | ೨೭,೫೫೩ |
| **ಒಟ್ಟು** | ಸಂ | **೨,೦೯,೩೪೨** | **೨,೧೨,೫೪೩** | **೨,೩೦,೬೯೬** | **೨,೫೭,೯೩೦** | **೩,೦೬,೩೯೨** | **೩,೩೭,೭೭೨** | **೩,೮೭,೦೫೨** |
| | ವಿ | **೩,೯೪,೦೪೪** | **೩,೮೫,೩೯೭** | **೩,೯೭,೭೦೧** | **೪,೧೪,೩೬೧** | **೪,೪೮,೧೦೦** | **೪,೬೧,೩೬೮** | **೪,೬೮,೩೩೭** |

ಸೂಚನೆ: ಸಂ: ಸಂಖ್ಯೆ, ವಿ: ವಿಸ್ತೀರ್ಣ

## ನೀರಾವರಿ

'ಕೆರೆಗಳ ತವರೂರು' ಎಂಬ ಖ್ಯಾತಿಗೆ ಒಳಗಾಗಿರುವ ಕೋಲಾರ ಜಿಲ್ಲೆಯು ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದ್ದು, ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಇಲ್ಲಿ ಯಾವುದೇ ಜಲಾಶಯಗಳಿಲ್ಲದಿರುವುದರಿಂದ ಕಾಲುವೆ ನೀರಾವರಿ ಪದ್ಧತಿ ಇಲ್ಲದಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ೧೯೪೫–೪೬ರಲ್ಲಿ ಕೆರೆಗಳಿಂದ ೭೬,೫೧೧ ಎಕರೆ ಹಾಗೂ ಬಾವಿಗಳಿಂದ ೨೬,೪೧೨ ಎಕರೆ ಪ್ರದೇಶ ನೀರಾವರಿಯಾಗಿದೆ. ಜಿಲ್ಲೆಯಲ್ಲಿ ೧೯೬೦–೬೧ರಿಂದ ೨೦೦೩–೨೦೦೪ರವರೆಗೆ ವಿವಿಧ ಮೂಲಗಳಿಂದ ನೀರಾವರಿಯಾದ ಪ್ರದೇಶಗಳ ವಿವರಗಳನ್ನು ಕೋಷ್ಟಕ ೮.೨೦ರಲ್ಲಿ ನೀಡಿದೆ.

**ಕೋಷ್ಟಕ ೮.೨೦: ವಿವಿಧ ಮೂಲಗಳಿಂದಾದ ನೀರಾವರಿ ಸೌಲಭ್ಯ**

(ಹೆಕ್ಟೇರುಗಳಲ್ಲಿ)

| ನೀರಾವರಿಯ ಮೂಲಗಳು | ೧೯೬೦–೬೧* | ೧೯೭೦–೭೧ | ೧೯೮೦–೮೧ | ೧೯೯೦–೯೧ | ೨೦೦೦–೨೦೦೧ | ೨೦೦೩–೨೦೦೪ |
|---|---|---|---|---|---|---|
| **ಕೆರೆಗಳು** | ೮೪,೨೮೦ | ೪೩,೮೬೦ | ೧೬,೫೭೨ | ೨೩,೭೭೧ | ೧೬,೨೦೫ | ೩೭೧ |
| **ಬಾವಿಗಳು** | ೨೯,೧೩೧ | ೩೮,೦೮೬ | ೪೨,೩೧೮ | ೪೨,೨೩೫ | ೨೨,೮೨೪ | ೨,೬೫೬ |
| **ಕೊಳವೆ ಬಾವಿಗಳಿಂದ** | – | – | – | ೪೨,೨೬೯ | ೭೨,೧೫೧ | ೭೬,೭೫೫ |
| **ಇತರೆ ಜಲ ಮೂಲಗಳಿಂದ** | ೧,೦೧೩ | ೧,೬೫೪ | – | – | – | – |
| **ಒಟ್ಟು** | **೧,೧೬,೮೩೫** | **೮೩,೬೦೦** | **೫೮,೮೯೦** | **೧,೦೮,೨೭೫** | **೧,೧೧,೧೮೦** | **೭೯,೭೮೨** |

* ಕ್ಷೇತ್ರ ಎಕರೆಗಳಲ್ಲಿ

## ಬೆಳೆಗಳು

ಜಿಲ್ಲೆಯಲ್ಲಿ ಪ್ರಮುಖ ಏಕದಳ ಧಾನ್ಯಗಳಾದ ರಾಗಿ, ಭತ್ತ ಹಾಗೂ ಮುಸುಕಿನ ಜೋಳ; ದ್ವಿದಳ ಧಾನ್ಯಗಳಾದ ತೊಗರಿ, ಹುರುಳಿ, ಹೆಸರು ಹಾಗೂ ಅವರೆ; ಎಣ್ಣೆಕಾಳುಗಳಾದ ಕಡಲೆಕಾಯಿ, ಹರಳು ಸೂರ್ಯಕಾಂತಿ ಮುಂತಾದವುಗಳು; ವಾಣಿಜ್ಯ ಬೆಳೆಗಳಾದ ಕಬ್ಬು ಹಾಗೂ ಮಾವು; ತೋಟಗಾರಿಕಾ ಬೆಳೆಗಳಾದ ಆಲೂಗಡ್ಡೆ, ಈರುಳ್ಳಿ, ಟೊಮೆಟೊ, ಬದನೆ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ೧೯೯೯–೨೦೦೦ದಲ್ಲಿ ಏಕದಳ ಧಾನ್ಯ ಹಾಗೂ ಉಪತೃಣ ಧಾನ್ಯಗಳನ್ನು ೧,೧೫,೮೭೫ ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದ್ದು, ೧,೮೩,೯೮೦ ಟನ್ನು ಉತ್ಪಾದಿಸಲಾಗಿದೆ. ೧೯೮೦–೮೧ ರಿಂದ ೨೦೦೦–೨೦೦೧ರ ವರೆಗೆ ಪ್ರಮುಖ ಆಹಾರ ಪದಾರ್ಥಗಳ ಉತ್ಪಾದನಾ ವಿವರಗಳನ್ನು ಕೋಷ್ಟಕ ೮.೨೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೧: ಕಳೆದ ಮೂರು ದಶಕಗಳಲ್ಲಿನ ಆಹಾರ ಪದಾರ್ಥಗಳ ಉತ್ಪಾದನಾ ವಿವರ.**

| ಆಹಾರ ಪದಾರ್ಥಗಳು | | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ |
|---|---|---|---|---|---|---|
| **ಏಕದಳ ಮತ್ತು** | ವಿಸ್ತೀರ್ಣ | ೧,೬೧,೮೪೩ | ೧,೮೫,೫೨೫ | ೧,೬೮,೪೭೫ | ೧,೩೩,೫೯೪ | ೧,೭೧,೯೦೭ |
| **ತೃಣ ಧಾನ್ಯಗಳು** | ಉತ್ಪನ್ನ | ೮೪,೨೫೧ | ೧,೮೮,೦೯೬ | ೨,೫೨,೬೨೧ | ೨,೮೮,೭೧೮ | ೩,೪೬,೭೦೨ |
| | ಇಳುವರಿ | ೫೪೮ | ೧,೦೬೭ | ೧,೫೭೮ | ೨,೨೭೫ | ೨,೧೨೩ |
| **ದ್ವಿದಳ ಧಾನ್ಯಗಳು** | ವಿಸ್ತೀರ್ಣ | ೫೫,೭೩೭ | ೬೦,೬೬೧ | ೨೯,೨೩೬ | ೩೮,೭೫೭ | ೩೨,೯೦೩ |
| | ಉತ್ಪನ್ನ | ೧೫,೫೦೮ | ೧೭,೮೮೭ | ೧೨,೦೫೪ | ೧೩,೭೫೮ | ೧೪,೫೬೦ |
| | ಇಳುವರಿ | ೨೯೩ | ೩೧೦ | ೪೫೪ | ೩೭೪ | ೪೪೬ |
| **ಒಟ್ಟು ಆಹಾರ** | ವಿಸ್ತೀರ್ಣ | ೨,೧೭,೫೮೦ | ೨,೪೬,೧೮೬ | ೧,೯೭,೭೧೧ | ೧,೭೨,೩೫೧ | ೨,೦೪,೮೧೦ |
| **ಧಾನ್ಯಗಳು** | ಉತ್ಪನ್ನ | ೯೯,೭೫೯ | ೨,೦೫,೯೮೩ | ೨,೬೪,೬೭೫ | ೩,೦೨,೪೭೬ | ೩,೬೧,೨೬೨ |
| | ಇಳುವರಿ | ೪೫೩ | ೮೧ | ೧,೪೦೯ | ೧,೮೪೭ | ೧,೮೫೭ |
| **ಎಣ್ಣೆ ಬೀಜಗಳು** | ವಿಸ್ತೀರ್ಣ | ೪೬,೭೫೩ | ೬೫,೩೮೮ | ೯೧,೨೬೭ | ೯೬,೬೩೪ | ೫೯,೬೮೫ |
| **(ತೆಂಗು ಹೊರತುಪಡಿಸಿ)** | ಉತ್ಪನ್ನ | ೧೯,೭೬೩ | ೪೯,೧೬೪ | ೯೦,೩೩೦ | ೧,೨೮,೦೦೨ | ೮೦,೯೯೧ |
| | ಇಳುವರಿ | ೪೪೫ | ೭೫೧ | ೧,೦೪೨ | ೧,೩೯೪ | ೧,೪೧೪ |

ವಿಸ್ತೀರ್ಣ– ಹೆಕ್ಟೇರುಗಳಲ್ಲಿ, ಉತ್ಪನ್ನ– ಟನ್ನುಗಳಲ್ಲಿ, ಇಳುವರಿ– ಹೆಕ್ಟೇರಿಗೆ ಕೆ.ಜಿ.ಗಳಲ್ಲಿ

## ರೇಷ್ಮೆ

ರೇಷ್ಮೆಯು ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಜಿಲ್ಲೆಯ ಎಲ್ಲಾ ೧೧ ತಾಲೂಕುಗಳಲ್ಲೂ ಕಳೆದ ಐದಾರು ದಶಕಗಳಿಂದ ರೇಷ್ಮೆ ಕೃಷಿಯು ಹೆಚ್ಚಿನ ರೈತರ ಮುಖ್ಯ ಕಸುಬಾಗಿದ್ದರೆ, ಹಲವರಿಗೆ ಉಪ ಕಸುಬಾಗಿದ್ದು, ಜಿಲ್ಲೆಯ ಅತಿ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಜಿಲ್ಲೆಯಲ್ಲಿ ಯಾವುದೇ ಶಾಶ್ವತ ನೀರಾವರಿ ಮೂಲಗಳು ಇಲ್ಲದಿದ್ದಾಗ್ಯೂ ಮಳೆ, ಬಾವಿ ಹಾಗೂ ಕೊಳವೆ ಬಾವಿಗಳನ್ನೇ ಆಧಾರವಾಗಿಟ್ಟುಕೊಂಡು ರೈತರು ಹಿಪ್ಪುನೇರಳೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ಸಕಾಲದಲ್ಲಿ ಮಳೆಯಿಲ್ಲದೆ ಕ್ಷಾಮಕ್ಕೀಡಾಗುತ್ತಿದ್ದರೂ, ರೇಷ್ಮೆ ಕೃಷಿಯು ಈ ಜಿಲ್ಲೆಯ ರೈತನ ಜೀವನಾಧಾರವಾಗಿದೆ. ಇಲ್ಲಿನ ಹಿಪ್ಪುನೇರಳೆ ವ್ಯವಸಾಯವು ರಾಜ್ಯದ ಬೇರೆಡೆಗಿಂತ ವಿಶೇಷ ರೀತಿಯಲ್ಲಿದ್ದು, ಇದನ್ನು **'ಕೋಲಾರ ಪದ್ಧತಿ'** ಅಥವಾ **'ಸಾಲುಕಡ್ಡಿ'** ಪದ್ಧತಿಯೆಂದೇ ಕರೆಯುತ್ತಾರೆ. ಈ ಪದ್ಧತಿಯಲ್ಲಿ ನಾಟಿ ಮಾಡುವಾಗ ಕಡ್ಡಿಯಿಂದ ಕಡ್ಡಿಗೆ ೨ ರಿಂದ ೩ ಅಂಗುಲ ಮತ್ತು ಸಾಲುಗಳ ಮಧ್ಯದಲ್ಲಿ ¾ ಅಡಿಯಿಂದ ಒಂದು ಅಡಿ ಅಂತರವನ್ನು ಬಿಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ

ಗುಣಿಪದ್ಧತಿಯನ್ನು ಪ್ರಚಾರಪಡಿಸಿ, ಸ್ಥಳೀಯ ಹಿಪ್ಪುನೇರಳೆ ತಳಿಗೆ ಬದಲಾಗಿ ಹೆಚ್ಚು ಇಳುವರಿ ನೀಡುವ ಎಂ.೫ ಎಸ್.೩೬, ವಿ.೧, ಸಿ.ಎಲ್.ಆರ್., ಎನ್.ಪಿ ೨ ಹಾಗೂ ಎಸ್.ಎಲ್.ಆರ್ ತಳಿಗಳನ್ನು ಬಳಕೆಗೆ ತರಲಾಗಿದೆ. ಇದರಿಂದ ಗೂಡಿನ ಉತ್ಪಾದನೆ ಹೆಚ್ಚಳಗೊಂಡಿದೆ.

೧೯೪೧ರ ಡಿಸೆಂಬರ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೬,೪೧೬ ಕುಟುಂಬಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, ೬,೮೧೬ ಎಕರೆ ಭೂಮಿಯಲ್ಲಿ ರೇಷ್ಮೆ ಕೃಷಿ ವ್ಯಾಪಿಸಿತ್ತು. ವಿವರಗಳಿಗೆ ಕೋಷ್ಟಕ ೮.೨೨ರಲ್ಲಿ ನೋಡಿ.

**ಕೋಷ್ಟಕ ೮.೨೨: ಜಿಲ್ಲೆಯಲ್ಲಿ ೧೯೪೧ರ ಡಿಸೆಂಬರ್ ಅಂತ್ಯದಲ್ಲಿದ್ದಂತೆ ರೇಷ್ಮೆ ಕೃಷಿಯ ವಿವರಗಳು**

(ವಿಸ್ತೀರ್ಣ:ಎಕರೆಗಳಲ್ಲಿ)

| ತಾಲೂಕು | ರೇಷ್ಮೆ ಕೃಷಿಯಲ್ಲಿ ತೊಡಗಿರುವ ಕುಟುಂಬಗಳು | ನೀರಾವರಿ | ಮಳೆಯಾಧಾರಿತ | ಒಟ್ಟು | ರೇಷ್ಮೆ ಮರಗಳ ಸಂಖ್ಯೆ |
|---|---|---|---|---|---|
| ಶಿಡ್ಲಘಟ್ಟ | ೨೫೮ | ೧೮೮೮ | ೧೧೯ | ೨೦೦೭ | ೧೧೭೮ |
| ಚಿಕ್ಕಬಳ್ಳಾಪುರ | ೬೪೦ | ೭೬೬ | ೩೭ | ೮೦೩ | ೫೧ |
| ಕೋಲಾರ | ೧೫೮೩ | ೧೫೩೭ | ೫೧೭ | ೨೦೫೪ | ೨೨೧೫ |
| ಶ್ರೀನಿವಾಸಪುರ | ೧೩೩ | ೮೮ | ೩೧ | ೧೧೯ | ೬೩೮ |
| ಮಾಲೂರು | ೧೧೮ | ೧೩೩ | – | ೧೧೩ | ೧೮೦ |
| ಚಿಂತಾಮಣಿ | ೧೪೬೪ | ೧೦೬೩ | ೬೫೭ | ೧೭೨೦ | ೧೩೨ |
| **ಒಟ್ಟು** | **೬೪೧೭** | **೫೪೫೫** | **೧೩೬೧** | **೬೮೧೭** | **೪೬೩೪** |

ಆಧಾರ: ರೇಷ್ಮೆ ಇಲಾಖೆ,ಕೋಲಾರ.

ಜಿಲ್ಲೆಯಲ್ಲಿ ೧೯೫೬-೫೭ರಲ್ಲಿ ಕೇವಲ ೧೦,೯೭ ಎಕರೆಗಳಲ್ಲಿದ್ದ ರೇಷ್ಮೆ ಕೃಷಿಯನ್ನು ೧೯೬೫-೬೬ರಲ್ಲಿ ೧೬,೨೦೦ ಎಕರೆ ಪ್ರದೇಶಕ್ಕೆ ವಿಸ್ತರಿಸಲಾಯಿತು. ೧೯೭೭-೭೮ರಲ್ಲಿ ೧೦,೫೬೭ ಹೆಕ್ಟೇರು ಪ್ರದೇಶದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಪಡಿಸಲಾಯಿತು. ಈ ಅವಧಿಯಲ್ಲಿ ೧,೭೮೭ ಹಳ್ಳಿಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, ೨೬,೪೨೮ ಮಂದಿ ರೇಷ್ಮೆ ಕೃಷಿಯಲ್ಲಿ ತೊಡಗಿದ್ದರು. ೧೯೮೦-೮೧ರಲ್ಲಿ ೧೯,೦೧೩ ಹೆಕ್ಟೇರು ಪ್ರದೇಶಕ್ಕೆ ವಿಸ್ತರಣೆಗೊಂಡ ರೇಷ್ಮೆ ಕೃಷಿಯಲ್ಲಿ ೨,೬೬೩ ಹಳ್ಳಿಗಳು ತೊಡಗಿದ್ದವು. ೪೦,೫೨೪ ಮಂದಿ ಈ ಕೃಷಿಯಲ್ಲಿ ಉದ್ಯೋಗ ಪಡೆದುಕೊಂಡಿದ್ದರು. ೧೯೯೦-೯೧ ಹಾಗೂ ೨೦೦೨-೨೦೦೩ರಲ್ಲಿ ತಾಲೂಕುವಾರು ಹಿಪ್ಪುನೇರಳೆ ಕ್ಷೇತ್ರ, ಗೂಡಿನ ಉತ್ಪಾದನೆ ಮುಂತಾದ ಅಂಶಗಳನ್ನು ಕೋಷ್ಟಕ ೮.೨೩ರಲ್ಲಿ ತುಲನಾತ್ಮಕವಾಗಿ ನೀಡಿದೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ-೫ ಅನ್ನು ನೋಡಿ)

**ಕೋಷ್ಟಕ ೮.೨೩: ತಾಲೂಕುವಾರು ರೇಷ್ಮೆ ಗೂಡಿನ ತುಲನಾತ್ಮಕ ಉತ್ಪಾದನಾ ವಿವರ**

| ತಾಲೂಕುಗಳು | ೧೯೯೦-೯೧ | | | ೨೦೦೨-೨೦೦೩ | | |
|---|---|---|---|---|---|---|
| | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರುಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳ ಸಂಖ್ಯೆ (ಲಕ್ಷಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್ ಗಳಲ್ಲಿ) | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರುಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳ ಸಂಖ್ಯೆ (ಲಕ್ಷಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್ ಗಳಲ್ಲಿ) |
| ೧ | ೨ | ೩ | ೪ | ೫ | ೬ | ೭ |
| ಕೋಲಾರ | ೪೭೮೯-೬೦ | ೯೩.೯೪ | ೫೯೭೬ | ೫೦೩೮.೬೨ | ೭೯.೬೬ | ೩೬೨೫.೧೫ |
| ಮುಳಬಾಗಿಲು | ೨೦೭೦-೮೦ | ೫೯.೩೧ | ೧೫೫ | ೨೪೩೬.೮೭ | ೩೪.೮೦ | ೧೬೨೩.೬೭ |
| ಶ್ರೀನಿವಾಸಪುರ | ೨೦೨೨-೮೦ | ೩೯.೪೬ | ೧೨೩ | ೨೩೬೩.೩೪ | ೩೬.೬೪ | ೧೬೫೧.೮೫ |

ಮುಂದುವರಿದಿದೆ.............

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| **ಚಿಂತಾಮಣಿ** | ೩೬೫೨–೮೦ | ೫೯.೪೭ | ೨೧೭ | ೩೩೨೨.೩೪ | ೫೦.೪೩ | ೨೩೧೮.೦೬ |
| **ಶಿಡ್ಲಘಟ್ಟ** | ೩೫೯೦–೪೦ | ೫೭೬೩ | ೧೭೮ | ೩೫೯೯.೬೧ | ೫೮.೨೬ | ೨೫೮೬.೮೮ |
| **ಬಾಗೇಪಲ್ಲಿ** | ೮೯೮–೪೦ | ೧೧.೮೫ | ೪೨ | ೮೩೩.೭೮ | ೧೬.೫೭ | ೦೭೦೧.೫೮ |
| **ಗುಡಿಬಂಡೆ** | ೪೪೨–೪೦ | ೫.೭೬ | ೧೮ | ೪೪೦.೪೪ | ೫.೮೩ | ೨೫೨.೦೦ |
| **ಗೌರಿಬಿದನೂರು** | ೨೩೭೮–೬೦ | ೪೧.೩ | ೧೧೮ | ೧೭೮೨.೬೧ | ೩೦.೨೮ | ೧೩೫೮.೬೪ |
| **ಚಿಕ್ಕಬಳ್ಳಾಪುರ** | ೧೯೫೩–೨೦ | ೩೪.೭೬ | ೧೧೩ | ೧೯೪೫.೧೮ | ೨೭೬೬ | ೧೩೦೫.೮೪ |
| **ಮಾಲೂರು** | ೧೯೦೮–೮೦ | ೪೧.೬೪ | ೧೬೬ | ೧೨೦೦.೭೬ | ೨೭೦೩ | ೧೨೪೯.೨೨ |
| **ಬಂಗಾರಪೇಟೆ** | ೧೬೫೪–೮೦ | ೩೩.೨೫ | ೧೧೭ | ೨೯೧.೨೮ | ೩೩.೧೪ | ೧೫೭೯.೯೯ |
| **ಒಟ್ಟು** | **೨೫೯೨–೦೦** | **೪೪೮೨೮** | **೧೯೬೪೩** | **೨೪೬೫೪–೮೭** | **೪೦೦.೧೩** | **೧೮೫೨.೮೮** |

ಆಧಾರ: ರೇಷ್ಮೆ ಇಲಾಖೆ,ಕೋಲಾರ.

ಜಿಲ್ಲೆಯಲ್ಲಿ ೧೯೯೦–೯೧ ಹಾಗೂ ೨೦೦೩–೨೦೦೪ರಲ್ಲಿ ಹಿಪ್ಪುನೇರಳೆ ಕೃಷಿಯನ್ನು ಅವಲಂಬಿಸಿರುವ ಗ್ರಾಮಗಳು ಮತ್ತು ಕುಟುಂಬಗಳ ವಿವರಗಳನ್ನು ಕೋಷ್ಟಕ ೮.೨೪ರಲ್ಲಿ ನೀಡಿದೆ.

## ಪಶು ಸಂಪತ್ತು

ಗ್ರಾಮೀಣ ಜನರ ಆರ್ಥಿಕ ಸ್ಥಾನಮಾನ ಹಾಗೂ ಜೀವನ ಮಟ್ಟ ಸುಧಾರಣೆಗೆ ಪಶು ಸಂಪತ್ತು ಪೂರ್ವದಿಂದಲೂ ಮಹತ್ತರ ಪಾತ್ರ ವಹಿಸುತ್ತಿದೆ. ಜಿಲ್ಲೆಯಲ್ಲಿ ಪಶು ಸಂಪತ್ತು ಶ್ರೀಮಂತವಾಗಿದ್ದು, ರಾಜ್ಯದಲ್ಲೇ ಎರಡನೇ ಸ್ಥಾನ ಪಡೆದುಕೊಂಡಿದೆ ಹಾಗೂ ವ್ಯವಸಾಯ ಮಾಡಲು, ಬಾವಿಗಳಿಂದ ನೀರೆತ್ತಲು, ಬೆಳೆದ ದವಸ–ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲು ರೈತಾಪಿ ವರ್ಗಕ್ಕೆ ನೆರವಾಗಿದೆ. ಆದರಲ್ಲೂ ಹೈನುಗಾರಿಕೆ ಜನರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ನೆರವಾಗಿರುವುದು ಉಲ್ಲೇಖಾರ್ಹವಾಗಿದೆ. ಜಿಲ್ಲೆಯಲ್ಲಿ ಹೈನುಗಾರಿಕೆಯ ಅಭಿವೃದ್ಧಿಯಿಂದ ಡೈರಿ ಉದ್ಯಮದ ಸ್ಥಾಪನೆಯಾಗಿ, ಉದ್ಯೋಗ ಸೃಷ್ಟಿಸುವ ಜೊತೆಗೆ ಜನರ ಜೀವನಮಟ್ಟ ಸುಧಾರಿಸಲು ನೆರವಾಗಿದೆ.

೧೯೫೬ರ ಜಾನುವಾರು ಗಣತಿಯಂತೆ ೫,೦೦,೩೬೨ ದನಕರುಗಳಿದ್ದರೆ, ೧,೧೬,೪೧೫ ಎಮ್ಮೆಗಳು, ೬,೧೬,೭೭೫ ಎತ್ತುಗಳು, ೪,೯೭,೮೨೯ ಕುರಿಗಳು, ೨,೮೫,೦೩೫ ಮೇಕೆಗಳು, ೪೪,೦೮೩ ಇತರೆ ಜಾನುವಾರುಗಳಿದ್ದವು ಹಾಗೂ ೭,೫೬,೬೫೫ ಕೋಳಿಗಳಿದ್ದವು. ಹೆಚ್ಚಿನ ವಿವರಗಳನ್ನು ಕೋಷ್ಟಕ ೮.೨೫ ಮತ್ತು ೮.೨೬ರಲ್ಲಿ ನೀಡಿದೆ.

### ಹೈನು ಉದ್ಯಮ

ಜಿಲ್ಲೆಯ ರೈತರ ಜೀವ ನಾಡಿಯಾಗಿರುವ ಹೈನುಗಾರಿಕೆಯು **'ಕ್ಷೀರ ಕ್ರಾಂತಿಯ'** ಮೂಲಕ ಜನರ ಆರ್ಥಿಕ, ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿ, ಉತ್ತಮ ಜೀವನ ನಿರ್ವಹಣೆಗೆ ನಾಂದಿ ಹಾಡಿದೆ. ಕೋಲಾರ ಜಿಲ್ಲೆಯನ್ನು ಬೆಂಗಳೂರು ಹಾಲು ಒಕ್ಕೂಟದಿಂದ ಬೇರ್ಪಡಿಸಿ ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿಯಮಿತ ಎಂದು ದಿನಾಂಕ ೨೭–೦೩–೧೯೮೭ ರಂದು ನೋಂದಾವಣೆಗೊಂಡು, ದಿನಾಂಕ ೦೧–೦೪–೧೯೮೭ ರಿಂದ ಕಾರ್ಯ ಆರಂಭಮಾಡಿತು. ಜಿಲ್ಲೆಯ ಎಲ್ಲಾ ೧೧ ತಾಲ್ಲೂಕು ಹಾಗೂ ೨೮೯೩ ಗ್ರಾಮಗಳು ಈ ಒಕ್ಕೂಟದ ವ್ಯಾಪ್ತಿಗೆ ಬರುತ್ತವೆ. ಆರಂಭದ ವರ್ಷದಲ್ಲಿ ೫೧೬ ಹಾಲು ಉತ್ಪಾದಕರ ಸಂಘಗಳಿದ್ದು, ಇವುಗಳಲ್ಲಿ ಒಟ್ಟು ೮೬,೭೯೫ ಮಂದಿ ಸದಸ್ಯರಿದ್ದರು. ಆ ಸಾಲಿನಲ್ಲಿ ಪ್ರತಿದಿನದ ಸರಾಸರಿ ಹಾಲಿನ ಶೇಖರಣೆ ೧.೭೯ ಲಕ್ಷ ಲೀಟರ್ ಆಗಿತ್ತು. ೧೯೯೯–೨೦೦೦ದಲ್ಲಿ ಕಾರ್ಯನಿರತ ಹಾಲು ಉತ್ಪಾದಕರ ಸಂಘಗಳ ಸಂಖ್ಯೆ ೧,೧೯೯ ಆಗಿದ್ದು, ಇವುಗಳಲ್ಲಿ ಒಟ್ಟು ೨,೨೭,೧೪೧ ಸದಸ್ಯರಿದ್ದರು. ಈ ಎಲ್ಲಾ ಸಂಘಗಳಿಂದ ಪ್ರತಿ ದಿನ ೪.೬೩ ಲಕ್ಷ ಕೆ.ಜಿ

## ಕೋಷ್ಟಕ ೮.೨೪: ಜಿಲ್ಲೆಯಲ್ಲಿ ತಾಲೂಕುವಾರು ಹಿಪ್ಪುನೇರಳೆಯಲ್ಲಿ ತೊಡಗಿದ್ದ ಹಳ್ಳಿಗಳು ಹಾಗೂ ಕುಟುಂಬಗಳ ವಿವರ.

(ಸಂಖ್ಯೆಗಳಲ್ಲಿ)

| ತಾಲೂಕುವಾರು | ಹಿಪ್ಪುನೇರಳೆ ಕೃಷಿ ಅವಲಂಬಿಸಿರುವ ಗ್ರಾಮಗಳ ಸಂಖ್ಯೆ | | ರೇಷ್ಮೆ ಕುಟುಂಬಗಳು: ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಅಲ್ಪ ಸಂಖ್ಯಾತರು | | ಇತರೆ | | ಒಟ್ಟು | |
|---|---|---|---|---|---|---|---|---|---|---|---|---|
| | ೧೯೯೦–೯೧ | ೨೦೦೩–೦೪ | ೧೯೯೦–೯೧ | ೨೦೦೩–೦೪ | ೧೯೯೦–೯೧ | ೨೦೦೩–೦೪ | ೧೯೯೦–೯೧ | ೨೦೦೩–೦೪ | ೧೯೯೦–೯೧ | ೨೦೦೩–೦೪ | ೧೯೯೦–೯೧ | ೨೦೦೩–೦೪ |
| ಕೋಲಾರ | ೩೩೬ | ೩೩೫ | ೧೫೭೭ | ೧೦೦೦ | ೮೫ | ೪೮೨ | – | ೧೯ | ೯೦೬೭ | ೯೨೨೩ | ೧೧೩೫೮ | ೧೨೨೯ |
| ಮುಳಬಾಗಿಲು | ೩೩೨ | ೩೬೩ | ೮೨ | ೭೬೬ | ೧೦೮ | ೧೬೨ | – | ೧೩೫ | ೪೦೭೫ | ೪೧೯೬ | ೫೫೧೭ | ೫೬೨೨ |
| ಶ್ರೀನಿವಾಸಪುರ | ೨೫೦ | ೨೫೮ | ೪೮೩ | ೬೦೧ | ೧೮೨ | ೨೯ | – | ೧೯ | ೩೫೫೬ | ೩೩೯೦ | ೪೪೬೧ | ೪೬೯೭ |
| ಚಿಂತಾಮಣಿ | ೪೦೮ | ೩೫೫ | ೭೧೭ | ೬೩೧ | ೬೧೮ | ೫೬೩ | – | ೨೮ | ೬೩೭೧ | ೫೧೦೫ | ೮೧೨೦ | ೬೯೫೨ |
| ಶಿಡ್ಲಘಟ್ಟ | ೨೫೪ | ೨೫೧ | ೬೨೫ | ೩೩೫ | ೪೨೫ | ೩೦೬ | – | ೪೮ | ೫೯೪೩ | ೪೭೦೫ | ೭೨೬೬ | ೫೮೦೫ |
| ಬಾಗೇಪಲ್ಲಿ | ೨೫೦ | ೩೨೯ | ೧೦೬ | ೨೧೨ | ೮೦೭ | ೪೫೦ | – | ೨೮ | ೨೪೬೧ | ೨೪೭೦ | ೨೯೪೪ | ೩೪೭೯ |
| ಗುಡಿಬಂಡೆ | ೧೦೧ | ೮ | ೧೧೨ | ೮೩೫ | ೮೬ | ೮೪೨ | – | – | ೧೯೯೨ | ೫೨೭ | ೨೨೫೧ | ೬೮೪ |
| ಗೌರಿಬಿದನೂರು | ೨೯ | ೨೩೫ | ೩೨೩ | ೩೦೪ | ೪೫೬ | ೪೮೫ | – | ೬೭ | ೪೦೬೮ | ೩೫೭೬ | ೫೧೩೬ | ೪೭೦೭ |
| ಚಿಕ್ಕಬಳ್ಳಾಪುರ | ೨೫೨ | ೨೫೦ | ೫೪೬ | ೩೦೬ | ೩೬೧ | ೧೭೬ | – | ೨೨ | ೪೪೦೬ | ೨೨೪೪ | ೫೫೮೫ | ೩೪೮೮ |
| ಮಾಲೂರು | ೨೯ | ೨೬ | ೭೪೫ | ೩೩೧ | ೪೫೮ | ೩೦೫ | – | ೫೪ | ೪೫೧೬ | ೨೬೩೪ | ೬೦೨೮ | ೩೬೨೦ |
| ಬಂಗಾರಪೇಟೆ | ೩೬೦ | ೩೬೭ | ೬೧೩ | ೬೮೨ | ೧೦೩ | ೧೮೦ | – | ೮೦ | ೩೪೯೩ | ೪೩೧೯ | ೪೫೭೯ | ೫೬೬೮ |
| ಒಟ್ಟು | ೩೧೮೧ | ೩೧೯೯ | ೬೬೭೮ | ೫೩೩೩ | ೩೫೭೮ | ೩೫೧೦ | – | ೧೦೮೦ | ೪೯೯೪೪ | ೪೨೯೭೯ | ೬೩೦೪೫ | ೫೯೬೧ |

ಆಧಾರ: ರೇಷ್ಮೆ ಇಲಾಖೆ,ಕೋಲಾರ.

**ಕೋಷ್ಟಕ ೮.೨೫: ೧೯೫೬ ರಿಂದ ೨೦೦೩ ರವರೆಗೆ ನಡೆದ ಜಾನುವಾರು ಗಣತಿಯ ವಿವರಗಳು**

(ಸಂಖ್ಯೆಗಳಲ್ಲಿ)

| ಜಾನುವಾರು | ೧೯೫೬ | ೧೯೬೧ | ೧೯೬೬ | ೧೯೭೨ | ೧೯೭೭ | ೧೯೮೩ | ೧೯೯೦ | ೧೯೯೭ | ೨೦೦೩ |
|---|---|---|---|---|---|---|---|---|---|
| ದನಕರು | ೫,೦೦೩೬೨ | ೫,೫೭,೩೫೭ | ೫,೧೩,೨೭೭ | ೫,೩೫,೮೫೮ | ೫,೫೨,೦೫೭ | ೫,೭೧,೬೦೦ | ೫,೦೦,೦೦೦ | ೫,೩೧,೭೮೨ | ೪,೬೬,೮೩೪ |
| ಎಮ್ಮೆ | ೧,೧೬,೪೧೫ | ೧,೨೩,೭೦೦ | ೧,೨೦,೩೦೬ | ೧,೪೯,೧೪೬ | ೧,೫೨,೬೯೧ | ೧,೭೭,೬೦೦ | ೧,೬೧,೭೦೦ | ೧,೪೭,೬೦೨ | ೧,೨೯,೯೧೮ |
| ಕುರಿ | ೪,೯೭,೮೮೮ | ೫,೮೩,೩೬೦ | ೫,೨೬,೦೨೪ | ೫,೦೨,೭೯೯ | ೪,೬೮,೨೭೯ | ೪,೯೭,೯೦೦ | ೪,೮೮,೫೦೦ | ೭,೨೫,೧೮೨ | ೬,೨೮,೬೮೩ |
| ಆಡು (ಮೇಕೆ) | ೨,೮೫,೦೩೫ | ೨,೭೪,೩೬೫ | ೨,೧೩,೮೭೬ | ೨,೪೪,೦೩೬ | ೧,೭೬,೫೦೦ | ೩,೮೫,೩೦೦ | ೧,೮೮,೪೦೦ | ೧,೫೭,೭೭೧ | ೨,೦೩,೩೭೪ |
| ಹಂದಿ | – | ೨೬,೫೪೬ | ೩೦,೦೪೯ | ೪೫,೯೧೨ | ೫೩,೭೬೦ | – | ೩೪,೪೦೦ | ೨೯,೦೦೦ | ೧೫,೩೨೪ |
| ಕೋಳಿ | ೭,೫೬,೬೫೫ | ೮,೭೨,೨೯೯ | ೭,೧೫,೧೩೬ | ೯,೭೦,೯೫೫ | ೮,೮೩,೬೦೮ | ೭,೪೩,೦೦೦ | ೬,೯೫,೭೦೦ | ೯,೯೬,೩೬೭ | ೧೬,೨೭,೪೨೬ |

**ಕೋಷ್ಟಕ ೮.೨೬: ಕೋಲಾರ ಜಿಲ್ಲೆಯಲ್ಲಿರುವ ಜಾನುವಾರು ಜನಸಂಖ್ಯೆಯ ವಿವರ.**

(ಸಂಖ್ಯೆಗಳಲ್ಲಿ)

| | ೧೯೬೬ | ೧೯೭೨ | ೧೯೭೭ | ೧೯೮೩ | ೧೯೯೦ | ೧೯೯೭ |
|---|---|---|---|---|---|---|
| ೧. ಪ್ರತಿ ಚ.ಕಿ.ಮೀ.ಪ್ರದೇಶದಲ್ಲಿರುವ ದನಗಳು (ಎಮ್ಮೆಗಳು ಸೇರಿ) | ೭೭ | ೮೨ | ೮೬ | ೯೧ | ೮೧ | ೮೩ |
| ೨. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ದನಗಳು (ಎಮ್ಮೆಗಳೂ ಸೇರಿ) | ೪೫,೨೫೬ | ೪೨,೩೬೩ | ೩೯,೧೫೬ | ೩೭,೪೬೦ | ೨೮,೭೮೩ | ೨೭,೮೩೨ |
| ೩. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಾಲು ಕರೆಯುವ ಹಸುಗಳು | ೩೯೪೨ | ೪,೦೧೨ | ೩,೧೮೫ | ೩,೬೩೦ | ೪೩೮೦ | ೩೯೯೧ |
| ೪. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಾಲು ಕರೆಯುವ ಎಮ್ಮೆಗಳು | ೨,೪೪೬ | ೨,೮೧೦ | ೨,೫೪೨ | ೨,೮೧೦ | ೨,೬೭೦ | ೨,೭೭೨ |
| ೫. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಕುರಿಗಳು | ೩೭,೪೯೩ | ೩೨,೧೯೯ | ೨೬,೧೧೭ | ೨೫,೦೬೦ | ೨೧,೩೮೦ | ೨೯,೭೦೮ |
| ೬. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಮೇಕೆಗಳು | ೧೫,೨೪೪ | ೧೫,೬೨೩ | ೯,೮೫೪ | ೧೯,೩೯೦ | ೮,೭೪೦ | ೬,೪೬೩ |
| ೭. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಂದಿಗಳು | ೨,೧೪೨ | ೨,೯೯೮ | ೨,೯೯೮ | ೨,೩೨೦ | ೧೫೧೦ | ೧,೧೮೦ |
| ೮. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಕೋಳಿಗಳು | ೫೦,೧೬೨ | ೬೨,೯೭೫ | ೪೯,೦೩೮ | ೩೭,೦೪೦ | ೩೦,೯೯೦ | ೨೩,೮೫೪ |
| ೯. ಪ್ರತಿ ಪಶು ವೈದ್ಯಶಾಲೆಯ ವ್ಯಾಪ್ತಿಗೆ ಒಳಪಡುವ ಜಾನುವಾರುಗಳು | ೩೭,೧೭೦ | ೩೨,೮೦೭ | ೨೨,೭೪೨ | ೨೫,೪೪೮ | ೧೦,೪೩೭ | ೧೧,೫೫೩ |

ಹಾಲು ಶೇಖರಣೆಯಾಗುತ್ತಿತ್ತು. ೨೦೦೩–೨೦೦೪ರಲ್ಲಿ ೭೩ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳು ಸೇರಿದಂತೆ ಒಟ್ಟು ೧,೪೦೭ ಹಾಲು ಉತ್ಪಾದಕರ ಸಂಘಗಳು ಕಾರ್ಯನಿರತವಾಗಿದ್ದವು. ಅವುಗಳಲ್ಲಿ ಒಟ್ಟು ೨,೭೬,೪೭೮ ಮಂದಿ ಸದಸ್ಯರಿದ್ದರು. ಅವರಲ್ಲಿ ೪೫,೬೪೮ ಭೂ ರಹಿತ ಕಾರ್ಮಿಕರು, ೯೫,೫೧೮ ಸಣ್ಣ ರೈತರು, ೯೬,೩೫೦ ಅತಿ ಸಣ್ಣ ರೈತರು ಹಾಗೂ ೩೮,೯೬೨ ಇತರೆ ಸದಸ್ಯರಿದ್ದರು. ಅವರಲ್ಲಿ ೩೮,೯೬೫ ಪರಿಶಿಷ್ಟ ಜಾತಿಗೂ, ೨೭,೭೬೨ ಮಂದಿ ಪರಿಶಿಷ್ಟ ಪಂಗಡಕ್ಕೂ ಸೇರಿದ ಹಾಗೂ ೬೦,೨೯೮ ಮಂದಿ ಮಹಿಳಾ ಸದಸ್ಯರಿದ್ದರು.

ಗಿಣ್ಣು ಉತ್ಪಾದನಾ ಸೌಲಭ್ಯಗಳನ್ನು ಬಳಸಿಕೊಂಡು ಆಗಸ್ಟ್ ೨೦೦೧ ರಿಂದ ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಸಂಸ್ಥೆಯ ಸಹಯೋಗದೊಂದಿಗೆ "ಅಮುಲ್ ಮಸ್ತಿ ದಹಿ" ಅನ್ನು ಉತ್ಪಾದಿಸಲಾಗುತ್ತಿದೆ. ಇದು ೨೦೦ ಗ್ರಾಂ ಹಾಗೂ ೪೦೦ ಗ್ರಾಂ ಪೊಟ್ಟಣಗಳಲ್ಲಿ ಲಭ್ಯವಿದ್ದು, ೨೦೦೨–೨೦೦೩ನೇ ಸಾಲಿನಲ್ಲಿ ಒಟ್ಟು ೬,೦೮,೩೪೧ ಕೆ.ಜಿ. **"ಅಮೂಲ್ ಮಸ್ತಿ ದಹಿ"**ಯನ್ನು ಬೆಂಗಳೂರು ಮೈಸೂರು ಹಾಗೂ ಚೆನ್ನೈ ನಗರಗಳಲ್ಲಿ ಮಾರಾಟ ಮಾಡಲಾಗಿದೆ.

೨೦೦೩–೨೦೦೪ರಲ್ಲಿ ಒಟ್ಟು ೭೩ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ೬೭ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳು ಸ್ಟೆಪ್ ಯೋಜನೆಯಡಿ (Support to training and employment programme for women (STEP)) ಕಾರ್ಯನಿರತವಾಗಿದ್ದವು. ಕೇಂದ್ರ ಸರ್ಕಾರ ಹಾಗೂ ಒಕ್ಕೂಟಗಳು ಕ್ರಮವಾಗಿ ೯೦:೧೦ರಂತೆ ನೀಡಿದ ಅನುದಾನದಂತೆ ವಿವಿಧ ಕಾರ್ಯಕ್ರಮಗಳನ್ನು ಈ ಯೋಜನೆಯಡಿ ಹಮ್ಮಿಕೊಳ್ಳವಾಗಿದೆ.

ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿ ತಾಲ್ಲೂಕಿಗೆ ಇಬ್ಬರಂತೆ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ಒಟ್ಟು ೪೪,೭೫೦ ರೂ.ಗಳ ಪ್ರೋತ್ಸಾಹ ಧನವನ್ನು ನೀಡಲಾಗಿದೆ. ಡೈರಿ ತಾಂತ್ರಿಕತೆ ಹಾಗೂ ಪಶು ವೈದ್ಯಕೀಯ ಪದವಿಗಾಗಿ ವ್ಯಾಸಂಗ ಮಾಡುತ್ತಿರುವ ಹಾಲು ಉತ್ಪಾದಕರ ಮಕ್ಕಳಿಗೆ ವರ್ಷಕ್ಕೆ ಒಬ್ಬರಿಗೆ ೬,೦೦೦ ರೂ. ಗಳಂತೆ ಒಟ್ಟು ರೂ. ೪೨,೦೦೦ಗಳ ಫೆಲೋಷಿಪ್ ನೀಡಲಾಗಿದೆ. ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ೧೯೯೦–೯೧ ರಿಂದ ೨೦೦೩–೨೦೦೪ರ ವರೆಗಿನ ಹಾಲಿನ ಉತ್ಪನ್ನಗಳ ವಿವರವನ್ನು ಕೋಷ್ಟಕ ೮.೨೭ರಲ್ಲಿ ನೀಡಿದೆ.

## ಖನಿಜ ಸಂಪತ್ತು

ಜಿಲ್ಲೆಯ ಆರ್ಥಿಕ ದಿಸೆಯನ್ನು ಬದಲಾಯಿಸುವ ಪ್ರಮುಖ ಸಂಪನ್ಮೂಲ ಖನಿಜ ಸಂಪತ್ತು. 'ಗೋಲ್ಡ್', 'ಸಿಲ್ಕ್' ಹಾಗೂ 'ಮಿಲ್ಕ್' ಜಿಲ್ಲೆ ಎಂಬ ಖ್ಯಾತಿಗೆ ಒಳಗಾಗಿರುವ ಕೋಲಾರ ಜಿಲ್ಲೆಯಲ್ಲಿ ದೊರೆಯುವ ಅತಿ ಮುಖ್ಯ ಖನಿಜವೆಂದರೆ ಚಿನ್ನ. ಅಲ್ಲದೇ ಅಲ್ಯೂಮಿನಿಯಂ, ಜೇಡಿಮಣ್ಣು, ಬೆಣಚುಕಲ್ಲು, ಗೋಟಕೈಟ್, ಬೆಳ್ಳಿ, ಕೋರಂಡಂ, ಗ್ರಾನೈಟ್, ಸಿಲ್ಲಿಮನೈಟ್ ಹಾಗೂ ಕಾಗೆಬಂಗಾರ ಇತರೆ ಖನಿಜ ಸಂಪನ್ಮೂಲಗಳಾಗಿವೆ. ಕೋರಂಡಂ– ಗೌರಿಬಿದನೂರು ತಾಲೂಕಿನಲ್ಲಿ ಲಭ್ಯವಿದ್ದು, ಇದನ್ನು ಉಪ್ಪು ಕಾಗದ ಅಥವಾ ಮರಳುಕಾಗದ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಜೇಡಿಮಣ್ಣು– ಮುಳಬಾಗಿಲು, ಶಿಡ್ಲಘಟ್ಟ ಹಾಗೂ ಚಿಂತಾಮಣಿ ತಾಲೂಕುಗಳಲ್ಲಿ ಲಭ್ಯವಿದ್ದು, ಇದನ್ನು ಪಿಂಗಾಣಿ, ಚೀನಿಮಣ್ಣಿನ ಪಾತ್ರೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಕ್ಯಾನೈಟ್ (Kyanite) ಹಾಗೂ ಸಿಲ್ಲಿಮನೈಟ್ ಸಕರಸಮನಹಳ್ಳಿ, ದೊಡ್ಡೇರಿ ಹಾಗೂ ಕಾಮಸಂದ್ರ ಗ್ರಾಮಗಳಲ್ಲಿ (ಬಂಗಾರಪೇಟೆ ತಾಲೂಕು) ಸಿಗುತ್ತವೆ. ಇನ್ನೂ ಹಲವು ರೀತಿಯ ಖನಿಜ ಸಂಪನ್ಮೂಲಗಳು ಜಿಲ್ಲೆಯಲ್ಲಿ ಲಭ್ಯವಿದ್ದು, ಅವುಗಳಲ್ಲಿ ಗೋಪಿಚಂದನವು ಒಂದಾಗಿದೆ. ಇದನ್ನು ಡಿಸ್ಟೆಂಪರ್, ಅಯಿಲ್ ಪೈಂಟ್ಸ್ ತಯಾರಿಸಲು ಉಪಯೋಗಿಸಲಾಗುತ್ತದೆ.

೧೯೬೩–೬೪ರಲ್ಲಿದ್ದಂತೆ ಖನಿಜಗಳು ದೊರಕುತ್ತಿದ್ದ ಪ್ರಮಾಣ ಹಾಗೂ ಅವುಗಳ ಮೌಲ್ಯವನ್ನು ಆವರಣದಲ್ಲಿ ನೀಡಿದೆ. ಚಿನ್ನ–೩೪,೩೮,೦೭೪ ಗ್ರಾಂಗಳು (ರೂ. ೧,೮೦,೭೫,೦೦೦); ಬೆಳ್ಳಿ–೨,೩೭,೪೫೬ ಗ್ರಾಂಗಳು (ರೂ. ೫೫,೦೦೦); ಫೆಲ್ಡ್ಸ್‌ಫರ್(Feldspar)–೨,೩೩೪ ಟನ್‌ಗಳು (ರೂ. ೧೯,೩೭೮); ಗ್ರಾಫೈಟ್–೬೮೧ ಟನ್ನುಗಳು (ರೂ.೧೯,೩೭೮);

## ಕೋಷ್ಟಕ ೮.೨೭: ೧೯೯೦–೯೧, ೧೯೯೫–೯೬ ಹಾಗೂ ರಿಂದ ೨೦೦೩–೨೦೦೪ರಲ್ಲಿ ಹಾಲಿನ ಉತ್ಪನ್ನಗಳ ವಿವರ

| ಕ್ರ ಸಂ | ಉತ್ಪನ್ನಗಳು | ೧೯೯೦–೧೯೯೧ | | | | ೧೯೯೫–೧೯೯೬ | | | | ೨೦೦೩–೨೦೦೪ | | | |
|---|---|---|---|---|---|---|---|---|---|---|---|---|---|
| | | ಉತ್ಪನ್ನ (ಲಕ್ಷ ಕೆ.ಜಿ. ಗಳಲ್ಲಿ) | ಉತ್ಪನ್ನದ ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಲಕ್ಷ ಕೆ.ಜಿ ಗಳಲ್ಲಿ) | ಮಾರಾಟದ ಮೌಲ್ಯ (ರೂ. ಲಕ್ಷಗಳಲ್ಲಿ | ಉತ್ಪನ್ನ (ಲಕ್ಷ ಕೆ.ಜಿ.ಗಳಲ್ಲಿ) | ಉತ್ಪನ್ನದ ಮೌಲ್ಯ (ರೂ. ಲಕ್ಷಗಳಲ್ಲಿ) | ಮಾರಾಟ (ಲಕ್ಷ ಕೆ.ಜಿ. ಗಳಲ್ಲಿ) | ಮಾರಾಟದ ಮೌಲ್ಯ (ರೂ. ಲಕ್ಷ ಗಳಲ್ಲಿ) | ಉತ್ಪನ್ನ (ಲಕ್ಷ ಕೆ.ಜಿ. ಗಳಲ್ಲಿ) | ಉತ್ಪನ್ನದ ಮೌಲ್ಯ (ರೂ. ಲಕ್ಷ ಗಳಲ್ಲಿ) | ಮಾರಾಟ (ಲಕ್ಷ ಕೆ.ಜಿ. ಗಳಲ್ಲಿ) | ಮಾರಾಟದ ಮೌಲ್ಯ (ರೂ. ಲಕ್ಷಗಳಲ್ಲಿ) |
| ೧ | ಸ್ವೀಕರಿಸಿದ ಹಾಲು | – | ೧೮೦೨.೭೫ | – | – | ೧೧೫೨.೭೭ | ೭೭೦೧.೭೫ | – | – | ೨೦೬೨.೮೧ | ೧೮೫೮೮.೬೦ | – | – |
| ೨ | ಮಾರಾಟ ಮಾಡಿದ ಹಾಲು | – | – | – | ೧೯೬೦.೯೪ | – | – | ೧೧೫೫.೩೦ | ೮೫೭೭.೯೮ | – | – | ೧೭೭೧.೧೮ | ೧೮೯೨೩.೬೬ |
| ೩ | ತುಪ್ಪ | – | – | – | – | ೨.೫೭ | ೨೦೨.೭೪ | ೨.೪೭ | ೧೯೫.೪೯ | ೦.೦೧ | ೧.೩೯ | ೭.೯೦ | ೯೨೮.೫೭ |
| ೪ | ಬೆಣ್ಣೆ | – | – | – | – | ೨.೭೩ | ೧೬೨.೬೫ | ೦.೫೮ | ೩೪.೫೭ | – | – | ೨೨.೩೬ | ೧೨೫೬.೮೧ |
| ೫ | ಮೊಸರು | – | – | – | – | – | – | – | – | – | – | – | ೧೬೦.೩೫ |
| ೬ | ಪೇಡಾ | – | – | – | – | ೦.೦೩ | ೩.೯೦ | ೦.೦೩ | ೩.೩೨ | – | – | ೦.೦೭ | ೫.೭೧ |
| ೭ | ಮಜ್ಜಿಗೆ | – | – | – | – | – | – | – | – | – | – | – | ೨೪.೦೦ |
| ೮ | ಹಾಲಿನ ಪುಡಿ | – | – | – | – | ೦.೨೪ | ೧೩.೦೭ | ೧.೭೯ | ೯೭.೫೬ | ೦.೦೨ | ೧.೬೭ | ೨೯.೮೬ | ೨೫೧೭.೩೬ |

ಆಧಾರ: ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಕೋಲಾರ.

೧) ಹಾಲಿನ ಉತ್ಪನ್ನಗಳಾದ ತುಪ್ಪ ಬೆಣ್ಣೆ ಮೊಸರು, ಪೇಡಾ, ಮಜ್ಜಿಗೆ ಮತ್ತು ಹಾಲಿನ ಪುಡಿಯ ಉತ್ಪಾದನೆಯು ೧೯೯೦–೯೧ರ ಅವಧಿಯಲ್ಲಿ ಇರುವುದಿಲ್ಲ.

೨) ಹಾಲಿನ ಉತ್ಪನ್ನಗಳಾದ ಮೊಸರು ಮತ್ತು ಮಜ್ಜಿಗೆಯ ಉತ್ಪಾದನೆಯು ೧೯೯೫–೯೬ರ ಅವಧಿಯಲ್ಲಿ ಇರುವುದಿಲ್ಲ.

ಜೇಡಿಮಣ್ಣು–೩೮೧ ಟನ್ನುಗಳು (ರೂ. ೨,೬೦೨) ಹಾಗೂ ಆಕರ್–೧೭೨ ಟನ್ನು (ರೂ.೧,೫೮೦) ಆಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೮ ಅನ್ನು ನೋಡಿ.

**ಕೋಷ್ಟಕ ೮.೨೮: ಕೋಲಾರ ಜಿಲ್ಲೆಯಲ್ಲಿ ಲಭ್ಯವಿರುವ ಖನಿಜಸಂಪನ್ಮೂಲಗಳ ವಿವರ**

ಉತ್ಪನ್ನ: ಟನ್ನುಗಳಲ್ಲಿ
ಮೌಲ್ಯ: ಲಕ್ಷ ರೂ.ಗಳಲ್ಲಿ

| ಕ್ರ ಸಂ. | ಖನಿಜಗಳು | | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
|---|---|---|---|---|---|---|---|---|
| ೧ | ಚಿನ್ನ (ಕೆ.ಜಿಗಳಲ್ಲಿ) | ಉತ್ಪನ್ನ | ೧೬೧೭೭೭೨ | ೭೯೭೧೮ ಕೆಜಿ | ೨೪೭೨೪ ಕೆಜಿ | ೪೦೨೯೧ ಕೆಜಿ | ೫೫ ಕೆಜಿ | – |
| | | ಮೌಲ್ಯ | ೧೩೬೫೪ | ೧೪೭೭೭೭ | – | ೪೪೩೩ | – | – |
| ೨ | ಬೆಳ್ಳಿ (ಕೆ.ಜಿಗಳಲ್ಲಿ) | ಉತ್ಪನ್ನ | ೧೧೬೫೪ | ೬೨೭೦ | – | ೩೧೫೧ | ೦೩ ಕೆಜಿ | – |
| | | ಮೌಲ್ಯ | ೩೧೩ | – | – | ೦.೧೧ | – | – |
| ೩ | ಕ್ವಾರ್ಟ್ಸ್ | ಉತ್ಪನ್ನ | ೪೯ | ೧೮ | – | ೨೨೦ | ೮೭ | – |
| | | ಮೌಲ್ಯ | ೦.೧೧ | ೦.೦೪ | – | ೦.೦೨ | – | – |
| ೪ | ಚೈನಾ ಕ್ಲೇ | ಉತ್ಪನ್ನ | ೨೬೭೫ | ೯೩೦ | ೧೦೦ | – | – | – |
| | | ಮೌಲ್ಯ | ೦.೫೪ | ೦.೨೩ | – | – | – | – |
| ೫ | ಬಿಲ್ಡಿಂಗ್ ಸ್ಟೋನ್ | ಉತ್ಪನ್ನ | ೭೭೮೪ | ೨೦೮೫೪ | ೧೦೩,೮೮ | ೧,೯೨,೮೨೫ | ೩,೪೧,೮೪೭ | ೩,೮೯,೩೩೭ |
| | | ಮೌಲ್ಯ | ೦.೭೮ | ೪.೧೭ | – | – | – | – |
| ೬ | ಆರ್ನಮೆಂಟಲ್ ಸ್ಟೋನ್ | ಉತ್ಪನ್ನ | ೩೦೪೭ | ೯೫೪ | ೪೨೭೫ CUM | ೯೧೬೮೬೫೧ CUM | ೭೯ CUM | – |
| | | ಮೌಲ್ಯ | ೧.೮೩ | ೨೩.೪೪ | – | – | – | – |
| ೭ | ಆರ್ಡಿನರಿ ಮರಳು | ಉತ್ಪನ್ನ | ೬೩೪ | ೧೦೫೯ | – | ೨೨೦೦ | ೨೫೦೦ | ೫೮,೦೦೦ |
| | | ಮೌಲ್ಯ | ೦.೩೭ | ೦.೫೩ | – | – | – | – |
| ೮ | ಲೈಮ್ ಸ್ಟೋನ್ | ಉತ್ಪನ್ನ | ೯೪೬ | – | – | – | – | – |
| | | ಮೌಲ್ಯ | ೦.೯೫ | – | – | – | – | – |

## ಕೈಗಾರಿಕೆ

ಭಾರತ್ ಗೋಲ್ಡ್ ಮೈನ್ಸ್ (ಬಿ.ಜಿ.ಎಂ.ಎಲ್) ಪ್ರಸ್ತುತ ಮುಚ್ಚಿದೆ ಹಾಗೂ ಭಾರತ್ ಅರ್ಥ್ ಮೂವರ್ಸ್ ಲಿ., (ಬಿ.ಇ.ಎಂ.ಎಲ್.) ಜಿಲ್ಲೆಯ ಪ್ರಮುಖ ಕೈಗಾರಿಕೆಗಳಾಗಿದ್ದು, ಇವು ಬಂಗಾರಪೇಟೆ ತಾಲೂಕಿನ ಕೆ.ಜಿ.ಎಫ್.ನಲ್ಲಿ ನೆಲೆಗೊಂಡಿವೆ. ಗೌರಿಬಿದನೂರಿನ ಸಹಕಾರಿ ಸಕ್ಕರೆ ಕಾರ್ಖಾನೆ ೨೦೦೦ದಿಂದ ಮುಚ್ಚಲ್ಪಟ್ಟಿದೆ. ಗೌರಿ ಡಿಸ್ಟಿಲರೀಸ್ ಗೌರಿಬಿದನೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಪಕರಣಗಳ ತಯಾರಿಕಾ ಕಾರ್ಖಾನೆ, ಹೆಂಚಿನ ತಯಾರಿಕೆ, ಇಟ್ಟಿಗೆ, ಸಾಬೂನು, ಬೆಂಕಿಪಟ್ಟಣ, ಪ್ಲಾಸ್ಟಿಕ್ ಕಾರ್ಖಾನೆ ಹಾಗೂ ಕಲ್ಲು ಮೆರಗು ಮಾಡುವ ಇತರೆ ಕಾರ್ಖಾನೆಗಳಾಗಿವೆ. ಬೀಡಿ, ಅಗರಬತ್ತಿ ತಯಾರಿಕೆ, ಕಂಬಳಿ ನೆಯ್ಯುವಿಕೆ ಮುಂತಾದ ಗೃಹ ಕೈಗಾರಿಕೆಗಳು ಸಹ ಕಾರ್ಯನಿರತವಾಗಿವೆ. ಮಾರ್ಚ್ ೨೦೦೪ರ ಅಂತ್ಯಕ್ಕೆ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ತಾಲೂಕುವಾರು ವಿವರ ಹೀಗಿದ್ದಿತು. ಬಂಗಾರಪೇಟೆ (೦೩) ಚಿಕ್ಕಬಳ್ಳಾಪುರ (೦೬),

ಗೌರಿಬಿದನೂರು (೦೨) ಕೋಲಾರ (೦೭) ಹಾಗೂ ಮಾಲೂರು (೦೨) ಹೀಗೆ ಒಟ್ಟು ೨೦ ಕೈಗಾರಿಕೆಗಳಿದ್ದವು. ಇವುಗಳಲ್ಲಿ ೨೭,೭೮೫ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದ್ದು, ೧೬,೫೫೩.೪೯ ಜನರಿಗೆ ಉದ್ಯೋಗ ಒದಗಿಸಿವೆ. ಇದೇ ಅವಧಿಯಲ್ಲಿ ೧೧,೬೮೩ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ೩೩,೫೪೫ ಲಕ್ಷ ರೂ. ಬಂಡವಾಳ ತೊಡಗಿಸಿ ೭೫,೩೯ ಮಂದಿಗೆ ಉದ್ಯೋಗ ಒದಗಿಸಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೯**

| | ೧೯೭೧ | ೧೯೮೧ | ೧೯೯೧ | ೧೯೯೫–೬೬ | ೧೯೯೯–೨೦೦೦ | ೨೦೦೦–೦೧ |
|---|---|---|---|---|---|---|
| **ಪ್ರತಿ ನೋಂದಾಯಿತ ಕಾರ್ಖಾನೆಗೆ ಲಭ್ಯವಿರುವ ಜನರ ಸಂಖ್ಯೆ** | ೨೦,೨೨೩ | ೧೮,೩೨೨ | ೧೮,೬೦೭ | ೧೭,೪೦೯ | ೧೨,೯೬೪ | ೧೪,೮೪೩ |
| **ಪ್ರತಿ ನೋಂದಾಯಿತ ಕಾರ್ಖಾನೆ–ಯಲ್ಲಿರುವ ಉದ್ಯೋಗಿಗಳ ಸಂಖ್ಯೆ** | ೬೫ | ೬೨ | ೧೩೦ | ೧೨೮ | ೧೧೭ | ೧೧೭ |

| **ಸಂಘಟಿತ ಕ್ಷೇತ್ರದಲ್ಲಿ ಶೇಕಡ ಮಹಿಳಾ ಉದ್ಯೋಗಿಗಳು** | ಮಾರ್ಚ್ ೧೯೯೯ | | | ಮಾರ್ಚ್ ೨೦೦೧ | | |
|---|---|---|---|---|---|---|
| | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು |
| | ೪.೫೧ | ೦.೬೫ | ೨.೩೧ | ೪.೫೯ | ೦.೬೫ | ೨.೪೧ |

| **ಕಾರ್ಖಾನೆಗಳ ಸಂಖ್ಯೆ ಹಾಗೂ ಉದ್ಯೋಗಿಗಳು(ಶೇಕಡ)** | ಕಾರ್ಖಾನೆಗಳ ಸಂಖ್ಯೆ | ಉದ್ಯೋಗಿಗಳು (ಶೇಕಡ) | |
|---|---|---|---|
| | ಮಾರ್ಚ್ ೨೦೦೧ರಲ್ಲಿ ಇದ್ದಂತೆ | ಮಾರ್ಚ್ ೧೯೯೯ | ಮಾರ್ಚ್ ೨೦೦೧ |
| | ೯೭೦ | ೩.೧೩ | ೩.೦೧ |

## ವಿದ್ಯುಚ್ಛಕ್ತಿ

ಕೋಲಾರ ಜಿಲ್ಲೆಯು ಚಿನ್ನದಗಣಿಯಿಂದಾಗಿ ೧೬–೦೭–೧೯೦೨ರಲ್ಲಿ ವಿದ್ಯುತ್ ಸೌಲಭ್ಯ ಪಡೆದ ಪ್ರಥಮ ಜಿಲ್ಲೆಯಾಗಿದೆ. ಮಂಡ್ಯ ಜಿಲ್ಲೆಯ ಶಿವನಸಮುದ್ರದ ಸರ್. ಕೆ. ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ೧೯೦೨ರಲ್ಲಿ ಉತ್ಪಾದಿಸಲ್ಪಟ್ಟ ವಿದ್ಯುತ್‌ನ್ನು ಕೋಲಾರದ ಚಿನ್ನದ ಗಣಿಗೆ ಸರಬರಾಜು ಮಾಡಲಾಯಿತು. ಜಿಲ್ಲೆಯಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಾಗಲೀ ಅಥವಾ ಥರ್ಮಲ್ ವಿದ್ಯುತ್ ಉತ್ಪಾದನಾ ಕೇಂದ್ರವಾಗಲೀ ಇಲ್ಲದಿರುವುದರಿಂದ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿಲ್ಲ. ನಂತರ ವಿದ್ಯುತ್ ಸರಬರಾಜನ್ನು ಜಿಲ್ಲೆಯ ಬೌರಿಂಗ್ ಪೇಟೆಯು ೨೬–೦೯–೧೯೨೭ರಲ್ಲಿ ಪಡೆದುಕೊಂಡಿತು. ತಾಲೂಕುವಾರು ವಿದ್ಯುತ್ ಪಡೆದ ಊರುಗಳ ಮಾಹಿತಿಯನ್ನು ಕೋಷ್ಟಕ ೮.೩೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೦: ತಾಲೂಕುವಾರು ವಿದ್ಯುತ್ ಪಡೆದ ಊರು ಹಾಗೂ ದಿನಾಂಕಗಳ ವಿವರ.**

| ತಾಲೂಕು | ಊರುಗಳು | ವಿದ್ಯುತ್ ಪಡೆದ ದಿನಾಂಕ | ತಾಲೂಕು | ಊರುಗಳು | ವಿದ್ಯುತ್ ಪಡೆದ ದಿನಾಂಕ |
|---|---|---|---|---|---|
| **ಚಿಕ್ಕಬಳ್ಳಾಪುರ** | ಚಿಕ್ಕಬಳ್ಳಾಪುರ | ೨೮–೦೨–೩೨ | | ಕಂದಾವಾರ | ೦೪–೦೬–೩೨ |
| | ದಿನ್ನೇಹಳ್ಳಿ | ೧೭–೦೫–೩೩ | | ನಂದಿ | ೩೦–೦೧–೩೩ |
| | ಗಂಗನಮಿದ್ದೆ | ೨೦–೦೮–೩೨ | | ಸುಲ್ತಾನಪೇಟೆ | ೩೦–೦೧–೩೩ |
| | ಗೇರುಹಳ್ಳಿ | ೧೭–೦೫–೩೩ | | ತಿಪ್ಪೇನಹಳ್ಳಿ | ೧೭–೦೫–೩೩ |

ಮುಂದುವರಿದಿದೆ.............

| ತಾಲೂಕು | ಊರುಗಳು | ವಿದ್ಯುತ್ ಪಡೆದ ದಿನಾಂಕ | ತಾಲೂಕು | ಊರುಗಳು | ವಿದ್ಯುತ್ ಪಡೆದ ದಿನಾಂಕ |
|---|---|---|---|---|---|
| **ಗೌರಿಬಿದನೂರು** | ಗೌರಿಬಿದನೂರು | ೩೧–೦೫–೩೩ | **ಮಾಲೂರು** | ದೊಡ್ಡಕಡತೂರು | ೦೭–೦೪–೩೪ |
| | ಗೋಟಕನಪುರ | ೦೮–೦೬–೩೫ | | ದೊಡ್ಡಶಿವರ | ೦೭–೦೪–೩೪ |
| | ಗೌಡಗೆರೆ | ೦೧–೦೮–೩೩ | | ಹೊಂಗೇನಹಳ್ಳಿ | ೧೬–೦೭–೩೪ |
| | ಮಂಚನಹಳ್ಳಿ | ೨೧–೧೨–೩೩ | | ಮಾಲೂರು | ೦೩–೦೯–೩೨ |
| | ಮಂಚೇನಹಳ್ಳಿ | ೧೬–೦೬–೩೪ | | ಕಪ್ಪಲಮಡಗು | ೨೫–೦೧–೩೫ |
| | ವಿದುರಾಶ್ವತ್ಥ | ೧೯–೦೬–೩೭ | | ವರದೇನಹಳ್ಳಿ | ೦೩–೦೧–೩೪ |
| **ಶಿಡ್ಲಘಟ್ಟ** | ಮೇಲೂರು | ೧೬–೦೪–೩೬ | | ಲಕ್ಕೂರು | ೨೫–೦೭–೩೬ |
| | ಮಳ್ಳೂರು | ೨೧–೧೦–೩೬ | | ಚಿಕ್ಕತಿರುಪತಿ | ೨೫–೦೭–೩೬ |
| | ಮುತ್ತೂರು | ೨೧–೧೦–೩೬ | | ಕಲ್ಕೆರೆ | ೨೫–೦೭–೩೬ |
| **ಕೋಲಾರ** | ಬೆಲ್ಲಂಬರಿ | ೩೧–೦೧–೩೨ | **ಮುಳಬಾಗಿಲು** | ಗೋಗಲಕಸ್ತಿ | ೨೯–೦೬–೩೧ |
| | ಕೋಡಿಕನ್ನೂರು | ೨೪–೦೪–೩೧ | | ಕನ್ನಸಂದ್ರ | ೦೬–೧೧–೩೧ |
| | ಕೋಲಾರ | ೩೦–೧೦೨೯ | | ಮಲಿಕತನಹಳ್ಳಿ | ೨೩–೦೮–೩೨ |
| | ಪೇಟೆಚನ್ನಹಳ್ಳಿ | ೦೮–೦೮–೩೩ | | ಮಂಚಗನಹಳ್ಳಿ | ೨೩–೦೮–೩೨ |
| | ಒಕ್ಕಲೇರಿ | ೨೬–೦೭–೩೭ | | ಮೋಟಕಪಲ್ಲಿ | ೦೯–೧೦–೩೦ |
| **ಬೌರಿಂಗ್‌ಪೇಟೆ** | ಬೇತಮಂಗಲ | ೧೮–೦೩–೩೧ | | ಮುಳಬಾಗಿಲು | ೦೧–೧೦–೩೨ |
| | ಬೌರಿಂಗಪೇಟೆ | ೨೬–೦೯–೨೭ | | ಮೊದಕಸ್ತಿ | ೦೯–೧೦–೩೨ |
| | ಕೆ.ಜಿ.ಎಫ್ | ೧೬–೦೭–೦೨ | | ಸೊನ್ನವಾಡಿ | ೨೩–೦೮–೩೨ |
| | ಸುಂದರಪಾಳ್ಯ | ೦೨–೧೨–೩೨ | | ತಾಯಲೂರು | ೦೫–೧೧–೩೧ |
| **ಚಿಂತಾಮಣಿ** | ಚಿಂತಾಮಣಿ | ೨೭–೧೧–೩೩ | | ತಿರುಮನಹಳ್ಳಿ | ೧೦–೦೩–೩೧ |
| | ಕೈವಾರ | ೧೦–೦೫–೩೪ | | | |
| | ಮೈಲಾಪುರ | ೧೦–೦೫–೩೪ | | | |
| | ತಲಗವರ | ೧೦–೦೫–೩೪ | | | |

೧೯೬೮–೬೯ರಲ್ಲಿ ಜಿಲ್ಲೆಯಲ್ಲಿ ೧,೧೧೦ ಹಳ್ಳಿಗಳು (೧೬,೨೩೮) ವಿದ್ಯುದ್ದೀಕರಣಗೊಂಡಿದ್ದರೆ, ೧೯೭೦–೭೧ರಲ್ಲಿ ೧,೩೫೧ ಹಳ್ಳಿಗಳು (೨೧,೪೪೪), ೧೯೮೦–೮೧ರಲ್ಲಿ ೨,೦೧೮ ಹಳ್ಳಿಗಳು (೪೫,೧೨೩), ೧೯೯೦–೯೧ರಲ್ಲಿ ೨,೮೨೪ ಹಳ್ಳಿಗಳು (೮೮,೮೦೦) ಹಾಗೂ ೨೦೦೦–೦೧ರಲ್ಲಿ ೨,೮೩೫ ಹಳ್ಳಿಗಳು (೧,೨೨,೯೧೦) ವಿದ್ಯುದ್ದೀಕರಣಗೊಂಡಿದ್ದವು. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣವನ್ನು ಸೂಚಿಸುತ್ತವೆ. ೨೦೦೧ರ ಜನಗಣತಿ ಪ್ರಕಾರ ೨,೮೮೯ ಜನವಸತಿ ಇರುವ ಗ್ರಾಮಗಳಿದ್ದು, ೨೮೩೫ ಹಳ್ಳಿಗಳು ಹಾಗೂ ೮೫೫ ಉಪಗ್ರಾಮಗಳು (ಪಾಳ್ಯಗಳು) ವಿದ್ಯುದ್ದೀಕರಣ ಗೊಂಡಿದ್ದವು. ೧,೨೨,೯೧೦ ನೀರಾವರಿ ಪಂಪ್‌ಸೆಟ್ಟುಗಳು ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದವು. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿದ್ದಂತೆ ವರ್ಗವಾರು ಬಳಕೆದಾರರ ವಿವರಗಳನ್ನು ಕೋಷ್ಟಕ ೮.೩೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೧: ಕೋಲಾರ ಜಿಲ್ಲೆಯಲ್ಲಿ ಪ್ರವರ್ಗವಾರು ವಿದ್ಯುತ್ ಬಳಕೆದಾರರ ವಿವರ**

(ಸಂಖ್ಯೆಗಳಲ್ಲಿ)

| ಕ್ರ ಸಂ. | ವಿವರ | ೧೯೯೪-೯೫ | ೧೯೯೬-೯೭ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೩-೦೪ |
|---|---|---|---|---|---|---|---|---|
| ೧ | ಗೃಹ ಬಳಕೆ | ೨,೩೦,೦೭೧ | ೨,೪೯,೪೭೯ | ೨,೭೩,೧೭೧ | ೨,೮೨,೨೪೫ | ೨,೯೩,೪೬೩ | ೩,೨೩,೧೭೫ | ೩,೭೫,೩೪೯ |
| ೨ | ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | – | – | ೧,೦೨,೧೬೦ | ೧,೧೦,೩೦೭ | ೧,೨೦,೮೯೧ | ೧,೨೯,೬೫೧ | ೧,೨೫,೨೮೪ |
| ೩ | ಸಂಪೂರ್ಣ ವಿದ್ಯುತ್ ಗೃಹ | ೨೪,೦೭೧ | ೨೬,೦೬೦ | ೨೭,೯೮೯ | ೨೮,೭೯೦ | ೨೯,೬೩೬ | ೩೦,೩೬೩ | ೩೨,೯೧೬ |
| ೪ | ವಾಣಿಜ್ಯ ದೀಪ | ೨೭,೦೧೬ | ೨೯,೪೮೦ | ೩೨,೨೧೮ | ೩೬,೬೬೬ | ೩೮,೫೧೧ | ೪೧,೫೯೯ | ೪೪,೭೦೪ |
| ೫ | ಎಲ್.ಟಿ.ಪವರ್ | ೧೦,೭೧೪ | ೧,೨೩,೪೬೦ | ೧೪,೧೫೨ | ೧೫,೬೭೪ | ೧೬,೬೦೬ | ೧೭,೬೩೭ | ೧೯,೦೭೭ |
| ೬ | ಐ.ಪಿ.ಸೆಟ್ಟುಗಳು | ೧,೦೩,೯೯೨ | ೧,೧೨,೫೧೬ | ೧,೧೭,೪೦೧ | ೧,೧೯,೫೨೮ | ೧,೨೨,೯೧೦ | ೧,೨೫,೩೫೬ | ೧,೨೭,೭೧೨ |
| ೭ | ಹೆಚ್.ಟಿ.ಪವರ್ | ೫೧ | ೬೩ | ೬೭ | ೭೩ | ೫೮ | ೯೭ | ೧೫ |
| ೮ | ಬೀದಿ ದೀಪಗಳು | ೩೨,೩೦೪ | ೩೨,೮೩೬ | ೩೩,೦೩೩ | ೫೧,೬೦೨ | ೫೧,೬೪೪ | ೫೧,೮೨೩ | ೩,೮೦೪ |
| | ಒಟ್ಟು (ಬೀದಿ ದೀಪ ಹೊರತುಪಡಿಸಿ) | ೩,೯೫,೯೧೬ | ೫,೪೧,೦೫೮ | ೫,೬೭,೧೫೮ | ೫,೯೩,೨೮೩ | ೬,೨೨,೦೮೫ | ೬,೬೭,೮೭೮ | ೭,೨೫,೦೫೭ |

ಸೂಚನೆ: ಎಲ್. ಟಿ. ಪವರ್‌ನಲ್ಲಿ ಜಲ ಕಾಮಗಾರಿಗಳು ಸೇರಿವೆ.

ಕರ್ನಾಟಕ ರಾಜ್ಯವೂ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ವಿದ್ಯುತ್ ಪರಿಸ್ಥಿತಿಯನ್ನು ಸುಧಾರಿಸಲು ಕೇಂದ್ರ ಪವರ್ ಗ್ರಿಡ್ (ಪಿ.ಜಿ.ಸಿ.ಐ.ಎಲ್) ಒರಿಸ್ಸಾದ ತಲಚೇರಿಯಿಂದ ಕರ್ನಾಟಕದ ಕೋಲಾರದವರೆಗೆ ಪ್ರಪಂಚದಲ್ಲೇ ಅತೀ ಉದ್ದವಾದ(೧,೩೬೭ ಕಿ.ಮೀ.) ಡಿ.ಸಿ.ಟ್ರಾನ್ಸ್‌ಮಿಷನ್ ಲೈನ್ ಅನ್ನು ದಿನಾಂಕ ೧೪-೦೩-೨೦೦೩ರಂದು ರಾಷ್ಟ್ರಕ್ಕೆ ಸಮರ್ಪಿಸಲಾಯಿತು. ಹೆಚ್ಚಿನ ವಿವರಗಳಿಗೆ ಅಧ್ಯಾಯ-೫ ಅನ್ನು ನೋಡಿ.

## ಸಾರಿಗೆ ಮತ್ತು ಸಂಪರ್ಕ

ಸಾರಿಗೆ ಸಾರ್ವಜನಿಕ ಉಪಯುಕ್ತ ಸೇವೆಯಾಗಿದ್ದು, ಇದು ಸರಕು ಮತ್ತು ಸೇವೆಗಳಿಗೆ ಸ್ಥಳ ಮತ್ತು ಕಾಲ ತುಷ್ಟಿ ಗುಣವನ್ನು ನೀಡುತ್ತದೆ. ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಅಗತ್ಯವಾದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲ ಉತ್ಪಾದನಾಶೀಲ, ಕೃಷಿ, ಪ್ರಗತಿಶೀಲ ಕೈಗಾರಿಕೆ, ಕ್ರಿಯಾಶೀಲ ವಾಣಿಜ್ಯ, ಉದ್ಯಮ ಶೀಲ ಬ್ಯಾಂಕಿಂಗ್‌ಗಳಂತಹ ವಿವಿಧ ಆರ್ಥಿಕ ಚಟುವಟಿಕೆಗಳ ನಡುವೆ ಸಮನ್ವಯ ಸಾಧಿಸುವ ಸಂಪರ್ಕ ಸೇತುವೆ ಯಾಗಿರುವುದು ಉಲ್ಲೇಖಾರ್ಹವಾಗಿದೆ. ಸಾರಿಗೆ ಒಂದು ಆರ್ಥಿಕ ವ್ಯವಸ್ಥೆಯ ಜೀವನಾಡಿ ಇದ್ದಂತೆ. ಆಗಾಗಿ ಕೃಷಿ ಮತ್ತು ಕೈಗಾರಿಕೆಗಳನ್ನು ಕ್ರಮವಾಗಿ ಮಾನವನ ಶರೀರ ಮತ್ತು ಮೂಳೆಗಳಿಗೆ ಹೋಲಿಸಿದರೆ, ಸಾರಿಗೆಯನ್ನು ದೇಹದ ನರಮಂಡಲಕ್ಕೆ ಹೋಲಿಸಿರುವುದು ಸಾರಿಗೆಯ ಮಹತ್ವವನ್ನು ಸಾರುತ್ತದೆ.

ಕೋಲಾರ ಜಿಲ್ಲೆಯಲ್ಲಿ ೧೯೫೬ರಲ್ಲಿ ೧೧೭ ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳಿದ್ದದ್ದು, ೧೯೮೬ ವರೆವಿಗೂ ಈ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಆದರೆ ಇದು ೧೯೯೨ರಲ್ಲಿ ೧೨೧ ಕಿ.ಮೀ.ಗಳಿಗೆ ಹೆಚ್ಚಳಗೊಂಡಿತು. ೧೯೯೯ರಿಂದ ೨೦೦೪ರವರೆಗೂ ೧೨೯ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಗಳಿರುವುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ಹಾಗೆಯೇ ೧೯೫೬ರಲ್ಲಿ ೮೧ ಕಿ.ಮೀ.ಉದ್ದದ ರಾಜ್ಯ ಹೆದ್ದಾರಿಗಳಿದ್ದು, ಇದು ೧೯೭೧ರಿಂದ ೧೯೭೩ರವರೆಗೆ ೧೮೭ಕಿ.ಮೀ., ೧೯೭೬ರಲ್ಲಿ ೨೩೭ ಕಿ.ಮೀ., ೧೯೮೦ರಿಂದ ೧೯೮೬ರವರೆಗೂ ೨೭೦ ಕಿ.ಮೀ., ೧೯೯೨ರಲ್ಲಿ ೩೯೩ ಕಿ.ಮೀ., ಹಾಗೂ ೧೯೯೬ರಿಂದ ೨೦೦೨ರ ಮಾರ್ಚ್ ಅಂತ್ಯದವರೆಗೂ ೪೩೩ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಜಿಲ್ಲೆಯಲ್ಲಿತ್ತು. ೨೦೦೨ರ ಮಾರ್ಚ್ ಅಂತ್ಯಕ್ಕೆ

೧೫೯೯ ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು, ೬೦ ಕಿ.ಮೀ. ಉದ್ದದ ಇತರ ಜಿಲ್ಲಾ ರಸ್ತೆಗಳು, ೪,೩೭೭ ಕಿ.ಮೀ. ಉದ್ದದ ಗ್ರಾಮಾಂತರ ರಸ್ತೆಗಳಿದ್ದವು. ಅಲ್ಲದೇ ೨೫೬೮ ಕಿ.ಮೀ. ಉದ್ದದ ತಾಲೂಕು ಬೋರ್ಡ್ ರಸ್ತೆ ೭೨ ಕಿ.ಮೀ. ಉದ್ದದ ನೀರಾವರಿ ರಸ್ತೆ ೨೪ ಕಿ.ಮೀ. ಉದ್ದದ ಅರಣ್ಯ ರಸ್ತೆಗಳಿದ್ದು, ಇವು ರಸ್ತೆಜಾಲದ ವಿಸ್ತರಣೆಯ ಕುರುಹುಗಳಾಗಿದೆ. ಅಲ್ಲದೇ ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿವೆ.

ಜಿಲ್ಲೆಯಲ್ಲಿ ೨೦೦೩ರ ಮಾರ್ಚ್ ಅಂತ್ಯದಲ್ಲಿದ್ದಂತೆ ೧೯೮ ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ ೧೨೨.೪೪ ಕಿ.ಮೀ. ಬ್ರಾಡ್‌ಗೇಜ್ ಮಾರ್ಗವಷ್ಟೇ ಕಾರ್ಯನಿರ್ವಹಿಸುತ್ತಿದ್ದು, ಉಳಿದ ೭೬ ಕಿ.ಮೀ. ನ್ಯಾರೋಗೇಜ್ ಮಾರ್ಗವು ಕಾರ್ಯ ನಿರ್ವಹಿಸುತ್ತಿರದೆ ಸಂಚಾರ ಸ್ಥಗಿತಗೊಂಡಿದೆ. ಬೆಂಗಳೂರಿಗೆ ೭೦ ಕಿ.ಮೀ. ದೂರದಲ್ಲಿರುವ ಕೋಲಾರ ಜಿಲ್ಲೆಯು ನೆರೆಯ ಚೆನ್ನೈ ಹಾಗೂ ಆಂಧ್ರ ರಾಜ್ಯಗಳೊಂದಿಗೆ ರೈಲು ಸಂಪರ್ಕ ಹೊಂದಿದೆ. ಬೆಂಗಳೂರು–ಮದ್ರಾಸ್ ರೈಲು ಮಾರ್ಗವು ಜಿಲ್ಲೆಯ ಮಾಲೂರು ಹಾಗೂ ಬಂಗಾರಪೇಟೆ ತಾಲೂಕುಗಳಲ್ಲಿ ಹಾದು ಹೋಗುತ್ತದೆ. ಹಾಗೆಯೇ ಬಂಗಾರಪೇಟೆ–ಮಾರಿಕುಪ್ಪಂ, ಬೆಂಗಳೂರು–ಗುಂತಕಲ್, ಬೆಂಗಳೂರು–ಚಿಕ್ಕಬಳ್ಳಾಪುರ, ಬಂಗಾರಪೇಟೆ–ಕೋಲಾರಗಳ ನಡುವೆ ರೈಲು ಮಾರ್ಗಗಳಿರುವುದು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ. ಜಿಲ್ಲೆಯಲ್ಲಿರುವ ವಿವಿಧ ರೈಲು ಮಾರ್ಗಗಳಲ್ಲಿ ಒಟ್ಟು ೧೭ ರೈಲು ನಿಲ್ದಾಣಗಳಿವೆ.

**ಅಂಚೆ ಕಚೇರಿಗಳು:** ಅಂಚೆ ಕಚೇರಿಗಳು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾದ ಮತ್ತೊಂದು ಸಂಪರ್ಕ ಮಾಧ್ಯಮವಾಗಿವೆ. ೧೯೭೪ರ ವೇಳೆಗೆ ೨೫ ದೂರವಾಣಿ ವಿನಿಮಯ ಕೇಂದ್ರಗಳಿದ್ದು, ಕೇವಲ ೨,೦೨೦ ದೂರವಾಣಿಗಳಿದ್ದವು. ೧೯೯೧ರಲ್ಲಿ ೮೬ ವಿನಿಮಯ ಕೇಂದ್ರಗಳಿದ್ದು, ೮,೦೮೧ ದೂರವಾಣಿಸಂಪರ್ಕಗಳಿದ್ದವು. ಇವುಗಳ ಸಂಖ್ಯೆ ೧೯೯೬ರಲ್ಲಿ ಕ್ರಮವಾಗಿ ೧೦೩ಕ್ಕೂ ಹಾಗೂ ೧೯,೮೩೧ ಆಗಿದ್ದವು. ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ೪೨೨ ಅಂಚೆ ಕಚೇರಿಗಳು, ೨೧೮ ತಂತಿ ಕಚೇರಿಗಳು, ೧೪೩ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೮೮,೫೨೬ ದೂರವಾಣಿಸಂಪರ್ಕಗಳು ಚಾಲ್ತಿಯಲ್ಲಿದ್ದವು. ಇವು ನೇರವಾಗಿ ವ್ಯಾಪಾರ–ವಾಣಿಜ್ಯ ವ್ಯವಹಾರಗಳಿಗೆ ನೆರವಾಗಿದ್ದು, ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿವೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ–೭ ಸಾರಿಗೆ ಮತ್ತು ಸಂಪರ್ಕ ನೋಡಿ.

## ಸಹಕಾರ ಚಳವಳಿ

ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರರ ಹಿತಾಸಕ್ತಿಗಳನ್ನು ಕಾಪಾಡಲು ಸಾಂಘಿಕವಾಗಿ ಪ್ರಯತ್ನಿಸುವ ವ್ಯವಸ್ಥೆಯೇ ಸಹಕಾರ ಚಳವಳಿ. 'ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವ–ಇಚ್ಛೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ'. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" (each for all and all for each) ಎಂಬುದು ಸಹಕಾರದ ಮೂಲ ತತ್ವವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ, ಪಟ್ಟಣ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರಿ ಸಂಘ, ಗೃಹ ನಿರ್ಮಾಣ ಸಹಕಾರ ಸಂಘ, ಮಹಿಳಾ ಸಹಕಾರ ಸಂಘ ಮುಂತಾದವುಗಳಿದ್ದು, ಇವು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿವೆ.

ಜಿಲ್ಲೆಯಲ್ಲಿ ೧೯೧೦–೧೧ರ ವರೆಗೆ ಮಂದಗತಿಯಲ್ಲಿ ಸಾಗಿದ ಸಹಕಾರ ಸಂಘಗಳ ಪ್ರಗತಿ, ನಂತರದ ಐದು ವರ್ಷಗಳಲ್ಲಿ ತೀವ್ರಗತಿಯಲ್ಲಿ ಮುನ್ನಡೆಯಿತು. ಈ ಜಿಲ್ಲೆಯಲ್ಲಿ ೧೯೦೭–೦೮ರಲ್ಲಿ ಮೊಟ್ಟ ಮೊದಲ ಸಹಕಾರಿ ಸಂಘ ಸ್ಥಾಪನೆಯಾಯಿತು. ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಒಂದೊಂದು ಸಹಕಾರಿ ಸಂಘಗಳು ಸ್ಥಾಪನೆಯಾದವು. ಇದರಿಂದಾಗಿ ೧೯೧೦–೧೧ರ ವೇಳೆಗೆ ಜಿಲ್ಲೆಯಲ್ಲಿ ಕೇವಲ ನಾಲ್ಕು ಸಹಕಾರ ಸಂಘಗಳಿದ್ದವು. ಇವು ೧೯೧೧–೧೨ರಲ್ಲಿ ೧೯ಕ್ಕೂ; ೧೯೧೨–೧೩ರಲ್ಲಿ

೩೫ಕ್ಕೂ; ೧೯೧೩–೧೪ರಲ್ಲಿ ೬೦ಕ್ಕೂ; ಹಾಗೂ ೧೯೧೪–೧೫ರಲ್ಲಿ ೭೫ಕ್ಕೂ ಹೆಚ್ಚುಗೊಂಡವು. ಇವುಗಳ ಸಂಖ್ಯೆ ೧೯೧೯–೨೦ರ ವೇಳೆಗೆ ೧೫೭ಕ್ಕೆ ಹೆಚ್ಚಳಗೊಂಡಿತು. ೧೯೨೯–೩೦ರಲ್ಲಿ ತಲೆದೋರಿದ ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಹಕಾರಿ ಆಂದೋಲನದ ಪ್ರಗತಿಯು ಕುಂಠಿತವಾಯಿತು. ವ್ಯವಸಾಯ ಹುಟ್ಟುವಳಿಗಳ ಬೆಲೆ ಕುಸಿದು, ರೈತರು ಸಹಕಾರ ಸಂಘಗಳ ಸಾಲವನ್ನು ತೀರಿಸುವಲ್ಲಿ ಅಸಮರ್ಥರಾದ ಕಾರಣ, ಕೆಲವು ಸಹಕಾರಿ ಸಂಘಗಳು ಮುಚ್ಚಲ್ಪಟ್ಟವು. ಆಗ ಸರ್ಕಾರದ ವತಿಯಿಂದ ಸಹಕಾರಿ ಸಂಘಗಳ ಪುನಶ್ಚೇತನಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಅದಕ್ಕಾಗಿ ಸರ್ಕಾರ ೧೯೩೫ರಲ್ಲಿ 'ಕೆ. ಎಸ್. ಚಂದ್ರಶೇಖರ್ ಅಯ್ಯರ್ ಸಮಿತಿ'ಯನ್ನು ರಚಿಸಿತು. ಮುಂದೆ ೧೯೩೬–೩೭ರ ವೇಳೆಗೆ ಒಟ್ಟು ೧೯೮ ಸಹಕಾರ ಸಂಘಗಳಿದ್ದವು. ಅವುಗಳಲ್ಲಿ ೧೨,೦೪೦ ಮಂದಿ ಸದಸ್ಯರಿದ್ದು, ದುಡಿಯುವ ಬಂಡವಾಳ ರೂ. ೧೨.೬೧ ಲಕ್ಷ ಆಗಿತ್ತು. ಅಷ್ಟರಲ್ಲಿ ಎರಡನೇ ಜಾಗತಿಕ ಯುದ್ಧ (೧೯೩೯) ಪ್ರಾರಂಭವಾದ ಕಾರಣ ಕೃಷಿ ಉತ್ಪನ್ನಗಳ ಬೆಲೆಗಳು ಏರತೊಡಗಿದವು. ಆದರೂ ೧೯೪೫–೪೬ರಲ್ಲಿ ಒಟ್ಟು ೨೫೫ ಸಹಕಾರ ಸಂಘಗಳಿದ್ದು, ೧೫,೬೦೮ ಮಂದಿ ಸದಸ್ಯರಿದ್ದರು.

ಸ್ವಾತಂತ್ರ್ಯೋತ್ತರದ ದಶಕಗಳಲ್ಲಿ ರಚನೆಗೊಂಡ ಜನಪ್ರಿಯ ಸರ್ಕಾರಗಳು ಅನೇಕ ಹೊಸ ಆಯಾಮಗಳನ್ನು ಅಳವಡಿಸಿಕೊಂಡಿದ್ದರಿಂದ ಸಹಕಾರ ಚಳವಳಿಯು ಜನತೆಯ ಚಳವಳಿಯಾಗಿ ರೂಪುಗೊಂಡಿತು. ಪರಿಣಾಮವಾಗಿ ೧೯೬೧ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೭೦೭ ವಿವಿಧ ಬಗೆಯ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ೩೧ ಪ್ರಾಥಮಿಕ ದೊಡ್ಡ ಪ್ರಮಾಣದ ಸಹಕಾರ ಸಂಘಗಳು, ೨೫೬ ಸೇವಾ ಸಹಕಾರ ಸಂಘಗಳು, ೧೮೪ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳು, ೧೦ ಜಮೀನು ಅಡಮಾನ ಬ್ಯಾಂಕುಗಳು, ೧೧ ತಾಲೂಕು ಮಟ್ಟದ ಪ್ರಾಥಮಿಕ ವ್ಯವಸಾಯ ಹುಟ್ಟುವಳಿ ಮಾರಾಟ ಸಂಘಗಳನ್ನೊಳಗೊಂಡಂತೆ ಒಟ್ಟು ೨೧ ಮಾರಾಟ ಸಹಕಾರ ಸಂಘಗಳು, ೧೪ ಗೃಹ ನಿರ್ಮಾಣ ಸಹಕಾರ ಸಂಘಗಳು, ಆರು ಗ್ರೇನ್ ಬ್ಯಾಂಕುಗಳು, ೬೩ ವ್ಯವಸಾಯೇತರ ಸಾಲ ಸಹಕಾರ ಸಂಘಗಳೂ ಸೇರಿದ್ದವು. ೧೯೬೫ರ ಜೂನ್ ಅಂತ್ಯಕ್ಕೆ ಒಟ್ಟು ೮೭೮ ಸಹಕಾರ ಸಂಘಗಳಿದ್ದು, ೧,೯೦,೯೧೧ ಸದಸ್ಯರಿದ್ದರು. ಪಾಲು ಬಂಡವಾಳ ರೂ ೧೧೯.೧೭ ಲಕ್ಷ ಠೇವುಗಳು ರೂ ೪೦.೩೦ ಲಕ್ಷ ಕಾಯ್ದಿಟ್ಟ ನಿಧಿ ರೂ. ೩೦.೨೫ ಲಕ್ಷ, ಇತರ ನಿಧಿಗಳು ರೂ. ೩.೧೧ ಲಕ್ಷ, ಸಾಲ ಮುಂಗಡಗಳು ರೂ. ೧೫೩.೪೦ ಲಕ್ಷ, ವಸೂಲಾದ ಸಾಲ ರೂ ೧೪೬.೧೯ ಲಕ್ಷ ಬಾಕಿ ಇದ್ದ ಸಾಲ ರೂ. ೨೬೩.೧೧ ಲಕ್ಷ ಅವಧಿ ಮೀರಿದ ಸಾಲ ೧೪೧.೪೮ ಲಕ್ಷ ಮತ್ತು ಗಳಿಸಿದ ಲಾಭ ರೂ. ೬.೨೯ ಲಕ್ಷ ಆಗಿದ್ದಿತು. ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಹಕಾರ ಸಂಘಗಳ ಸಂಖ್ಯೆ, ಸದಸ್ಯತ್ವ, ವೃದ್ಧಿಸುತ್ತಿರುವ ಸರ್ಕಾರದ ಪಾಲು ಬಂಡವಾಳ, ಸಹಾಯಧನ ಮುಂತಾದವುಗಳನ್ನು ಗುರುತಿಸಿ, ಆಡಳಿತದಲ್ಲಿ ದಕ್ಷತೆ ಹಾಗೂ ವಿಕೇಂದ್ರೀಕರಣ ಸಾಧಿಸಲು ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯನ್ನು ಕೋಲಾರದಲ್ಲಿ ೧೯೬೭ರಲ್ಲಿ ಸ್ಥಾಪಿಸಲಾಯಿತು. ೧೯೮೦–೮೧ರಲ್ಲಿ ಒಟ್ಟು ೧,೦೫೫ ಸಹಕಾರ ಸಂಘಗಳಿದ್ದರೆ, ೧೯೯೫–೯೬ರಲ್ಲಿ ೧,೭೬೦ (೫.೮೩ ಲಕ್ಷ) ೨೦೦೦–೨೦೦೧ರಲ್ಲಿ ೨,೧೫೫ (೭.೨೨ ಲಕ್ಷ), ೨೦೦೨–೦೩ರಲ್ಲಿ ೨,೨೯೫ (೭.೩೦ ಲಕ್ಷ) ಸಹಕಾರ ಸಂಘಗಳಿದ್ದವು. ಆವರಣದಲ್ಲಿ ಆಯಾ ವರ್ಷಗಳಲ್ಲಿದ್ದ ಸದಸ್ಯರ ಸಂಖ್ಯೆಯನ್ನು ನೀಡಲಾಗಿದೆ. ೨೦೦೨–೦೩ರಲ್ಲಿ ಒಟ್ಟು ಷೇರು ಬಂಡವಾಳ ೧೨೭೧.೧೨ ಲಕ್ಷ, ಒಟ್ಟು ಷೇರು ಬಂಡವಾಳದಲ್ಲಿ ಸರ್ಕಾರದ ಪಾಲು ರೂ ೪೯೧.೦೧ ಲಕ್ಷ ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು ರೂ. ೧,೬೦೬.೮೩ ಲಕ್ಷ ಆಗಿದ್ದಿತು. (ಹೆಚ್ಚಿನ ವಿವರಗಳಿಗೆ ಅಧ್ಯಾಯ–೬ ಅನ್ನು ನೋಡಿ).

## ಮಾನವ ಸಂಪತ್ತು

ಜಿಲ್ಲೆಯ ಜನಸಂಖ್ಯೆ ೧೯೦೧ರಲ್ಲಿ ೭,೨೫,೦೭೨ ಆಗಿದ್ದು, ಇದು ಕಾಲಕ್ರಮೇಣ ಬೆಳೆದು ೨೦೦೧ರ ಜನಗಣತಿಯ ಪ್ರಕಾರ ೨೫,೩೬,೦೬೯ಕ್ಕೆ ಹೆಚ್ಚುಗೊಂಡಿದೆ. ಇದರಲ್ಲಿ ೬,೭೧,೯೭೨ ಮಂದಿ ಪರಿಶಿಷ್ಟ ಜಾತಿಗೂ ಹಾಗೂ ೨,೦೫,೭೧೧ ಮಂದಿ ಪರಿಶಿಷ್ಟ ಪಂಗಡಕ್ಕೂ ಸೇರಿದವರಾಗಿದ್ದಾರೆ. ೧೯೦೧ ರಿಂದ ೨೦೦೧ರ ವರೆಗಿನ ಹತ್ತು ದಶಕಗಳಲ್ಲಾಗಿರುವ ಜನಸಂಖ್ಯೆಯ ಬೆಳವಣಿಗೆಯ ದರ, ಸ್ತ್ರೀ–ಪುರುಷರ ಪ್ರಮಾಣ (೧೦೦೦ ಪುರುಷರಿಗೆ ಲಭ್ಯವಿರುವ ಸ್ತ್ರೀಯರ ಸಂಖ್ಯೆ) ಹಾಗೂ ಜನಸಾಂದ್ರತೆಯನ್ನು ಕೋಷ್ಟಕ ೮.೩೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೨: ಜಿಲ್ಲೆಯಲ್ಲಿ ದಶಕವಾರು ಜನಸಂಖ್ಯಾ ಬೆಳವಣಿಗೆಯ ದರ**

| ವರ್ಷ | ಜನಸಂಖ್ಯೆ | ದಶವಾರ್ಷಿಕ ವ್ಯತ್ಯಾಸ | ದಶವಾರ್ಷಿಕ ಶೇ. ವ್ಯತ್ಯಾಸ | ಪುರುಷರು | ಮಹಿಳೆಯರು | ಸ್ತ್ರೀ–ಪುರುಷರ ಪ್ರಮಾಣ | ಜನಸಾಂದ್ರತೆ |
|---|---|---|---|---|---|---|---|
| ೧೯೦೧ | ೭,೨೫,೦೭೨ | – | – | ೩,೬೮,೪೩೬ | ೩,೬೮,೪೩೬ | ೯೬೮ | ೮೮ |
| ೧೯೧೧ | ೭,೮೧,೬೧೭ | +೫೬,೫೪೫ | +೭.೮೦ | ೩,೯೭,೦೮೪ | ೩,೯೭,೦೮೪ | ೯೬೮ | ೯೫ |
| ೧೯೨೧ | ೭,೯೩,೮೭೮ | +೧೨,೨೬೧ | +೧.೫೭ | ೪,೦೫,೭೪೯ | ೪,೦೫,೭೪೯ | ೯೫೭ | ೯೭ |
| ೧೯೩೧ | ೮,೫೦,೭೨೩ | +೫೬,೮೪೫ | +೭.೧೬ | ೪,೩೫,೨೨೬ | ೪,೩೫,೨೨೬ | ೯೫೫ | ೧೦೩ |
| ೧೯೪೧ | ೯,೭೨,೯೧೬ | +೧,೨೨,೧೯೩ | +೧೪.೩೬ | ೪,೯೯,೧೦೫ | ೪,೯೯,೧೦೫ | ೯೪೯ | ೧೧೮ |
| ೧೯೫೧ | ೧೧,೨೯,೮೭೫ | +೧,೫೬,೯೫೯ | +೧೬.೧೩ | ೫,೭೨,೬೯೭ | ೫,೭೨,೬೯೭ | ೯೭೩ | ೧೩೭ |
| ೧೯೬೧ | ೧೨,೯೦,೧೪೪ | +೧,೬೦,೨೬೯ | +೧೪.೧೮ | ೬,೫೫,೬೪೫ | ೬,೫೫,೬೪೫ | ೯೬೮ | ೧೫೭ |
| ೧೯೭೧ | ೧೫,೧೬,೬೪೬ | +೨,೨೬,೫೦೨ | +೧೭.೫೬ | ೭,೭೩,೨೯೩ | ೭,೭೩,೨೯೩ | ೯೬೧ | ೧೮೪ |
| ೧೯೮೧ | ೧೯,೦೫,೪೯೨ | +೩,೮೮,೮೪೬ | +೨೫.೬೪ | ೯,೬೬,೬೫೩ | ೯,೬೬,೬೫೩ | ೯೭೧ | ೨೩೨ |
| ೧೯೯೧ | ೨೨,೧೬,೮೯೮ | +೩,೧೧,೩೯೭ | +೧೬.೩೪ | ೧೧,೨೮,೩೧೬ | ೧೧,೨೮,೩೧೬ | ೯೬೫ | ೨೭೦ |
| ೨೦೦೧ | ೨೫,೩೬,೦೬೯ | +೩,೧೯,೧೭೧ | +೧೪.೪೦ | ೧೨,೮೬,೧೯೩ | ೧೨,೪೯,೮೭೬ | ೯೭೨ | ೩೦೭ |

ಆಧಾರ: ಜನರಲ್ ಪಾಪ್ಯುಲೇಷನ್, ೧೯೯೧

## ಮಾನವ ಶಕ್ತಿ ಯೋಜನೆ

ವಿವಿಧ ವಲಯ ಮತ್ತು ಕಸಬುಗಳ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಿ ಶ್ರಮವನ್ನು ದಕ್ಷವಾಗಿ ಬಳಸಿಕೊಳ್ಳುವುದೇ ಮಾನವ ಶಕ್ತಿ ಯೋಜನೆಯಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಈ ಯೋಜನೆ ಸೂಕ್ತ ಪರಿಹಾರವಾಗಬಲ್ಲುದು. ಕೋಲಾರ ಜಿಲ್ಲೆಯು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಕೃಷಿಯನ್ನು ಅವಲಂಭಿಸಿರುವವರ ಪ್ರಮಾಣ ೧೯೬೧ರಲ್ಲಿ ಶೇ. ೭೮.೭೦ ಇದ್ದದ್ದು, ೧೯೭೧ರಲ್ಲಿ ಶೇ. ೭೬.೦೫ಕ್ಕೂ, ೧೯೮೧ರಲ್ಲಿ ೭೫.೫೨ಕ್ಕೂ ಹಾಗೂ ೧೯೯೧ರಲ್ಲಿ ೭೨.೭೩ರಕ್ಕೂ ಇಳಿದಿತ್ತು. ದ್ವಿತೀಯ ಮತ್ತು ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಮಾನವ ಶಕ್ತಿ ಯೋಜನೆ ಫಲಕಾರಿಯಾಗಲು ಜನ ಸಾಕ್ಷರತೆ ಹೊಂದುವುದು ಅವಶ್ಯಕ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೧೯೬೧ರಲ್ಲಿ ಕೇವಲ ಶೇ. ೨೧.೨೯ರಷ್ಟಿತ್ತು. ಕ್ರಮೇಣ ಈ ಪ್ರಮಾಣ ಹೆಚ್ಚಳಗೊಂಡಿದೆ. ೧೯೭೧ರಲ್ಲಿ ಶೇ. ೨೭.೦೬ಕ್ಕೂ, ೧೯೮೧ರಲ್ಲಿ ಶೇ. ೩೩.೫೭ಕ್ಕೂ, ೧೯೯೧ರಲ್ಲಿ ಶೇ. ೫೦.೪೫ಕ್ಕೂ ಹಾಗೂ ೨೦೦೧ರಲ್ಲಿ ೬೩.೧೪ರಕ್ಕೂ ಹೆಚ್ಚಳಗೊಂಡಿದೆ.

೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೧೨.೩೫ ಲಕ್ಷ ಕೆಲಸಗಾರರಲ್ಲಿ, ೭.೪೭ ಲಕ್ಷ ಪುರುಷರು ಹಾಗೂ ೪.೮೮ಲಕ್ಷ ಮಹಿಳೆಯರೂ ಸೇರಿದ್ದರು. ಒಟ್ಟು ಕೆಲಸಗಾರರಲ್ಲಿ ೧೦.೧೫ ಲಕ್ಷ ಮುಖ್ಯ ಕೆಲಸಗಾರರು, ೨.೨೦ಲಕ್ಷ ಸೀಮಾಂತ ಕೆಲಸಗಾರರು ಹಾಗೂ ೧೩.೦೧ಲಕ್ಷ ಕೆಲಸಗಾರರಲ್ಲದವರಿದ್ದರು. ೧೦.೧೫ ಲಕ್ಷ ಮುಖ್ಯ ಕೆಲಸಗಾರರಲ್ಲಿ, ೪.೦೫ಲಕ್ಷ ಜನರು ವ್ಯವಸಾಯಗಾರು, ೨.೧೬ಲಕ್ಷ ಜನರು ಕೃಷಿ ಕಾರ್ಮಿಕರು ಮತ್ತು ೩.೯೪ ಲಕ್ಷ ಇತರೆ ಕೆಲಸಗಾರರಿದ್ದರು (೨೦೦೧ರ ಜನಗಣತಿಯಲ್ಲಿ ಇತರೆ ಕೆಲಸಗಾರರ ಗುಂಪಿಗೆ ವರ್ಗ–IIIರಿಂದ ವರ್ಗ IXರಲ್ಲಿ ಬರುವ ಕೆಲಸಗಾರರನ್ನು ಸೇರಿಸಲಾಗಿದೆ). ಹೆಚ್ಚಿನ ವಿವರಗಳನ್ನು ಕೋಷ್ಟಕ ೮.೩೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೩ರಲ್ಲಿ ೧೯೬೧, ೧೯೭೧, ೧೯೮೧, ೧೯೯೧ ಹಾಗೂ ೨೦೦೧ರಲ್ಲಿದ್ದ ವಿವಿಧ ಕಸುಬು ಕಾರ್ಮಿಕರ ಸಂಖ್ಯೆಯ ವಿವರ**

| ಕ್ರ. ಸಂ. | ಕಸುಬುದಾರರು | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|---|---|
| ವರ್ಗ I | ವ್ಯವಸಾಯಗಾರರು | ೪,೨೬,೫೮೪ | ೨,೮೯,೮೯೯ | ೩,೫೮,೩೮೪ | ೪,೧೧,೭೮೮ | ೪,೦೪,೭೫೦ |
| ವರ್ಗ II | ಕೃಷಿ ಕಾರ್ಮಿಕರು | ೫೯೪೬ | ೧,೧೨,೫೫೪ | ೧,೬೧,೨೭೦ | ೨,೨೯,೩೩೮ | ೨,೧೫,೯೧೭ |
| ವರ್ಗ III | ಪಶುಪಾಲನೆ, ಅರಣ್ಯ, ಮೀನುಗಾರಿಕೆ, ಬೇಟೆ, ತೋಟಗಾರಿಕೆ, ಅರ್ಚೆಡ್ಸ್ ಮತ್ತು ಸಂಬಂಧಿಸಿದ ಚಟುವಟಿಕೆಗಳು | ೨೨,೬೯೧ | ೨೦,೦೦೭ | ೨೦,೫೯೯ | ೨೯,೮೭೪ | – |
| ವರ್ಗ IV | ಗಣಿ ಮತ್ತು ಕಲ್ಲು ಗಣಿ | ೨೨,೬೯೧ | ೧೩,೪೯೦ | ೧೩,೯೨೫ | ೧೪,೪೮೧ | – |
| ವರ್ಗ V | ತಯಾರಿಕೆ | | | | | – |
| | ಎ. ಗೃಹ ಕೈಗಾರಿಕೆ | ೨೯,೯೯೫ | ೯,೮೮೧ | ೧೭,೧೩೪ | ೧೧,೧೯೦ | – |
| | ಬಿ. ಗೃಹ ಕೈಗಾರಿಕೆ ಒಟ್ಟು | ೯,೮೬೮ | ೧೮,೦೮೦ | ೩೩,೫೯೧ | ೪೮,೩೨೨ | – |
| ವರ್ಗ VI | ನಿರ್ಮಾಣ | ೪,೮೬೦ | ೫,೫೭೪ | ೭,೦೭೪ | ೧೨,೪೮೮ | – |
| ವರ್ಗ VII | ವ್ಯಾಪಾರ ಮತ್ತು ವಾಣಿಜ್ಯ | ೧೮,೧೪೨ | ೨೪,೦೩೫ | ೩೩,೪೦೩ | ೫೨,೯೧೫ | – |
| ವರ್ಗ VIII | ಸಾರಿಗೆ, ಸಂಗ್ರಹಣೆ ಮತ್ತು ಸಂಪರ್ಕ | ೩,೭೪೩ | ೭,೮೦೧ | ೧೧,೬೨೭ | ೧೫,೮೧೭ | – |
| ವರ್ಗ IX | ಇತರೆ ಸೇವೆಗಳು | ೪೦,೧೧೧ | ೨೮,೧೧೧ | ೩೬,೦೫೧ | ೫೫,೨೪೬ | – |

ಆಧಾರ: ಎಕನಾಮಿಕ್ಸ್ ಟೇಬಲ್ಸ್, ಜನಗಣತಿ ೧೯೬೧, ೧೯೭೧,೧೯೮೧ ಹಾಗೂ ೧೯೯೧ ಭಾಗ–೨ ಬಿ (೧), ಭಾಗ–೩ ಎ & ಬಿ(೧)

## ಯೋಜನೆಗಳು

ಜಿಲ್ಲಾ ಯೋಜನೆ ಆಯಾ ಪ್ರದೇಶದ ಜನರ ಅಗತ್ಯಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತುರ್ತಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ಸಹಕಾರ, ಅರಣ್ಯ, ಶಿಕ್ಷಣ, ಪಂಚಾಯತ್‌ರಾಜ್, ಸಮಾಜ ಕಲ್ಯಾಣ, ಕಾರ್ಮಿಕ ಕಲ್ಯಾಣ, ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದೇ ಪಂಚವಾರ್ಷಿಕ ಯೋಜನೆಗಳ ಪ್ರಧಾನ ಉದ್ದೇಶಗಳಾಗಿವೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ಕರ್ನಾಟಕವು ಇಂತಹ ಯೋಜನೆಯ ಅವಶ್ಯಕತೆಯನ್ನು ಮನಗಂಡಿತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಯೋಜಿತ ಆರ್ಥಿಕಾಭಿವೃದ್ಧಿ ೧೯೧೦ರಲ್ಲೇ ಪ್ರಾರಂಭವಾಗಿತ್ತು. ಈ ಯೋಜನೆಗಳ ಮಹತ್ವದ ಉದ್ದೇಶ ಬಡತನ ನಿರ್ಮೂಲನೆ ಹಾಗೂ ಆರ್ಥಿಕ ಸ್ವಾವಲಂಬನೆಗಳನ್ನು ಸಾಧಿಸುವುದೇ ಆಗಿತ್ತು.

ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು ಮೊದಲ ಬಾರಿಗೆ ಪ್ಲಾನಿಂಗ್ ಕಮೀಷನ್ ಮೈಸೂರು ರಾಜ್ಯದಲ್ಲಿ ೧೯೫೩–೫೪ರಲ್ಲಿ ಆರಂಭಿಸಿತು. ಇದರ ಉದ್ದೇಶ ಯೋಜನಾ ಆಯೋಗದ ಅನುದಾನ, ರಾಜ್ಯ ಸರ್ಕಾರದ ಭಾಗ, ಸ್ಥಳೀಯ ಸಂಸ್ಥೆಗಳ ಭಾಗ ಮತ್ತು ಸಾರ್ವಜನಿಕ ಕೊಡುಗೆಯನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶವನ್ನು ಶೀಘ್ರ ಅಭಿವೃದ್ಧಿಗೊಳಿಸುವುದೇ ಆಗಿತ್ತು. ಒಟ್ಟು ಯೋಜನಾ ವೆಚ್ಚದ ಶೇ. ೫೦ ರಷ್ಟನ್ನು ಯೋಜನಾ ಆಯೋಗ ನೀಡಿದರೆ, ಉಳಿದ ಒಟ್ಟು ಯೋಜನಾ ವೆಚ್ಚದ ಶೇ. ೫೦ರಷ್ಟನ್ನು ಸ್ಥಳೀಯವಾಗಿ ಶೇಖರಿಸಿದ ಬಂಡವಾಳದಿಂದ ನೀಡಬೇಕಾಗಿತ್ತು. ಈ ಯೋಜನೆಯು ಸಂಪೂರ್ಣವಾಗಿ ಸಾರ್ವಜನಿಕ ಸಹಕಾರದಿಂದ ಯಶಸ್ವಿಯಾಗಬೇಕಾಗಿತ್ತು. ಹೀಗಾಗಿ ವಿವಿಧ ಪಂಚವಾರ್ಷಿಕ ಯೋಜನೆಗಳಡಿ ಜಿಲ್ಲೆಯಲ್ಲಿ ಆದ ಅಭಿವೃದ್ಧಿಯ ಸಂಕ್ಷಿಪ್ತ ಪರಿಚಯ ಇಲ್ಲಿದೆ.

**ಮೊದಲನೆಯ ಪಂಚವಾರ್ಷಿಕ ಯೋಜನೆ (೧೯೫೧–೫೬)**

ಕೃಷಿ ನೀರಾವರಿ, ವಿದ್ಯುಚ್ಛಕ್ತಿ, ಸಾರಿಗೆ–ಸಂಪರ್ಕ, ಸಾಮಾಜಿಕ ಸೇವಾ ಕಾರ್ಯಗಳ ಅಭಿವೃದ್ಧಿ, ತಲಾ ಆದಾಯದಲ್ಲಿ ಗಣನೀಯ ಹೆಚ್ಚಳ ಹಾಗೂ ಜೀವನ ಮಟ್ಟದಲ್ಲಿ ಸುಧಾರಣೆ ಮುಂತಾದವು ಈ ಯೋಜನೆಯ ಉದ್ದೇಶಗಳಾಗಿದ್ದವು. ಅದರಂತೆ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಸಲುವಾಗಿ ಸುಧಾರಿತ ಬಿತ್ತನೆ ಬೀಜಗಳ ವಿತರಣೆ, ರಸಗೊಬ್ಬರ ಹಾಗೂ ಭತ್ತದ ಬೆಳೆಯಲ್ಲಿ ಜಪಾನೀ ಮಾದರಿಯ ಅನುಕರಣೆ ಹಾಗೂ ತಾಂತ್ರಿಕ ವ್ಯವಸಾಯೋಪಕರಣಗಳ ಬಳಕೆಯಿಂದಾಗಿ ಒಂದನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚಳಗೊಂಡಿತು.

ಈ ಯೋಜನೆಗೆ ಜಿಲ್ಲೆಯಾದ್ಯಂತ ಎಲ್ಲಾ ವರ್ಗಗಳಿಂದಲೂ ಉತ್ತಮ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಯಿತು. ಅಲ್ಲದೆ ಹಲವಾರು ಕೆಲಸಗಳು ಮೊದಲ ಪಂಚವಾರ್ಷಿಕ ಯೋಜನಾವಧಿಯಲ್ಲಿ ಮಂಜೂರಾದವು. ಅವುಗಳು ಕೆಳಗಿನಂತಿವೆ. ೧) ಕುಡಿಯುವ ನೀರು ಸರಬರಾಜು ಯೋಜನೆ. ೨) ವ್ಯವಸಾಯಾಭಿವೃದ್ಧಿಗಾಗಿ ಶಾಶ್ವತ ಕಾರ್ಯಕ್ರಮ. ೩) ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲೀಕರಣಕ್ಕಾಗಿ ಶಾಶ್ವತ ಕಾರ್ಯಕ್ರಮ. ೪) ಹಳ್ಳಿ ರಸ್ತೆಗಳ (ಸಣ್ಣ ಸೇತುವೆಗಳು ಹಾಗೂ ಅಡ್ಡ ಮೋರಿ ಅಥವಾ ಅಡಿಗಾಲುವೆ) ನಿರ್ಮಾಣ. ೫) ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಹಾಗೂ ಅವುಗಳ ಅಭಿವೃದ್ಧಿ. ೬) ದವಸ–ಧಾನ್ಯಗಳ ಸಂಗ್ರಹಣೆಗಾಗಿ ಗೋಡೌನ್‌ಗಳ ನಿರ್ಮಾಣ ಮುಂತಾದವು.

**ಭೌತಿಕ ಪ್ರಗತಿ**

ಕೋಲಾರ ಜಿಲ್ಲೆಯು ಪ್ರಮುಖವಾಗಿ ನೀರಾವರಿಗಾಗಿ ಕೆರೆಗಳನ್ನೇ ಅವಲಂಭಿಸಿದ್ದು, ಕೆರೆಗಳ ತವರೂರು ಎಂದೇ ಕರೆಸಿಕೊಂಡಿದೆ. ಜಿಲ್ಲೆಯಲ್ಲಿ ೨೩ ಅಂಗುಲದಿಂದ ೩೦ ಅಂಗುಲ ಸರಾಸರಿ ಮಳೆ ಯಾಗುತ್ತದೆ. ಮೊದಲೆರಡು ಯೋಜನೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು ೫೩೫ ದೊಡ್ಡ ಹಾಗೂ ೩,೨೭೯ ಸಣ್ಣ ಕೆರೆಗಳಿದ್ದವು. ಇವುಗಳಲ್ಲಿ ಶೇಕಡಾ ೨೦ ರಷ್ಟು ಕೆರೆಗಳ ಅಭಿವೃದ್ಧಿಯನ್ನು ಮೊದಲೆರಡು ಯೋಜನೆಗಳಲ್ಲೂ, ಉಳಿದ ಕೆರೆಗಳ ಅಭಿವೃದ್ಧಿಯನ್ನು ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿತ್ತು. ಅಲ್ಲದೇ ಯೋಜನೆಯಂತೆ ಕೈಗೊಂಡ ಕೆಲಸಗಳನ್ನು ಶ್ರೀಘ್ರವಾಗಿ ಅನುಷ್ಠಾನಗೊಳಿಸಲು ಕೋಲಾರದಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸಗಳನ್ನು ಸರ್ಕಾರ ಆಗಸ್ಟ್ ೧೯೫೯ರಲ್ಲಿ ಪ್ರತ್ಯೇಕ ಗೊಳಿಸಿತು. ಸಣ್ಣ ನೀರಾವರಿಗೆ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಕೋಲಾರ ಉಪವಿಭಾಗದಲ್ಲಿ ಮಾಡಿದ ವೆಚ್ಚದ ವಿವರ ಹೀಗಿದೆ. ೧). ನೀರಾವರಿ ಕೆಲಸಕ್ಕಾಗಿ ರೂ. ೬೫,೭೯,೬೭೯. ೨) ಕಟ್ಟಡದ ಕೆಲಸಕ್ಕಾಗಿ ರೂ. ೨೫,೩೬,೮೩೬. ೩) ಸಂಪರ್ಕಕ್ಕಾಗಿ–ರೂ.೫೬,೫೬,೨೦೦. ೪) ಸಾರ್ವಜನಿಕ ಆರೋಗ್ಯಕ್ಕೆ–ರೂ.೫,೧೩,೯೮೮. ೫) ಇತರೆ ಅಭಿವೃದ್ಧಿ ಕೆಲಸಗಳಿಗಾಗಿ ರೂ ೨೫,೩೮,೬೧೨ ವೆಚ್ಚ ಮಾಡಲಾಯಿತು.

ಮೊದಲನೇ ಯೋಜನೆಯಲ್ಲಿ ೧,೦೩೬ ಕೆರೆಗಳು ಹಾಗೂ ಇತರೆ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಇದಕ್ಕಾಗಿ ೭೯,೨೮೪ ರೂ.ಗಳನ್ನು ವೆಚ್ಚ ಮಾಡಲಾಯಿತು. ಪಶುಸಂಗೋಪನೆಗಾಗಿ ೧೫.೭೯ ಲಕ್ಷ ರೂ. ವೆಚ್ಚ ಮಾಡಿ ರಾಜ್ಯದಾದ್ಯಂತ ೩೯ ಪಶು ಚಿಕಿತ್ಸಾಲಯಗಳನ್ನು ತೆರೆಯಲಾಯಿತು. ಅವುಗಳಲ್ಲಿ ಎರಡನ್ನು ರೂ. ಹನ್ನೆರಡು ಸಾವಿರ ವೆಚ್ಚದಲ್ಲಿ ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಲಾಯಿತು. ೧೯೫೨ರಲ್ಲಿ ಒಂದು ಗ್ರಾಮೀಣ ಪಶು ಚಿಕಿತ್ಸಾಲಯ (ಆರ್.ವಿ.ಡಿ.)ವನ್ನು ಬಾಗೇಪಲ್ಲಿ ತಾಲ್ಲೂಕಿನ ಚೇಳೂರಿನಲ್ಲಿ, ಮತ್ತೊಂದು ಆರ್.ವಿ.ಡಿ. ಕೇಂದ್ರವನ್ನು ೧೯೫೪ರಲ್ಲಿ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲೂ ತೆರೆಯಲಾಯಿತು.

ಪಶು ಸಂಗೋಪನಾ ಅಭಿವೃದ್ಧಿ ಯೋಜನೆಯಡಿ ರಾಜ್ಯದಾದ್ಯಂತ ರೂ. ೧.೯ಲಕ್ಷ ವೆಚ್ಚ ಮಾಡಿ ಎತ್ತುಗಳನ್ನು ಒದಗಿಸಲಾಯಿತು. ಅದರಲ್ಲಿ ಕೋಲಾರ ಜಿಲ್ಲೆಗೆ ರೂ. ೯,೦೦೦ ಗಳನ್ನು ಒದಗಿಸಿ ಸ್ಥಳೀಯ ತಳಿಗಳನ್ನು ಉನ್ನತೀಕರಿಸಲು ೧೮ ಹಳ್ಳಿಕಾರ್ ಎತ್ತುಗಳನ್ನು ಜಿಲ್ಲೆಯಾದ್ಯಂತ ಹಂಚಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪಶು ಚಿಕಿತ್ಸಾಯಗಳಲ್ಲಿ ಶುಶ್ರೂಷೆಗೊಳಗಾದ ರಾಸುಗಳ ಸಂಖ್ಯೆ ೩,೫೧,೨೧೪ ಆಗಿದ್ದರೆ, ಶಸ್ತ್ರಚಿಕಿತ್ಸೆಗೆ ಒಳಗಾದ ರಾಸುಗಳ ಸಂಖ್ಯೆ

೨೪,೭೦೫, ಹಿಡ ಮಾಡುವಿಕೆಗೆ (ಬೀಜ ಹೊಡೆಯುವಿಕೆಗೆ) ಒಳಗಾದ ರಾಸುಗಳ ಸಂಖ್ಯೆ ೫೫,೯೨೫, ಸಂಚಾರಿ ಪಶು ಚಿಕಿತ್ಸಾ ಸೇವೆಯಡಿ ಪರೀಕ್ಷೆಗೆ ಒಳಗಾದ ರಾಸುಗಳ ಸಂಖ್ಯೆ ೮೮,೮೫೮ ಇದ್ದು, ಸಂಚಾರಿ ಪಶುಚಿಕಿತ್ಸಾ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ರಾಸುಗಳ ಸಂಖ್ಯೆ ೬೫೨, ಉಪದ್ರವಗಳಿಗೆ ಒಳಗಾದ ಒಟ್ಟು ೭,೪೬,೬೪೭ ರಾಸುಗಳಲ್ಲಿ ೪೮,೬೭೩ ಕುರಿಗಳಿಗೆ ಔಷಧಿ (ಚುಚ್ಚುಮದ್ದು) ನೀಡಲಾಯಿತು. ಈ ಸೇವೆಯಡಿ ಸಂದರ್ಶಿಸಿದ ಹಳ್ಳಿಗಳ ಸಂಖ್ಯೆ ೧೩,೯೩೬ ಆಗಿತ್ತು. ತರಬೇತಿ ಪಡೆದ ಕಾಂಪೌಂಡರ್‌ಗಳ ಸಂಖ್ಯೆ ೫೦ ಇದ್ದು ಹಾಗೂ ರಿಂಡರ್ ಪೆಸ್ಟ್ (Rinder pest) ಚುಚ್ಚುಮದ್ದಿಗೆ ಒಳಗಾದ ರಾಸುಗಳ ಸಂಖ್ಯೆ ೩೨೧೭ ಆಗಿತ್ತು.

ಮೊದಲ ಯೋಜನೆಯಲ್ಲಿ ವಿಶೇಷವಾಗಿ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹಸಿಗಲಿಲ್ಲ. ಅರಣ್ಯಾಭಿವೃದ್ಧಿಯು ಕೇವಲ ಉರುವಲು ಕಟ್ಟಿಗೆಯನ್ನು ಹೆಚ್ಚಿಸುವುದು ಹಾಗೂ ಗೋಮಾಳಗಳಲ್ಲಿ ಸಸಿ ನೆಡುವುದಕ್ಕೆ ಸೀಮಿತವಾಗಿತ್ತು. ಅರಣ್ಯಾಭಿವೃದ್ಧಿಗೆ ನಿಗದಿಗೊಳಿಸಿದ್ದ ೫೩,೦೦೦ ರೂ. ಗಳಿಗೆ ಬದಲಾಗಿ ರೂ. ೪೪,೦೬೮ ಗಳನ್ನು ವೆಚ್ಚ ಮಾಡಿ ೧,೫೬೯ ಎಕರೆಗಳನ್ನು ಅರಣ್ಯೀಕರಣಕ್ಕೆ ಒಳಪಡಿಸಲಾಯಿತು. ಆದರೂ ಈ ಯೋಜನೆಯ ಪ್ರಾರಂಭದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಯಿತು. ಇದಕ್ಕೆ ಪ್ರಾರಂಭದಲ್ಲಿ ಒಳ್ಳೆಯ ಯಶಸ್ಸು ಸಿಕ್ಕಿದರೂ ಮಾನ್‌ಸೂನ್ ಮಳೆಯ ವೈಫಲ್ಯದಿಂದಾಗಿ ಜಿಲ್ಲೆಯಾದ್ಯಂತ ಕ್ಷಾಮ ಡಾಮರಗಳು ಕಾಣಿಸಿಕೊಂಡಿದ್ದರ ಫಲವಾಗಿ ನಿರೀಕ್ಷಿತ ಮಟ್ಟದಲ್ಲಿ ಗುರಿ ಸಾಧಿಸಲಾಗಲಿಲ್ಲ.

## ಎರಡನೇ ಪಂಚವಾರ್ಷಿಕ ಯೋಜನೆ (೧೯೫೬–೬೧)

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಪ್ರಥಮಾದ್ಯತೆ ನೀಡಿದರೂ, ಕೃಷಿ ಕ್ಷೇತ್ರದ ಉತ್ಪಾದನೆ ಕಡಿಮೆಯಾಗದಂತೆ ನೋಡಿಕೊಳ್ಳಲಾಯಿತು. ಜಿಲ್ಲೆಯಲ್ಲಿ ಈ ಯೋಜನಾವಧಿಯಲ್ಲಿ ಟ್ರಾಕ್ಟರ್ ಹಾಗೂ ಬುಲ್ಡೋಜರ್ ಯೋಜನೆ, ಹೆಚ್ಚು ಇಳುವರಿ ನೀಡುವ ಬಿತ್ತನೆ ಬೀಜ, ಅಭಿವೃದ್ಧಿ ಸೀಡ್ ಫಾರಂಗಳ ಸ್ಥಾಪನೆ, ಸಾವಯವ ಗೊಬ್ಬರದ ತಯಾರಿಕೆ, ಜಪಾನ್ ಮಾದರಿಯ ಭತ್ತ ಬೆಳೆಯುವ ಪದ್ಧತಿ, ಕಬ್ಬಿನ ತಳಿ ಅಭಿವೃದ್ಧಿ ಮುಂತಾದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮೊದಲ ಹಾಗೂ ಎರಡನೇ ಪಂಚವಾರ್ಷಿಕ ಯೋಜನೆಗಳಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮಂಜೂರಾದ ಕಾಮಗಾರಿಗಳ ಸಂಖ್ಯೆ ಹಾಗೂ ಮಾಡಲಾದ ವೆಚ್ಚದ ವಿವರಗಳನ್ನು ಕೋಷ್ಟಕ ೮.೩೪ರಲ್ಲಿ ನೀಡಿದೆ.

**ಕೋಷ್ಟಕ ೮.೩೪**

| | ಯೋಜನೆಗಳ ವಿಂಗಡನೆ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ | ಪ್ರಗತಿಯಲ್ಲಿದ್ದ ಕಾಮಗಾರಿಗಳ ಸಂಖ್ಯೆ ೧೯೬೦–೬೧ ರಲ್ಲಿದ್ದಂತೆ | ಒಟ್ಟು ಮಂಜೂರಾದ ಅಂದಾಜು ವೆಚ್ಚ (ರೂ.ಗಳಲ್ಲಿ) | (೧೯೬೦–೬೧) ಆದ ಒಟ್ಟು ವೆಚ್ಚ (ರೂ.ಗಳಲ್ಲಿ) |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| | ಸ್ಥಳೀಯ ಅಭಿವೃದ್ಧಿ ಯೋಜನೆ (ಕೇಂದ್ರ) | | | | | |
| ೧ | ಕುಡಿಯುವ ನೀರು ಪೂರೈಕೆ | ೪೮೭ | ೨೫೭ | ೨೩೦ | ೮,೨೭,೫೭೮ | ೪,೯೮,೧೮೬ |
| ೨. | ಗ್ರಾಮೀಣ ನೈರ್ಮಲೀಕರಣ | ೬೫೧ | ೫೪೧ | ೧೧೦ | ೭,೫೨,೦೯೨ | ೭,೪೧,೯೫೭ |
| ೩. | ಗ್ರಾಮೀಣ ರಸ್ತೆಗಳು (ಸಣ್ಣ ಸೇತುವೆ ಹಾಗೂ ಅಡ್ಡ ಮೋರಿಗಳು) | ೩೮೪ | ೩೪೭ | ೩೭ | ೬,೧೫,೦೯೩ | ೫,೨೨,೧೯೫ |
| ೪. | ಶಾಲೆ ಹಾಗೂ ಆಸ್ಪತ್ರೆ ಕಟ್ಟಡಗಳ ಅಭಿವೃದ್ಧಿ | ೨ | ೨ | – | ೩,೧೪೦ | ೨,೦೨೩ |
| ೫ | ಇತರೆ | ೧೨೬ | ೨೦ | ೧೦೬ | ೩,೮೦,೦೦೦ | ೨,೯೯,೬೩೮ |
| | ಒಟ್ಟು | **೧೬೫೦** | **೧೧೬೭** | **೪೮೩** | **೨೫,೭೭,೯೦೩** | **೨೦,೬೩,೯೯೯** |

ಮುಂದುವರಿದಿದೆ............

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| | ಸ್ಥಳೀಯ ಅಭಿವೃದ್ಧಿ ಯೋಜನೆ (ರಾಜ್ಯ) | | | | | |
| ೧ | ಗ್ರಾಮೀಣ ನೈರ್ಮಲೀಕರಣ | ೧೩ | ೭ | ೬ | ೨೨,೬೯೯ | ೨೦,೩೩೭ |
| ೨ | ಗ್ರಾಮೀಣ ರಸ್ತೆಗಳು (ಸೇತುವೆ ಹಾಗೂ ಅಡ್ಡ ಮೋರಿಗಳು) | ೩೧ | ೯ | ೨೨ | ೪೯,೪೨೫ | ೨೨,೧೦೪ |
| ೩ | ಇತರೆ | ೩೧ | ೭ | ೨೪ | ೩೭,೬೫೦ | ೩೫,೩೭೧ |
| | **ಒಟ್ಟು** | **೭೫** | **೨೩** | **೫೨** | **೧,೦೯,೭೭೪** | **೭೭,೮೧೨** |

ಆಧಾರ: ಕೋಲಾರ ಜಿಲ್ಲಾ ಮೂರನೇ ಪಂಚವಾರ್ಷಿಕ ಯೋಜನೆ.

ಸ್ಥಳೀಯ ಅಭಿವೃದ್ಧಿ ಯೋಜನೆ (ಕೇಂದ್ರ) ಯಡಿ ಒಟ್ಟು ಮಂಜೂರಾದ ಕಾಮಗಾರಿಗಳ ಸಂಖ್ಯೆ ೧೬೫೦ ಆಗಿದ್ದು, ೧೧೬೭ ಕಾಮಗಾರಿಗಳು ಮುಕ್ತಾಯಗೊಂಡಿದ್ದವು. ಉಳಿದ ೪೮೩ ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದವು. ಸ್ಥಳೀಯ ಅಭಿವೃದ್ಧಿ ಯೋಜನೆಯಡಿಯಲ್ಲಿ (ರಾಜ್ಯ) ಒಟ್ಟು ಮಂಜೂರಾದ ಕಾಮಗಾರಿಗಳ ಸಂಖ್ಯೆ ೭೫ ಆಗಿದ್ದು, ೨೩ ಕಾಮಗಾರಿಗಳು ಪೂರ್ಣಗೊಂಡಿದ್ದವು. ಉಳಿದ ೫೨ ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದವು.

## ಸಣ್ಣ ನೀರಾವರಿ

ಒಂದನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನಾವಧಿಯಲ್ಲಿದ್ದ ಕೆರೆಗಳಲ್ಲಿ ಶೇ. ೨೦ರಷ್ಟು ಕೆರೆಗಳ ಅಭಿವೃದ್ಧಿ ಹಾಗೂ ರಿಪೇರಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಉಳಿದ ಶೇಕಡಾ ೮೦ ರಷ್ಟು ಕೆರೆಗಳ ಅಭಿವೃದ್ಧಿ ಹಾಗೂ ಕಾಮಗಾರಿ ಕೆಲಸಗಳನ್ನು ಮೂರನೇಯ ಮತ್ತು ತದನಂತರದ ಯೋಜನೆಗಳಲ್ಲಿ ಹಂತ ಹಂತವಾಗಿ ಕೈಗೊಳ್ಳಲು ಸೂಚಿಸಲಾಯಿತು. ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕೋಲಾರ ಉಪವಿಭಾಗದಲ್ಲಿ ಈ ಕ್ಷೇತ್ರದಲ್ಲಿ ಮಾಡಿದ ವೆಚ್ಚದ ವಿವರ ಹೀಗಿದೆ.

ನೀರಾವರಿ ಕೆಲಸಕ್ಕಾಗಿ ರೂ. ೬೭,೮೪,೦೫೯, ಕಟ್ಟಡದ ಕೆಲಸಕ್ಕೆ ರೂ. ೮೮,೪೮,೪೭೫, ಸಂಪರ್ಕಕ್ಕಾಗಿ ರೂ. ೧,೦೧,೬೩,೫೯೦, ಸಾರ್ವಜನಿಕ ಆರೋಗ್ಯಕ್ಕಾಗಿ ರೂ ೨೧,೨೨,೭೭೪ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ. ೧೬,೪೮,೦೩೧ ಗಳನ್ನು ವೆಚ್ಚ ಮಾಡಲಾಯಿತು. ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ರೂ. ೨೩,೪೧,೨೦೦ ಗಳ ಅನುದಾನ ಮಂಜೂರಾಗಿದ್ದು, ರೂ.೨೨,೮೩,೨೧೪ ವೆಚ್ಚ ಮಾಡಿದೆ. ಭೌತಿಕ ಗುರಿಯಾಗಿ ೬೩೫ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅದರಲ್ಲಿ ೫೨೮ ಕಾಮಗಾರಿಗಳು ಪೂರ್ಣಗೊಂಡಿದ್ದವು. ಇದರಲ್ಲಿ ಕೆರೆಗಳ ಅಭಿವೃದ್ಧಿ, ದುರಸ್ತಿ , ಬದುಗಳ ನಿರ್ಮಾಣ, ಪಿಕಪ್‌ಗಳ ನಿರ್ಮಾಣ ಮತ್ತು ಇತರೆ ಶಾಶ್ವತ ಕೆಲಸಗಳೂ ಸೇರಿವೆ. ಇದೇ ಅವಧಿಯಲ್ಲಿ ಕೋಲಾರ ಉಪ ವಿಭಾಗದಲ್ಲಿ ೧೦೭೫ ಕೆರೆಗಳ ಅಭಿವೃದ್ಧಿ ಹಾಗೂ ನೀರಾವರಿ ಕೆಲಸಗಳನ್ನು ಕೈಗೊಳ್ಳಲಾಯಿತು. ಬೃಹತ್ ಹಾಗೂ ಮಾಧ್ಯಮ ನೀರಾವರಿ ಯೋಜನೆಗಳಲ್ಲಿ ೧೯೫೪ರಲ್ಲಿ ೯.೫ ಲಕ್ಷ ರೂ.ಗಳ ಒಂದು ಯೋಜನೆಯನ್ನು ಮಂಜೂರು ಮಾಡಲಾಯಿತು. ಆದರೆ ಅದು ಎರಡನೇಯ ಯೋಜನಾವಧಿಯಲ್ಲಿ ನೇರವೇರಿಸಲ್ಪಟ್ಟಿತು. ಇದಕ್ಕಾಗಿ ೧೯೬೧ರ ಮಾರ್ಚ್ ಅಂತ್ಯಕ್ಕೆ ರೂ. ೪,೭೫,೪೨೭ ವೆಚ್ಚವಾಗಿತ್ತು. ಆದರೆ ಈ ಯೋಜನೆಯನ್ನು ಸ್ಥಗಿತಗೊಳಿಸಿ, ಮುಂದೆ ನವೀಕರಿಸಿ, ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲೆರಡು ವರ್ಷಗಳಲ್ಲಿ ಪೂರ್ಣಗೊಳಿಸಬೇಕೆಂದು ನಿರ್ಧರಿಸಲಾಯಿತು. ಮೊದಲೆರಡು ಯೋಜನೆಗಳಲ್ಲಿ ಬಾವಿ ತೆಗೆಯಲು ಸಾಲ ಹಾಗೂ ಅನುದಾನ ರೂಪದಲ್ಲಿ ೮,೫೪,೪೦೦ ರೂ. ಗಳನ್ನು ರೈತರಿಗೆ ನೀಡಲಾಯಿತು. ಇದರ ಫಲವಾಗಿ ಜಿಲ್ಲೆಯಲ್ಲಿ ೧೯೬೦–೬೧ರ ಸಾಲಿಗೆ ೨,೨೮೧ ಬಾವಿಗಳನ್ನು ತೆಗೆಸಲಾಯಿತು. ಎರಡು ಸಾವಿರ ನೀರಾವರಿ ಬಾವಿಗಳನ್ನು ಕೇಂದ್ರ ಸರ್ಕಾರದ ಸಹಕಾರದೊಂದಿಗೆ ವಿಶೇಷ ಕಾರ್ಯಕ್ರಮದಡಿಯಲ್ಲಿ ಕಾರ್ಯಗತಗೊಳಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ೩೦,೯೬,೦೦೦ ರೂ.ಗಳ ಅನುದಾನವನ್ನು ಕೋಲಾರ ಜಿಲ್ಲೆಗೆ ನಿಗದಿಗೊಳಿಸಿದ್ದು, ೫೯,೫೦,೪೦೦ ರೂ.ಗಳನ್ನು ವೆಚ್ಚ ಮಾಡಿ ಆ ಬಾವಿಗಳಿಂದ ೨೬,೩೩೨ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ.

ಜಿಲ್ಲೆಯಲ್ಲಿ ಎರಡನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವ ವೇಳೆಗೆ ಒಂದು ಜಿಲ್ಲಾ ಪಶುವೈದ್ಯ ಆಸ್ಪತ್ರೆ, ೧೧ ತಾಲೂಕು ಪಶು ವೈದ್ಯ ಚಿಕಿತ್ಸಾಲಯಗಳು ಹಾಗೂ ೧೨ ಗ್ರಾಮೀಣ ಪಶುವೈದ್ಯ ಚಿಕಿತ್ಸಾಲಯಗಳು ಕಾರ್ಯನಿರತವಾಗಿದ್ದವು. ಈ ಅವಧಿಯಲ್ಲಿ ಪಶುವೈದ್ಯ ಸೇವೆಯನ್ನು ಸಾಧ್ಯವಾದಷ್ಟು ರೈತರ ಮನೆ ಬಾಗಿಲಿಗೆ ತಲುಪಿಸುವ ದೃಷ್ಟಿಯಿಂದ, ಆರು ಪಶುವೈದ್ಯ ಚಿಕಿತ್ಸಾಲಯಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದರೂ, ಕೇವಲ ಐದು ಪಶು ಚಿಕಿತ್ಸಾಲಯಗಳನ್ನು ಒಟ್ಟು ರೂ.೨೬,೦೦೦ಗಳ ವೆಚ್ಚದಲ್ಲಿ ಸ್ಥಾಪಿಸಲಾಯಿತು. ಉಳಿದೊಂದು ಪಶು ಚಿಕಿತ್ಸಾಲಯವನ್ನು ೧೯೬೧–೬೨ರಲ್ಲಿ ಸ್ಥಾಪಿಸಲಾಯಿತು. ೧೯೬೧–೬೨ರ ಸಾಲಿನಲ್ಲಿ ೬,೬೨,೭೮೧ ದನಕರುಗಳು ಚಿಕಿತ್ಸೆಗೆ ಒಳಗಾಗಿದ್ದವು. ಉಳಿದಂತೆ ಪಶು ಚಿಕಿತ್ಸಾಲಯಗಳು ದಿನ ನಿತ್ಯದ ಕೆಲಸಕಾರ್ಯಗಳಾದ ಹಿಡ ಮಾಡುವುದು, ಸಾಂಕ್ರಾಮಿಕ ರೋಗಗಳನ್ನು ತಡೆಯುವುದೇ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿದ್ದವು. ಅಲ್ಲದೆ ಉಚಿತ ಎತ್ತುಗಳ ವಿತರಣೆ, ಕೃತಕ ಗರ್ಭಧಾರಣೆ ಕೇಂದ್ರಗಳ ಸ್ಥಾಪನೆ ಹಾಗೂ ಕುರಿ ಹಾಗೂ ಉಣ್ಣೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಯಿತು.

'ಉಚಿತ ಎತ್ತುಗಳ ಹಂಚಿಕೆ' ಯೋಜನೆಯಡಿ ೨೦ ಉತ್ತಮ ತಳಿಯ ಹಳ್ಳಿಕಾರ್ ಹೋರಿಗಳನ್ನು ಹತ್ತು ಸಾವಿರ ರೂ.ಗಳ ವೆಚ್ಚದಲ್ಲಿ ವಿತರಿಸಲಾಯಿತು. ಇದರಿಂದ ೪೫೦೦ ಹಸುಗಳಿಗೆ ಗರ್ಭಧಾರಣೆ ಮಾಡಿಸಿದ್ದರಿಂದ ೨೦೦೦ಕ್ಕೂ ಹೆಚ್ಚು ಹಳ್ಳೀಕಾರ್ ಕರುಗಳು ಹುಟ್ಟಿದವು. ಹಸುಗಳಿಗೆ ಕೃತಕ ಗರ್ಭಧಾರಣೆಯ ಮೂಲಕ ಉತ್ತಮ ತಳಿಯ ಹಸುಗಳನ್ನು ಪಡೆಯುವ ಸಲುವಾಗಿ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಕೋಲಾರ, ಶಿಡ್ಲಘಟ್ಟ ಹಾಗೂ ಶ್ರೀನಿವಾಸಪುರ ಪಶುವೈದ್ಯ ಆಸ್ಪತ್ರೆಗಳಲ್ಲೂ, ಚಿಂತಾಮಣಿ, ಮಾಲೂರು ಹಾಗೂ ಕೆಜಿಎಫ್ ಉಪಕೇಂದ್ರಗಳಲ್ಲೂ ಈ ಅವಧಿಯಲ್ಲಿ ಪ್ರಾರಂಭಿಸಲಾಯಿತು. ಮುಳಬಾಗಿಲಿ ನಲ್ಲಿ ಹೊಸದಾಗಿ ಮತ್ತೊಂದು ಉಪಕೇಂದ್ರವನ್ನೂ ಪ್ರಾರಂಭಿಸಲಾಯಿತು. ತತ್ಪರಿಣಾಮವಾಗಿ ೩,೬೮೦ ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಿದ್ದರಿಂದ ೧,೦೨೮ ಹಳ್ಳಿಕಾರ್ ಕರುಗಳು ಹುಟ್ಟಿದವು. ಹಾಲಿನ ಇಳುವರಿಯನ್ನು ಹೆಚ್ಚಿಸಲು ೧೦೦ ಮುರಾಹ್ ಆಕಳು, ೧೮೯ ಹರಿಯಾಣ ತಳಿಯ ಹಸುಗಳನ್ನು ಮುಂಬಯಿ ಹಾಗೂ ದೆಹಲಿ ಪ್ರಾಂತಗಳಿಂದ ತಂದು ಫಲಾನುಭವಿಗಳಿಗೆ ವಿತರಿಸಿ, ಅದಕ್ಕಾಗಿ ತಗುಲಿದ ಸಾರಿಗೆ ವೆಚ್ಚವನ್ನು ಮಾತ್ರ ಫಲಾನುಭವಿಗಳಿಂದ ಪಡೆಯಲಾಯಿತು.

ಕೋಳಿಗಳ ಅಭಿವೃದ್ಧಿಗಾಗಿ ವಿದೇಶಿ ತಳಿಯ ಕೋಳಿಗಳನ್ನು ಜಿಲ್ಲೆಯಾದ್ಯಂತ ಸಾಕಲು ಅನುಕೂಲ ಮಾಡಿಕೊಡಲಾಯಿತು. ಇದಕ್ಕಾಗಿ ೫೫,೦೦೦ ರೂ.ಗಳ ವೆಚ್ಚದಲ್ಲಿ ಒಂದು ಕೋಳಿ ಫಾರ್ಮ ಅನ್ನು ಸ್ಥಾಪಿಸಿ ಕೋಳಿಮರಿಗಳ ಹಂಚಿಕೆ ಹಾಗೂ ಮರಿ ಮಾಡಿಸುವುದಕ್ಕಾಗಿ ಹಲವಾರು ಜಾತಿಯ ೯,೦೦೦ ಮೊಟ್ಟೆಗಳನ್ನು ಹಂಚಲಾಯಿತು. ೨೦ ಉತ್ಸಾಹಿ ರೈತರಿಗೆ ಕೋಳಿ ಸಾಕಾಣೆಯ ಬಗ್ಗೆ ಹೆಸರಘಟ್ಟದಲ್ಲಿರುವ ಕೋಳಿಫಾರಂನಲ್ಲಿ ಅವರಿಗೆ ೪೫ ದಿವಸಗಳ ತರಬೇತಿಯನ್ನು ರೂ.೮೪೦–೦೦ ಶಿಷ್ಯ ವೇತನದೊಂದಿಗೆ ನೀಡಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅರಣ್ಯವನ್ನು ಬೆಳೆಸಲು ಜಿಲ್ಲೆಯ ಹಲವಾರು ಯೋಜನೆ ಗಳಿಗಾಗಿ ೮,೯೫,೭೦೩ ರೂ.ಗಳು ಮಂಜೂರಾಗಿದ್ದು ೮,೩೬,೦೮೯ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಅವಧಿಯಲ್ಲಿ ೮,೦೬೫ ಎಕರೆ ಭೂಮಿಯಲ್ಲಿ ನೀಲಗಿರಿ ಮತ್ತು ವಿವಿಧ ಆರ್ಥಿಕ ಬೆಳೆಗಳನ್ನು ಬೆಳೆಸಲಾಯಿತು. ಒಟ್ಟು ೮,೮೧೮ ಎಕರೆಗಳನ್ನು ಅರಣ್ಯೀಕರಣಗೊಳಿಸಿ ಉತ್ತಮ ಸಾಧನೆ ಮಾಡಲಾಯಿತು. ಇದಕ್ಕೆ ಪೂರಕವಾಗಿ ಹಲವು ಕಾರ್ಯಕ್ರಮಗಳನ್ನು ೧–೪–೧೯೫೬ರಲ್ಲಿ ಹಾಕಿಕೊಂಡು ೩೧–೩–೧೯೬೧ರಲ್ಲಿ ಸಂಪೂರ್ಣ ಸಾಧನೆ ಮಾಡಿರುವ ವಿವರವನ್ನು ನೀಡಿದೆ.

೧. ಬಿ.ಕೆ–I ಕೆಳದರ್ಜೆಯ ಅರಣ್ಯವನ್ನು ಪುನಸ್ಸಜ್ಜೀಕರಣ ಗೊಳಿಸುವುದು

೨. ಬಿ.ಕೆ– III ಭೂಸಾರ ಸಂರಕ್ಷಣೆ

೩. ಬಿ.ಕೆ– XXII ನೀರು ಸರಬರಾಜು ಹಾಗೂ ಇತರೆ ಯೋಜನೆ

೪. ಬಿ.ಕೆ – XXIII ಹೊಸ ನೆಡುತೋಪು ಹಾಗೂ ಪುನರುತ್ಪಾದನೆ

ಗ್ರಾಮೀಣ ಔದ್ಯೋಗೀಕರಣ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯ ಮೊದಲ ಮೂರು ವರ್ಷಗಳಿಗೆ ಯೋಜನಾ ಆಯೋಗ ಜಾರಿಗೆ ತಂದಿತು. ಇದಕ್ಕೆ ಯೋಜನಾ ಆಯೋಗದಿಂದ ೧೦೦ ಲಕ್ಷ ರೂ. ಅನುದಾನ ಮಂಜೂರಾಗಿದ್ದರೂ ಕೇವಲ ೬೦ ಲಕ್ಷ ರೂ.ಗಳಿಗೆ ಮಾತ್ರ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿತ್ತು. ಎರಡನೆಯ ಯೋಜನೆಯ ಅವಧಿಯಲ್ಲಿ ಆದ ಗುರಿ ಮತ್ತು ಸಾಧನೆಯನ್ನು ಕೋಷ್ಟಕ ೮.೩೫ರಲ್ಲಿ ನೀಡಿದೆ.

೧೯೬೦ರ ಅಕ್ಟೋಬರ್ ತಿಂಗಳಿನಲ್ಲಿ ಒಂದು ಚೌಕಿ ಕೇಂದ್ರವನ್ನು ಕ್ಯಾಲನೂರು (ಕೋಲಾರ ತಾ.) ನಲ್ಲಿ ಸ್ಥಾಪಿಸಲಾಯಿತು. ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಬೆಳೆಯ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವುದು, ಚೌಕಿ ಕಟ್ಟಿದ ನಂತರ ಎರಡನೆಯ ಜ್ವರಕ್ಕೆ ಬರುವವರೆಗೂ ಹೇಗೆ ಎಚ್ಚರಿಕೆಯಿಂದ ರೇಷ್ಮೆ ಹುಳುಗಳನ್ನು ನೋಡಿಕೊಳ್ಳಬೇಕು ಎಂಬುದರ ಬಗ್ಗೆ ತಿಳಿಯಪಡಿಸುವುದು, ಅದರ ಉದ್ದೇಶವಾಗಿತ್ತು. ಇದಕ್ಕಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ೧೦೫೦ ರೂ.ಗಳನ್ನು ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ೭೦ ಸ್ಥಳೀಯ ಚರಕಗಳನ್ನು ೨೧,೦೦೦ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಯಿತು.

**ಮೂರನೆಯ ಪಂಚವಾರ್ಷಿಕ ಯೋಜನೆ (೧೯೬೧–೬೬)**

ಇದೊಂದು ವ್ಯಾಪಕ ಯೋಜನೆಯಾಗಿದ್ದು, ಕೃಷಿ ಉತ್ಪನ್ನಗಳಲ್ಲಿ ಹೆಚ್ಚು ಉತ್ಪಾದನೆ, ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಸಹಕಾರಿ ಕ್ಷೇತ್ರಗಳ ಅಭಿವೃದ್ಧಿ, ಮಾನವಶಕ್ತಿ ಹಾಗೂ ಇತರೆ ಸಂಪತ್ತುಗಳ ಪೂರ್ಣಬಳಕೆ, ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದೇ ಇದರ ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ದೀರ್ಘಕಾಲಿಕ ಕಾರ್ಯಕ್ರಮಗಳಿಗೆ ಹಾಗೂ ಅಪೂರ್ಣವಾಗಿರುವ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಈ ಯೋಜನೆಯಲ್ಲಿ ವಲಯವಾರು ಅನುದಾನ ಹಂಚಿಕೆಯಾಗಿದ್ದು, ವ್ಯವಸಾಯ ಕ್ಷೇತ್ರಕ್ಕೆ ೩೩.೭೦ ಲಕ್ಷ ರೂ.ಗಳು, ಸಣ್ಣ ನೀರಾವರಿ, ಲೋಕೋಪಯೋಗಿ ಹಾಗೂ ಕಂದಾಯ ಇಲಾಖೆಗಳು ಸೇರಿ ೧೯೬.೫೦ ಲಕ್ಷ ರೂಗಳು, ಪಶುಸಂಗೋಪನೆಗೆ ೬.೨೭ ಲಕ್ಷ. ರೂ.ಗಳು, ಮೀನುಗಾರಿಕೆಗೆ ೧.೦೫ ಲಕ್ಷ ರೂ.ಗಳು, ಅರಣ್ಯ ಹಾಗೂ ಭೂಸಾರ ಸಂರಕ್ಷಣೆಗೆ ೪೨.೫೭ ಲಕ್ಷ ರೂ.ಗಳು,ಸಹಕಾರಿ ಕ್ಷೇತ್ರಕ್ಕೆ ೧೧.೨೩ ಲಕ್ಷ ರೂ. ಗಳು, ಗ್ರಾಮೀಣ ಕೈಗಾರಿಕೆಗೆ ೭.೯೧೧ ಲಕ್ಷ ರೂ.ಗಳು, ರೇಷ್ಮೆಗೆ ೧೪.೭೭೧ ಲಕ್ಷ ರೂ.ಗಳು, ಶಿಕ್ಷಣಕ್ಕೆ ೭೨.೬೭ ಲಕ್ಷ ರೂ.ಗಳು, ಗ್ರಾಮೀಣ ಗೃಹ ನಿರ್ಮಾಣಕ್ಕೆ ೮.೧೦ಲಕ್ಷ ರೂ.ಗಳು, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಸಾಮಾಜಿಕ ಕಲ್ಯಾಣಕ್ಕೆ ೩೫.೮೨೫ಲಕ್ಷ ರೂ.ಗಳು, ಕಾರ್ಮಿಕ ಕಲ್ಯಾಣಕ್ಕೆ ೩.೪೨೨ಲಕ್ಷ ರೂ.ಗಳು, ವಿದ್ಯುತ್ ಯೋಜನೆಗಳಿಗೆ ೯೫.೯೯೦ ಲಕ್ಷ ರೂ.ಗಳು, ಖನಿಜಗಳ ಅಭಿವೃದ್ಧಿಗಾಗಿ (ಭೂ ವಿಜ್ಞಾನ ಇಲಾಖೆ ಹಾಗೂ ಕೋಲಾರದ ಚಿನ್ನದ ಗಣಿ)೨೧೩.೨೫ ಲಕ್ಷ ರೂ.ಗಳು ಮೊದಲಾದ ಕ್ಷೇತ್ರಗಳಿಗಾಗಿ ಹಣ ಬಿಡುಗಡೆಯಾಗಿತ್ತು. ಸಮುದಾಯ ಅಭಿವೃದ್ಧಿಗೆ ೮೯.೦೦ ಲಕ್ಷ ರೂ.ಗಳು, ನೀರು ಸರಬರಾಜು ೨೦.೨೧ಲಕ್ಷ ರೂ.ಗಳು, ಆರೋಗ್ಯ ಇಲಾಖೆಗೆ ೫.೦೬ ಲಕ್ಷ ರೂ.ಗಳು ಹಾಗೂ ವೈದ್ಯಕೀಯ ಇಲಾಖೆಗೆ ೨.೬೯ ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿತ್ತು.

**ಅಭಿವೃದ್ಧಿ ಸೂಚ್ಯಂಕ**

೧೯೬೦–೬೧ ರಿಂದ ೧೯೭೬–೭೭ ರವರೆಗಿನ ಜಿಲ್ಲೆಯ ಅಭಿವೃದ್ಧಿಯ ವಿಶ್ಲೇಷಣೆ ಮಾಡಿದಾಗ ಅದರ ಸ್ಥಾನ ಹಾಗೂ ಅಭಿವೃದ್ಧಿ ಸೂಚ್ಯಂಕ ಸ್ಪಷ್ಟವಾಗುತ್ತದೆ. ಜಿಲ್ಲೆಯ ಆಯ್ದ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕೆಳಗೆ ತೋರಿಸಿರುವ ವರ್ಷಗಳಲ್ಲಿ ಆಗಿರುವ ಅದರ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಧರಿಸಬಹುದಾಗಿದೆ. ೧೯೬೦–೬೧ರಲ್ಲಿ ಕೋಲಾರ ಜಿಲ್ಲೆಯ ಅಭಿವೃದ್ಧಿ ಸೂಚ್ಯಂಕ ೧೩೬.೫೩ ಅಂಶಗಳನ್ನು ಪಡೆದು ನಾಲ್ಕನೇಯ ಸ್ಥಾನದಲ್ಲಿದ್ದರೆ, ಮೊದಲ ಮೂರು ಸ್ಥಾನಗಳನ್ನು ಕ್ರಮವಾಗಿ ದಕ್ಷಿಣ ಕನ್ನಡ ೨೩೦.೨೧ (೦೧), ಬೆಂಗಳೂರು ೨೧೮ (೦೨) ಹಾಗೂ ಶಿವಮೊಗ್ಗ ೧೮೦.೧೫ (೦೩) ಪಡೆದುಕೊಂಡಿದ್ದವು. ಆದರೆ ೧೯೭೧–೭೨ರಲ್ಲಿ ಜಿಲ್ಲೆಯು ೧೨೯.೬೫ (೦೪) ಅಂಶಗಳನ್ನು ಪಡೆದು ತನ್ನ ಸ್ಥಾನವನ್ನು ಉಳಿಸಿ ಕೊಂಡಿದ್ದರೆ, ಬೆಂಗಳೂರು ೨೦೬.೨೬ ಅಂಶಗಳನ್ನು ಪಡೆದು ಮೊದಲ ಸ್ಥಾನಕ್ಕೇರಿದರೆ ದಕ್ಷಿಣ ಕನ್ನಡ ಜಿಲ್ಲೆಯು ೧೮೭.೦೪ ಅಂಶಗಳನ್ನು ಪಡೆದು ೨ನೇ ಸ್ಥಾನಕ್ಕೆ ಕುಸಿಯಿತು. ಆದರೆ ಶಿವಮೊಗ್ಗ ೧೪೧.೦೭ ಅಂಶಗಳನ್ನು ಪಡೆದು ೩ನೇ ಸ್ಥಾನದಲ್ಲಿಯೇ ಮುಂದುವರಿದಿತ್ತು ೧೯೭೪–೭೫ರಲ್ಲಿ ಕೋಲಾರ ಜಿಲ್ಲೆಯಲ್ಲಿ ೧೧೦.೧೯ ಅಂಶಗಳಿಗೆ ಅಭಿವೃದ್ಧಿ ಸೂಚ್ಯಂಕ ಕಡಿಮೆಯಾಗಿರುವುದರಿಂದ

## ಕೋಷ್ಟಕ ೮.೩೫ ರಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಭೌತಿಕ ಪ್ರಗತಿ.

| ಕ್ರ. ಸಂ | ಯೋಜನೆ | ೧೯೫೬–೫೭ | | | | ೧೯೫೭–೫೮ | | | | ೧೯೫೮–೫೯ | | | | ೧೯೫೯–೬೦ | | | | ೧೯೬೦–೬೧ | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | | ಸಾಧನೆ | | ಗುರಿ | | ಸಾಧನೆ | | ಗುರಿ | | ಸಾಧನೆ | | ಗುರಿ | | ಸಾಧನೆ | | ಗುರಿ | | ಸಾಧನೆ | |
| | | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ | ಎಕರೆ | ಗುಂ |
| ೧ | ಟ್ರ್ಯಾಕ್ಟರ್ ಮತ್ತು ಬುಲ್ಡೋಜರ್ | ೫೦೦ | ೦೦ | ೨೭ | ೧೧ | ೫೦೦ | ೦೦ | ೪೧ | ೦೦ | ೫೦೦ | ೦೦ | ೨೫೨ | ೦೦ | ೫೦೦ | ೦೦ | ೩೨೨ | ೦೦ | ೫೦೦ | ೦೦ | ೧೨೫೩ | ೦೦ |
| ೨ | ಸೀಡ್ ಪಾರಂಗಳ ಸ್ಥಾಪನೆ | – | – | – | – | – | – | – | – | ೮೩ | | ೦೩ | | ೧೩೫ ಪಲ್ಲ ನ್ಯೂಕ್ಲಿಯಸ್ ಬೀಜ | | ೬೫ ಪಲ್ಲ | | ೧೩೭ ಪಲ್ಲ | | ೩೬ ಪಲ್ಲ | |
| ೩ | ಹಂಚಿಕೆ | | | | | | | | | | | | | | | | | | | | |
| ಅ) | ಬೀಜಗಳು (ಪಲ್ಲಗಳಲ್ಲಿ) | ೪೫೦ | ೦೦ | ೨೦೩ | ೦೦ | ೫೦೦ | ೦೦ | ೧೨೬ | ೦೦ | ೮೦೦ | ೦೦ | ೪೯ | ೦೦ | ೫೦೦ | ೦೦ | ೪೬೫ | ೦೦ | ೬,೦೦೦ | ೦೦ | ೫೭೨ | ೦೦ |
| ಆ) | ಗೊಬ್ಬರ (ಟನ್ನುಗಳಲ್ಲಿ) | ೨,೦೦೦ | ೦೦ | ೧೩೦೨ | ೦೦ | ೨,೦೦೦ | ೦೦ | ೧,೨೮೬ | ೦೦ | ೩,೦೦೦ | ೦೦ | ೨೩೮೩ | ೦೦ | ೩,೦೦೦ | ೦೦ | ೧೩೦೩ | ೦೦ | ೯,೦೦೦ | ೦೦ | ೨,೭೭೨ | ೦೦ |
| ೪. | ಮಿಶ್ರ ಗೊಬ್ಬರದ ತಯಾರಿಕೆ | | | | | | | | | | | | | | | | | | | | |
| ಅ) | ಗ್ರಾಮೀಣ (ಟನ್ನುಗಳಲ್ಲಿ) | ೧,೦೦,೦೦೦ | – | ೧೩೮,೦೯೯ | – | ೧,೦೦,೦೦೦ | – | ೧೫೧,೧೯೬ | – | ೧,೦೦,೦೦೦ | – | ೧೬೪೫೮೩ | – | ೧೫೦,೦೦೦ | – | ೮೯,೯೪ | – | ೧೫೦,೦೦೦ | – | ೯೭೬೩೩ | – |
| ಆ) | ನಗರ (ಟನ್ನುಗಳಲ್ಲಿ) | ೧,೦೦,೦೦೦ | – | ೧೨೫೪ | – | ೧,೦೦,೦೦೦ | – | ೧೫೨೯ | – | ೧,೦೦,೦೦೦ | – | ೩೦,೪೯ | – | ೧,೦೦,೦೦೦ | – | ೯೭೨೧೦ | – | ೧,೦೦,೦೦೦ | – | ೩,೦೦೦ | – |
| ೫ | ಸಸ್ಯ ಸಂರಕ್ಷಣೆ (ಎಕರೆಗಳಲ್ಲಿ) | – | – | ೧೧,೦೦೦ | – | – | – | ೯೬೧೬ | – | – | – | ೯೬೫೦ | – | – | – | ೭೨೧೩ | – | – | – | ೨೩೭೭೨ | – |
| ೬ | ಜಪಾನಿಸ್ ಮಾದರಿ ಭತ್ತ ಬೆಳೆಯುವುದು. (ಎಕರೆಗಳಲ್ಲಿ) | ೧೦,೦೦೦ | – | ೪೯,೦೦೦ | – | ೧೫,೦೦೦ | – | ೫೨೭ | – | ೧೫,೦೦೦ | – | ೧೪೯೭೬ | – | ೧೮,೦೦೦ | – | ೪೯೭೭ | – | ೧೮,೦೦೦ | – | ೪,೩೫೦ | – |

ಆಧಾರ: ಕೋಲಾರ ಜಿಲ್ಲಾ ಮೂರನೇ ಪಂಚವಾರ್ಷಿಕ ಯೋಜನೆ.

ಅದು ನಾಲ್ಕರಿಂದ ಆರನೇ ಸ್ಥಾನಕ್ಕೆ ಕುಸಿಯಿತು. ಈ ಅವಧಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಬದಲಾಗಿಲ್ಲದಿರುವುದು ಗಮನಾರ್ಹವಾಗಿದೆ. ೧೯೭೬–೭೭ರಲ್ಲಿ ಜಿಲ್ಲೆಯು ೧೦೭.೫೫ ಅಂಶಗಳನ್ನು ಪಡೆದು ೬ನೇ ಸ್ಥಾನದಲ್ಲಿಯೇ ಮುಂದುವರಿದಿದೆ. ಈ ಅವಧಿಯಲ್ಲಿಯೂ ಸಹ ಕ್ರಮವಾಗಿ ಬೆಂಗಳೂರು (೨೦೬.೪೨), ದಕ್ಷಿಣ ಕನ್ನಡ (೧೭೨.೮೬), ಶಿವಮೊಗ್ಗ ೧೧೮.೦೫ ಹಾಗೂ ಮಂಡ್ಯ (೧೧೨.೯೪) ಹಾಗೂ ಮೈಸೂರು (೧೧೨.೦೯) ಅಂಶಗಳನ್ನು ಪಡೆದು ಮೊದಲ ಐದು ಸ್ಥಾನಗಳನ್ನು ಪಡೆದುಕೊಂಡಿವೆ. ೧೯೭೯–೮೦ರಲ್ಲಿ ಜಿಲ್ಲೆಯ ಅಭಿವೃದ್ಧಿ ಸೂಚ್ಯಾಂಕವು ೧೦೩.೮೧ ಅಂಶಗಳಿಗೆ ಕುಸಿದು ೮ನೇ ಸ್ಥಾನಗಳಿಸಿರುವುದು ಜಿಲ್ಲೆಯ ಅಭಿವೃದ್ಧಿ ಕುಂಠಿತಗೊಂಡಿರುವುದರ ಸಂಕೇತವಾಗಿದೆ.

೧೯೬೬–೬೯ರವರೆಗಿನ ಮೂರು ವಾರ್ಷಿಕ ಯೋಜನೆ, ನಾಲ್ಕು (೧೯೬೯–೭೪) ಹಾಗೂ ಐದನೇಯ ಪಂಚವಾರ್ಷಿಕ ಯೋಜನೆ (೧೯೭೪–೭೯) ಗಳ ಕಾಲಾವಧಿಯಲ್ಲಿ ಸಹ ಜಿಲ್ಲೆಯು ಸಾಕಷ್ಟು ಅಭಿವೃದ್ಧಿ ಹೊಂದಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ. ೧೯೭೦–೭೧ರಲ್ಲಿ ಜಿಲ್ಲೆಯ ತಲಾವರಮಾನ ಕೇವಲ ೪೮೧ ರೂ.ಗಳಿದ್ದು, ೧೯೮೦–೮೧ರಲ್ಲಿ ಅದು ರೂ.೮೫೩ ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಪ್ರತೀಕವಾಗಿದೆ.

### ಆರನೇಯ ಪಂಚವಾರ್ಷಿಕ ಯೋಜನೆ (೧೯೮೦–೮೫)

ಈ ಯೋಜನೆಯಲ್ಲಿ ಲಾಭದಾಯಕ ಉದ್ಯೋಗಾವಕಾಶಗಳ ನಿರ್ಮಾಣ, ಆದಾಯದ ಅಸಮಾನತೆ ಯನ್ನು ಕಡಿಮೆ ಮಾಡುವುದು, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂ–ಪೂರ್ಣತೆಯನ್ನು ಸಾಧಿಸುವುದು, ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಒದಗಿಸುವುದು, ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಸರಬರಾಜು, ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ವಯಸ್ಕರ ಶಿಕ್ಷಣ ಮುಂತಾದ ಸಾಮಾಜಿಕ ಸೌಲಭ್ಯಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶಗಳನ್ನು ಹೊಂದಲಾಗಿತ್ತು. ಈ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ (೧೯೮೦–೮೧ರಿಂದ ೮೨–೮೩ರವರೆಗೆ) ಜಿಲ್ಲೆಯ ಪ್ರಗತಿಗಾಗಿ ೧೧೪೦.೯೮ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಈ ಯೋಜನೆಯ ಪ್ರಾರಂಭದಲ್ಲಿ (೧೯೮೦–೮೧ರಲ್ಲಿ) ತಲಾದಾಯ ರೂ. ೮೫೩ಗಳಿದ್ದದ್ದು, ಯೋಜನೆಯ ಕೊನೆಯ ವೇಳೆಗೆ (೧೯೮೪–೮೫ರಲ್ಲಿ) ರೂ. ೧,೩೮೩ಗಳಿಗೆ ಹೆಚ್ಚಳಗೊಂಡಿದೆ. ೧೯೭೯–೮೦ರಲ್ಲಿ ಜಿಲ್ಲೆಯ ಅಭಿವೃದ್ಧಿ ಸೂಚ್ಯಂಕ ೧೦೩.೮೧ ಅಂಶಗಳನ್ನು ಗಳಿಸಿ ರಾಜ್ಯದಲ್ಲಿ ೮ನೇ ಸ್ಥಾನ ಪಡೆದಿತ್ತು. ತತ್ಪರಿಣಾಮವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ಕೋಲಾರವೂ ಒಂದಾಗಿತ್ತು. ಆದರೆ ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯಾಗಿಯೇ ಉಳಿದಿತ್ತು.

### ಏಳನೆಯ ಪಂಚವಾರ್ಷಿಕ ಯೋಜನೆ (೧೯೮೫–೯೦)

ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಡತನವನ್ನು ಕನಿಷ್ಠ ತಮಗೊಳಿಸುವುದು, ಕನಿಷ್ಠ ಅಗತ್ಯಗಳ ಕಾರ್ಯಕ್ರಮದ ವಿಸ್ತರಣೆಯ ಮೂಲಕ ಸಾಧಿಸಲಾಗುವ ಸಾಮಾಜಿಕ ಒಳಿತು ಮತ್ತು ಸೇವೆಗಳಿಗೆ ಅವಕಾಶ ಕಲ್ಪನೆ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯಮಗಳನ್ನು ಬಲಗೊಳಿಸಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು. ಸಾರಿಗೆ–ಸಂಪರ್ಕ ಹಾಗೂ ಇತರೆ ಸೇವಾ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಸಮಾಜದಲ್ಲಿನ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡುವುದು ಮುಂತಾದವುಗಳಿಗೆ ಒತ್ತು ನೀಡಲಾಯಿತು.

ಈ ಯೋಜನೆಯ ಕೊನೆಯ ಮೂರು ವರ್ಷಗಳಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಇಲಾಖಾವಾರು ಯೋಜನೆಯಡಿ ಖರ್ಚು ಮಾಡಿರುವ ಹಣದ ವಿವರವನ್ನು ಕೋಷ್ಟಕ ೮.೩೬ರಲ್ಲಿ ನೀಡಿದೆ.

### ಭೌತಿಕ ಪ್ರಗತಿ

ಏಳನೆಯ ಪಂಚವಾರ್ಷಿಕ ಯೋಜನೆಯ ಮೂರನೇ ವರ್ಷದಲ್ಲಿ (೧೯೮೭–೮೮) ಭೂ ಸುಧಾರಣೆಗಾಗಿ ಬದುಗಳ ನಿರ್ಮಾಣ, ಜಮೀನು ನಯಗೊಳಿಸುವಿಕೆ, ತಿರುಗು ಕಾಲುವೆ, ನೀರುಗಾಲುವೆ, ಕೃಷಿ ಹೊಂಡಗಳು ಮುಂತಾದ ಕಾರ್ಯಕ್ರಮಗಳನ್ನು

**ಕೋಷ್ಟಕ: ೮.೩೬: ಏಳನೇಯ ಪಂಚವಾರ್ಷಿಕ ಯೋಜನೆಯ (೧೯೮೭–೯೦) ಕೊನೆಯ ಮೂರು ವರ್ಷಗಳಲ್ಲಿ ಆಯ್ದ ವಲಯವಾರು ಯೋಜನೆಯಡಿ ಆದ ವೆಚ್ಚದ ವಿವರಗಳು.**

(ಲಕ್ಷ ರೂ.ಗಳಲ್ಲಿ)

| ವಲಯ | ೧೯೮೭–೮೮ | ೧೯೮೮–೮೯ | ೧೯೮೯–೯೦ |
|---|---|---|---|
| ಸಾಮಾನ್ಯ ಶಿಕ್ಷಣ | ೩೫.೪೨ | ೯೮.೦೯ | ೧೧೫.೭೫ |
| ಕ್ರೀಡೆ ಹಾಗೂ ಯುವಜನಸೇವೆ | ೦.೨೭ | ೦.೪೨ | ೦.೫೨ |
| ವೈದ್ಯಕೀಯ ಮತ್ತು ಜನಾರೋಗ್ಯ | ೫೭.೮೫ | ೭೪.೪೬ | ೮೧.೦೦ |
| ಕುಟುಂಬ ಕಲ್ಯಾಣ | ೯೫.೯೬ | ೧೩೧.೦೫ | ೧೩೫.೮೭ |
| ನೀರು ಸರಬರಾಜು ಮತ್ತು ನೈರ್ಮಲ್ಯ | ೬೨.೪೬ | – | ೧೭೩.೨೨ |
| ಗೃಹ ನಿರ್ಮಾಣ | ೩೨೫೧ | ೬೭೬೬ | ೭೫.೦೧ |
| ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ | ೪೭.೧೮ | ೫೯.೨೦ | ೭೧.೪೨ |
| ಕೃಷಿ | ೩೦.೯೬ | – | ೨೨.೦೮ |
| ತೋಟಗಾರಿಕೆ | ೬.೧೪ | ೪೨೫ | ೪.೯೬ |
| ಪಶುವೈದ್ಯ ಸೇವೆ | ೮.೦೯ | ೨೭.೧೬ | ೨೨.೧೨ |
| ಮೀನುಗಾರಿಕೆ | ೫.೦೦ | ೭.೧೨ | ೪.೫೩ |
| ಸಹಕಾರ | ೧೩.೯೩ | – | – |
| ಐಆರ್‌ಡಿಪಿ | ೧೭೩.೩೧ | ೬೮.೦೩ | ೧೪೯.೩೩ |
| ಎನ್‌ಆರ್‌ಇಪಿ | ೨೪೮.೬೫ | ೨೦೮.೦೩ | ೧೫೨.೧೪ |
| ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೧೩೦.೧೫ | ೧೮೧.೫೪ | – |
| ಸಣ್ಣ ನೀರಾವರಿ | ೧.೫೭ | – | ೮೨.೩೧ |
| ರೇಷ್ಮೆ | ೫೯.೮೯ | ೬೯.೭೦ | ೫.೬೭ |
| ರಸ್ತೆ ಮತ್ತು ಸೇತುವೆಗಳು | ೯.೭೮ | – | – |

ಆಧಾರ: ಜಿಲ್ಲಾ ಪಂಚಾಯತ್, ಕೋಲಾರ.

ಹಮ್ಮಿಕೊಂಡು ಇದಕ್ಕಾಗಿ ರೂ. ೩೫.೦೦ ಲಕ್ಷ ಖರ್ಚು ಮಾಡಲಾಗಿದೆ. ಜಿಲ್ಲೆಯಲ್ಲಿ ೧೪ ವ್ಯವಸಾಯ ಮಾರುಕಟ್ಟೆಗಳಲ್ಲಿ ರೂ. ೪೨.೪೯ ಕೋಟಿ ಮೌಲ್ಯದ ವ್ಯವಸಾಯ ಉತ್ಪನ್ನಗಳನ್ನು ಮಾರಾಟ ಮಾಡಿದೆ. ೧೯೮೭–೮೮ರಲ್ಲಿ ೩,೮೩,೬೬೮ ಹೆಕ್ಟೇರು ಪ್ರದೇಶ ಬಿತ್ತನೆಯಾಗಿದ್ದು, ೧,೦೬,೧೧೨ ಹೆಕ್ಟೇರು ಪ್ರದೇಶ ನೀರಾವರಿಗೆ ಒಳಪಟ್ಟಿತ್ತು. ಇದು ಕಳೆದ ಸಾಲಿಗಿಂತ ಶೇ. ೪.೯ರಷ್ಟು ಹೆಚ್ಚಾಗಿತ್ತು. ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ಘಟಕಗಳಿದ್ದು, ಈ ಸಾಲಿನ ಅಂತ್ಯಕ್ಕೆ ಒಟ್ಟು ೪೩೬ ವಾಹನಗಳಿದ್ದವು. ದಿನಕ್ಕೆ ರೂ. ೫.೨೧ ಲಕ್ಷ ಆದಾಯ ಬರುತ್ತಿದ್ದು, ರೂ. ೫.೦೬ ಲಕ್ಷ ವೆಚ್ಚವಾಗುತ್ತಿದೆ. ೧೯೮೮–೮೯ರಲ್ಲಿ ಭೂ ಸುಧಾರಣೆಗಾಗಿ ರೂ ೬.೫೭ ಲಕ್ಷ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲೆಯ ೬ ತಾಲೂಕುಗಳಲ್ಲಿ ಕಾರ್ಯಗತ ಮಾಡಿದ್ದು, ಇದಕ್ಕಾಗಿ ೨೬.೩೧ಲಕ್ಷ ರೂ.ಗಳನ್ನು ವ್ಯಯಿಸಲಾಗಿತ್ತು. ಅಭಾವ ಪೀಡಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ೯ ತಾಲೂಕುಗಳಲ್ಲಿ ಜಾರಿಗೊಳಿಸಿದ್ದು, ೩೫೯.೭೨ ಲಕ್ಷ ರೂ.ಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಹಾಗೂ ಗ್ರಾಮೀಣ ಭೂ ರಹಿತ ಉದ್ಯೋಗ ಭರವಸೆ ಕಾರ್ಯಕ್ರಮಗಳ ಅಡಿಯಲ್ಲಿ ೧೫.೪೫ ರೂ.ಗಳನ್ನು ಖರ್ಚು ಮಾಡಿದೆ. ನೀರಾವರಿ ಕೊಳವೆ

ಬಾವಿಗಳಿಗಾಗಿ ೧೦.೦೮ ಲಕ್ಷ ರೂ. ಗಳನ್ನೂ, ಸಹಕಾರ ಕ್ಷೇತ್ರಕ್ಕೆ ೯.೫೯ ಲಕ್ಷ ರೂ. ಗಳನ್ನೂ, ವಯಸ್ಕರ ಶಿಕ್ಷಣಕ್ಕೆ ೩.೮೫ ಲಕ್ಷ ರೂ.ಗಳನ್ನೂ, ಗ್ರಾಮಾಂತರ ನೀರು ಪೂರೈಕೆಗೆ ೧೪.೭೩ ಲಕ್ಷ ರೂ. ಗಳನ್ನೂ, ಪೌಷ್ಟಿಕ ಆಹಾರಕ್ಕೆ ೧೦.೦೦ ಲಕ್ಷ ರೂ. ಗಳನ್ನೂ, ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ೧೩.೭೮ ಲಕ್ಷ ರೂ. ಗಳನ್ನೂ ಹಾಗೂ ಕಟ್ಟಡಗಳಿಗಾಗಿ ೩೦.೩೦ ಲಕ್ಷ ರೂ. ಗಳನ್ನೂ, ಜಿಲ್ಲೆಯ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ. ಪ್ರತಿಫಲವಾಗಿ ಈ ಯೋಜನೆಯ ಪ್ರಾರಂಭದಲ್ಲಿ (೧೯೮೫–೮೬) ೩೩,೩೧೯ ಲಕ್ಷ ರೂ. ಗಳಿದ್ದ ಜಿಲ್ಲಾದಾಯ ಈ ಯೋಜನೆಯ ಕೊನೆಗೆ (೧೯೮೯–೯೦) ೬೨,೦೯೯ ಲಕ್ಷ ರೂ. ಗಳಿಗೆ ಹೆಚ್ಚಳಗೊಂಡಿರುವುದು ಗಮನಾರ್ಹ ವಾಗಿದೆ. ಹಾಗೆಯೇ ತಲಾದಾಯ ರೂ.೧,೫೮೫.೦೩ಗಳಿಂದ ರೂ. ೨,೭೩೬.೩೬ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ.

**ಎಂಟನೇಯ ಪಂಚವಾರ್ಷಿಕ ಯೋಜನೆ (೧೯೯೨–೯೭)**

ಎಂಟನೆಯ ಪಂಚವಾರ್ಷಿಕ ಯೋಜನೆಯು ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ, ಜನರ ಮೂಲಭೂತ ಅವಶ್ಯಕತೆಗಳ ಪೂರೈಕೆ, ಸಮರ್ಪಕ ಆರ್ಥಿಕ ಬೆಳವಣಿಗೆ, ಅದರಲ್ಲೂ ಪ್ರಮುಖವಾಗಿ ನೀರಾವರಿ, ವಿದ್ಯುತ್, ಕೃಷಿ ಹಾಗೂ ಕೈಗಾರಿಕೆಗಳಂತಹ ಮುಖ್ಯ ಘಟಕಗಳ ಅಭಿವೃದ್ಧಿ ಮುಂತಾದ ಉದ್ದೇಶಗಳನ್ನು ಹೊಂದಿತ್ತು. ೧೯೯೫–೯೬ ಹಾಗೂ ೧೯೯೬–೯೭ರಲ್ಲಿ ಶಿಕ್ಷಣರಂಗಕ್ಕೆ ಕ್ರಮವಾಗಿ (ಆವರಣದಲ್ಲಿ ಅನುದಾನವನ್ನು ನೀಡಿದೆ). ರೂ.೫,೫೩೫.೧೯ ಲಕ್ಷ (೫೭೪೧.೦೫) ಹಾಗೂ ರೂ.೬,೧೫೫.೫೨ ಲಕ್ಷ (೬,೪೫೮.೬೫) ವೆಚ್ಚ ಮಾಡಿದ್ದರೆ, ವೈದ್ಯಕೀಯ ರಂಗಕ್ಕೆ ರೂ. ೧,೧೮೮.೫೨ ಲಕ್ಷ (೧೩೪೧.೯೭) ಹಾಗೂ ರೂ.೧,೧೮೩.೯೬ ಲಕ್ಷ (೧೫,೨೫.೮೯), ನೀರು ಪೂರೈಕೆ ಹಾಗೂ ನೈರ್ಮಲ್ಯಕ್ಕೆ ರೂ.೬೨೭.೫೭ ಲಕ್ಷ (೫೦೭.೩೧) ಹಾಗೂ ರೂ.೭೫೮.೪೧ ಲಕ್ಷ (೬೮೪.೫೦), ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ರೂ.೨೯೦.೮೧ ಲಕ್ಷ (೩೩೭೮೧) ಹಾಗೂ ರೂ.೩೨೨.೮೪ ಲಕ್ಷ (೩೭೫.೯೩), ಪೌಷ್ಟಿಕ ಆಹಾರಕ್ಕೆ ರೂ ೪೩೧.೮೬ ಲಕ್ಷ (೪೦೮.೧೩) ಹಾಗೂ ರೂ. ೪೬೬.೮೬ ಲಕ್ಷ (೪೮೫.೮೬) ಹಾಗೂ ರಸ್ತೆ ಮತ್ತು ಸೇತುವೆಗೆ ರೂ.೧೪೪.೮೩ ಲಕ್ಷ (೧೭೨.೩೬) ಮತ್ತು ರೂ. ೨೦೭೩೬ ಲಕ್ಷ (೨೯.೬೭ ಲಕ್ಷ) ಗಳನ್ನು ವೆಚ್ಚ ಮಾಡಲಾಗಿದೆ.

ಜಿಲ್ಲೆಯಲ್ಲಿ ೫೦೦ ಕೋಟಿ ರೂ.ಗಳ ವೆಚ್ಚದಲ್ಲಿ ಕೆರೆಗಳ ಹೂಳು ತೆಗೆಯುವ ಯೋಜನೆ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿತ್ತು. ವಿಶ್ವ ಕಾರ್ಯಕ್ರಮದಲ್ಲಿ ಅಗರಬತ್ತಿ, ಬೆತ್ತದ ಸಾಮಾನುಗಳು, ಹೆಣಿಗೆ ಚರ್ಮೋದ್ಯಮ, ಜೇನುತುಪ್ಪ ಸಂಸ್ಕರಣೆ, ತೆಂಗಿನನಾರು, ರೇಷ್ಮೆನೂಲು, ಕೈಮಗ್ಗ ಇತ್ಯಾದಿ ೬೧ ಚಟುವಟಿಕೆಗಳನ್ನು ಗುರುತಿಸಿ, ಉತ್ಪಾದನಾ ಕಾರ್ಯ ಆರಂಭಗೊಳಿಸಲಾಯಿತು. ಇದಕ್ಕಾಗಿ ಅಕ್ಟೋಬರ್ ೧೯೯೨ರ ಅಂತ್ಯಕ್ಕೆ ೨೨ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ತರಬೇತಿಗಾಗಿ ೨.೫೦ ಲಕ್ಷರೂ.ಗಳನ್ನು ವೆಚ್ಚ ಮಾಡಲಾಗಿದೆ. 'ಆರಾಧನ' ಯೋಜನೆಯಡಿ ೩೧ ನೂತನ ದೇವಸ್ಥಾನಗಳ ನಿರ್ಮಾಣ, ೮೫ ಹಳೇ ದೇವಸ್ಥಾನಗಳ ದುರಸ್ತಿ ಮುಂತಾದ ೧೩೦ ಕಾಮಗಾರಿಗಳನ್ನು ಆರಂಭಿಸಲಾಗಿದ್ದು, ರೂ. ೪೫೪ ಲಕ್ಷ ವೆಚ್ಚ ಮಾಡಿ ೧೩ ಕಾಮಗಾರಿಗಳು ಪೂರ್ಣಗೊಂಡಿವೆ. ೧೯೯೨–೯೩ರಲ್ಲಿ ಈ ಯೋಜನೆಗೆ ೧೨ ಲಕ್ಷ ರೂ.ಗಳು ಮಂಜೂರಾಗಿತ್ತು. ಚಿತ್ರಾವತಿ ಜಲಾನಯನ ಅಭಿವೃದ್ಧಿ ಯೋಜನೆಗೆ ಈವರೆವಿಗೆ ರೂ. ೫.೨೪ ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ರಾಷ್ಟ್ರೀಯ ಡೈರಿ ಅಭಿವೃದ್ಧಿ ನಿಗಮದ ವತಿಯಿಂದ ರೂ. ೬೭೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೆಳಗಾನ ಹಳ್ಳಿಯಲ್ಲಿ ಡೈರಿ ನಿರ್ಮಾಣಗೊಂಡಿದೆ.

೧೯೯೩–೯೪ರಲ್ಲಿ ಅಕ್ಷರತೆನೆ ಯೋಜನೆಯಡಿಯಲ್ಲಿ ೧೬.೦೧ ಲಕ್ಷ ರೂ.ಗಳನ್ನು ವೆಚ್ಚ ಮಾಡಿ ಜಿಲ್ಲೆಯ ನಾಲ್ಕು ಲಕ್ಷ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಲಾಗಿದೆ. ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ) ಕಾರ್ಯಕ್ರಮದಡಿಯಲ್ಲಿ ೧೦೫ ಗುಂಪುಗಳನ್ನು ರಚಿಸಿ, ೧೫.೯೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ನೂರಡ್ ಯೋಜನೆಯಲ್ಲಿ ಗರ್ಭಿಣಿ, ಬಾಣಂತಿಯರು ಹಾಗೂ ಮಕ್ಕಳಿಗೆ ಸಂಪೂರ್ಣ ಆರೋಗ್ಯ ರಕ್ಷಣೆ ಒದಗಿಸುವ ಈ ವಿಶೇಷ ಯೋಜನೆಗೆ ನಾರ್ವೆ ಸರ್ಕಾರ ೩.೩ ಕೋಟಿ ರೂ.ಗಳ ನೆರವನ್ನು ಒದಗಿಸಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ರೈತರ ಜಮೀನುಗಳಿಗೆ ೫೮೧ ಕೊಳವೆ ಬಾವಿಗಳನ್ನು ತೋಡಿಸಿ ನೀರಾವರಿ ಸೌಲಭ್ಯ ಒದಗಿಸಿದ್ದು, ಇದಕ್ಕಾಗಿ ೧೪೮.೭೬ ಲಕ್ಷ ರೂ. ಮೊತ್ತದ ಸಹಾಯಧನ ನೀಡಿದೆ.

ದಕ್ಷಿಣ ಭಾರತದಲ್ಲೇ ಅತಿ ದೊಡ್ಡದಾದ ಶೀತಲ ಗೃಹ ನಿರ್ಮಾಣವನ್ನು ೧೯೯೪–೯೫ರಲ್ಲಿ ಕೋಲಾರದ ಎ.ಪಿ.ಎಂ.ಸಿ. ಆವರಣದಲ್ಲಿ ೧.೫೦ ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ೨೮ ಲಕ್ಷ ರೂ.ಗಳ ವೆಚ್ಚದಲ್ಲಿ ಚಿಂತಾಮಣಿಯಲ್ಲಿ ಮಿನಿ ವಿಧಾನಸೌಧ ನಿರ್ಮಿಸಲಾಗಿದೆ. ಚಿತ್ರಾವತಿ ಜಲಾನಯನ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ವಿವಿಧ ಜಲಾನಯನ ಪ್ರದೇಶಗಳನ್ನಾಗಿ ವಿಂಗಡಿಸಿದೆ. ಅವುಗಳೆಂದರೆ ಹರಿಸ್ಥಳ, ಸಾದಲಿ, ಮಿಟ್ಟೇಮರಿ, ಮಲ್ಲಸಂದ್ರ, ಕಾರಕೂರು ಹಾಗೂ ರಾಮಸಂದ್ರ ಜಲಾನಯನ ಪ್ರದೇಶಗಳಲ್ಲಿ ೪.೩೪ ಕೋಟಿ ವೆಚ್ಚ ಮಾಡಿ ೧೫೯ ಕಿ.ಮೀ. ಸಾಲುಮರ, ೧೦,೭೭೩ ಕೊರಕಲು ತಡೆ ಹಾಗೂ ೫.೧ ಲಕ್ಷ ಸಸಿಗಳನ್ನು ವಿತರಿಸಲಾಗಿದೆ. ಹಾಲು ಒಕ್ಕೂಟವನ್ನು ಅಧಿಕ ಸ್ವಾವಲಂಬನೆಗೊಳಿಸಲು ಅನುಕೂಲವಾಗುವಂತೆ ೩೦೨ ಲಕ್ಷ ರೂ. ವೆಚ್ಚದಲ್ಲಿ ಗಿಣ್ಣು ಉತ್ಪನ್ನ ಘಟಕವನ್ನು, ಹಾಲು ಉತ್ಪನ್ನಗಳ ದಾಸ್ತಾನು ಉಗ್ರಾಣಕ್ಕಾಗಿ ೨೩.೮೩ ಲಕ್ಷ ಮೊಸರು ಮಾಡುವ ಸಾಧನಕ್ಕಾಗಿ ೨.೨೫ ಲಕ್ಷ ರೂ.ಗಳನ್ನು, ಆಡಳಿತ ಕಛೇರಿಯ ಎರಡನೆಯ ಅಂತಸ್ತಿನ ಕಟ್ಟಡ ನಿರ್ಮಾಣಕ್ಕಾಗಿ ೧೫ ಲಕ್ಷ ರೂ. ಹಾಗೂ ಸಿಬ್ಬಂದಿ ವಸತಿಗೃಹಗಳ ನಿರ್ಮಾಣಕ್ಕಾಗಿ ೪೨ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆ ಈ ಯೋಜನೆಯ ಆರಂಭದಲ್ಲಿ ಜಿಲ್ಲೆಯ ವರಮಾನ ೯೨,೩೫೭ ಲಕ್ಷಗಳಿದ್ದದ್ದು, ಯೋಜನೆಯ ಕೊನೆಗೆ ೧,೬೯,೧೪೭ ಲಕ್ಷ ರೂ. ಗಳಿಗೆ ಹೆಚ್ಚಳಗೊಂಡಿದೆ. ಅಲ್ಲದೆ ತಲಾದಾಯ ರೂ. ೪,೧೫೧ ರಿಂದ ೭,೦೧೭ ರೂ. ಗಳಿಗೆ ಹೆಚ್ಚುಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ.

ಯುವಜನ ಸೇವಾ ಮತ್ತು ಕ್ರೀಡಾ ಕಛೇರಿ ೧.೮೦ ಲಕ್ಷ ರೂ. ವೆಚ್ಚದಲ್ಲಿ ೮೦ ಯುವಕ ಸಂಘ ಸಂಸ್ಥೆಗಳಿಗೆ ಸಲಕರಣೆ ಹಾಗೂ ಪೀಠೋಪಕರಣಗಳನ್ನು ಒದಗಿಸಿದೆ. ಮೂರು ಯುವಕ ಸಂಘಗಳಿಗೆ ಗರಡಿ ಮನೆ ನಿರ್ಮಾಣಕ್ಕಾಗಿ ಮತ್ತು ನಚಿಕೇತ ವಿದ್ಯಾರ್ಥಿನಿಲಯದಲ್ಲಿ ನಿರ್ಮಿಸಿರುವ ಜಿಮ್ನಾಷಿಯಂ ಕಟ್ಟಡಕ್ಕೆಂದು ರೂ. ೧.೬೫ ಲಕ್ಷ ಹಣ ಬಿಡುಗಡೆ ಮಾಡಲಾಯಿತು. ತಾಲೂಕು ಮಟ್ಟದಲ್ಲಿ ದಸರಾ ಕ್ರೀಡಾಕೂಟ, ಗ್ರಾಮೀಣ ಕ್ರೀಡಾಕೂಟ ಹಾಗೂ ಮಹಿಳಾ ಕ್ರೀಡಾಪಟುಗಳಿಗೆ ಜಿಲ್ಲಾ ಮಟ್ಟದಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನಭತ್ಯೆ ನೀಡುವುದರ ಜೊತೆಗೆ ಜಿಲ್ಲಾಮಟ್ಟದಲ್ಲಿ ವಿಜೇತರಾದವರು ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟಕ್ಕೆ ಹೋಗಿ ಬರಲು ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ನೀಡಲಾಗುತ್ತಿದ್ದು ಇದಕ್ಕಾಗಿ ೧.೭೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು.

**ಒಂಭತ್ತನೇಯ ಪಂಚವಾರ್ಷಿಕ ಯೋಜನೆ (೧೯೯೭–೦೨)**

ಈ ಯೋಜನಾವಧಿಯಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಮೊದಲ ನಾಲ್ಕು ವರ್ಷಗಳಲ್ಲಿ (ಯೋಜನಾ ಮತ್ತು ಯೋಜನೇತರ ವೆಚ್ಚ ಸೇರಿದಂತೆ) ಆದ ವೆಚ್ಚವನ್ನು ಕೋಷ್ಟಕ ೮.೩೭ರಲ್ಲಿ ನೀಡಿದೆ.

**ಕೋಷ್ಟಕ: ೮.೩೭: ಒಂಭತ್ತನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ (೧೯೯೭–೯೮ ರಿಂದ ೨೦೦೦–೦೧ರವರೆಗೆ) ಆದ ವೆಚ್ಚದ ವಿವರ.**

(ಲಕ್ಷ ರೂ.ಗಳಲ್ಲಿ)

| ವಲಯ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ |
|---|---|---|---|---|
| ಲೋಕೋಪಯೋಗಿ ಕಾಮಗಾರಿಗಳು | ೩೬೫.೮೧ | ೫೩೫.೫೭ | ೨೨೦.೩೨ | ೩೦೩.೯೩ |
| ಸಾಮಾನ್ಯ ಶಿಕ್ಷಣ | ೭,೪೨೦.೧೮ | ೮,೨೮೦.೮೦ | ೧,೫೨೭.೫೬ | ೧,೬೯೦.೮೦ |
| ಕ್ರೀಡೆ ಹಾಗೂ ಯುವಜನ ಸೇವೆ | ೪೧.೬೮ | ೩೬.೦೫ | ೨೦.೭೮ | ೨೨.೧೭ |
| ವೈದ್ಯಕೀಯ ಹಾಗೂ ಜನಾರೋಗ್ಯ | ೧,೦೩೭.೨೭ | ೯೮೮.೬೫ | ೧,೧೧೭.೩೮ | ೧,೧೫೪.೫೪ |
| ಕುಟುಂಬ ಕಲ್ಯಾಣ | ೫೭೭.೮೬ | ೪೩೩.೮೩ | ೫೦೬.೨೫ | ೪೬೦.೩೧ |
| ನೀರು ಸರಬರಾಜು ಹಾಗೂ ನೈರ್ಮಲ್ಯ | ೮೮೨.೮೩ | ೧,೩೩೬.೭೬ | ೧,೧೧೧.೦೮ | ೧,೨೨೫.೧೯ |
| ವಸತಿ ಯೋಜನೆ | ೨,೦೮೨.೭೩ | ೧,೦೬೧.೮೯ | ೭೬೭.೨೨ | ೧,೦೯೯.೫೩ |

ಮುಂದುವರಿದಿದೆ.............

| ವಲಯ | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೨೦೦೧ |
|---|---|---|---|---|
| ಹರಿಜನ, ಗಿರಿಜನ ಹಾಗೂ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | ೧,೩೫೬.೪೩ | ೧,೯೬೩.೧೩ | ೧,೧೫೬.೯೯ | ೧,೪೪೮.೯೫ |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೩೯೫.೦೫ | ೪೪೬.೭೩ | ೧೦೦.೬೫ | ೧೨೭.೫೭ |
| ಗ್ರಾಮೀಣ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮ | ೯೧೨.೪೩ | ೬೭.೧೧ | ೪೯೫.೬೬ | ೪೯೮.೬೬ |
| ಸಣ್ಣ ನೀರಾವರಿ | ೯೪.೬೭ | ೯೨.೪೪ | ೧೧.೮೦ | ೯೦.೨ |
| ರಸ್ತೆ ಹಾಗೂ ಸೇತುವೆ | ೩೩೩.೭೨ | ೩೫೫.೩೮ | ೩೭೩.೮೦ | ೮೦೭.೮೧ |

ಆಧಾರ: ಜಿಲ್ಲಾ ಪಂಚಾಯತ್, ಕೋಲಾರ.

ಆದರೆ ಈ ಯೋಜನೆಯ ಕೊನೆಯ ವರ್ಷದಲ್ಲಿ ಅನುದಾನ ಹಾಗೂ ವೆಚ್ಚದ ವಿವರಗಳನ್ನು ವಲಯವಾರು ನೀಡಲಾಗಿದೆ. ಆವರಣದಲ್ಲಿ ನೀಡಿರುವ ಅಂಕಿಗಳು ನೈಜ ವೆಚ್ಚವನ್ನು ಲಕ್ಷ. ರೂ.ಗಳಲ್ಲಿ ಸೂಚಿಸುತ್ತವೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ೨,೦೫೬.೬೯ ಲಕ್ಷ ರೂ.ಗಳು (೨,೦೭೨.೦೮), ಕ್ರೀಡೆ ಮತ್ತು ಯುವಜನ ಸೇವೆಗೆ ೧೭.೩೦ ಲಕ್ಷ ರೂ.ಗಳು (೧೩.೦೦), ವೈದ್ಯಕೀಯ ಮತ್ತು ಜನಾರೋಗ್ಯಕ್ಕೆ ೯೭.೦೫ ಲಕ್ಷ ರೂ.ಗಳು (೬೭.೭೨), ಕುಟುಂಬ ಕಲ್ಯಾಣಕ್ಕೆ ೩೧೬.೪೨ ಲಕ್ಷ ರೂ.ಗಳು (೨೫೭.೦೯), ನೀರು ಪೂರೈಕೆ ಮತ್ತು ನೈರ್ಮಲ್ಯ ರಕ್ಷಣೆಗೆ ೮೨೧.೬೭ ಲಕ್ಷ ರೂ.ಗಳು (೬೭೦.೮೩), ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ೫೭೦.೮೨ ಲಕ್ಷ ರೂ.ಗಳು (೪೭೫.೪೭), ವ್ಯವಸಾಯಕ್ಕೆ ೮೦.೫೦ ಲಕ್ಷ ರೂ.ಗಳು (೫೨.೧೫), ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ೧೩೨.೫೭ ಲಕ್ಷ ರೂ.ಗಳು (೧೦೫.೮೨), ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಗೆ ೧೭೨.೦೦ ಲಕ್ಷ ರೂ.ಗಳು (೩೮೮.೬೨), ಜವಹಾರ್ ಗ್ರಾಮಸಮೃದ್ಧಿ ಯೋಜನೆಗೆ ೬೫೭.೦೦ ಲಕ್ಷ ರೂ.ಗಳು (೭೨೦.೨೦) ಮತ್ತು ಉದ್ಯೋಗ ಭರವಸೆ ಯೋಜನೆಗೆ ೩೮೬.೦೦ ಲಕ್ಷ ರೂ.ಗಳು (೫೭೧.೬೬), ಸೇರಿದಂತೆ ಒಟ್ಟು ೯,೦೭೦.೫೧ ಲಕ್ಷ ರೂ.ಗಳನ್ನು (೮೫೭೦.೮೭) ವ್ಯಯಿಸಲಾಗಿದೆ. ಈ ಯೋಜನೆಯ ಪ್ರಾರಂಭದಲ್ಲಿ ೧,೩೫,೨೦೦ ಹೆಕ್ಟೇರು ಪ್ರದೇಶಗಳಲ್ಲಿ ಏಕದಳ ಮತ್ತು ತೃಣ ಧಾನ್ಯಗಳನ್ನು ಬಿತ್ತನೆ ಮಾಡಿ, ೨,೩೭,೫೦೬ ಟನ್ನುಗಳಷ್ಟು ಉತ್ಪನ್ನ ಪಡೆಯಲಾಗಿದ್ದು, ಸರಾಸರಿ ಇಳುವರಿ ಪ್ರತಿ ಹೆಕ್ಟೇರ್‌ಗೆ ೧,೮೪೯ ಕಿಲೋ ಗ್ರಾಂ. ಆಗಿತ್ತು. ೩೭,೩೪೩ ಹೆಕ್ಟೇರು ಪ್ರದೇಶಗಳಲ್ಲಿ ದ್ವಿದಳ ಧಾನ್ಯಗಳನ್ನು ಬಿತ್ತನೆ ಮಾಡಿ ೧೨,೭೧೪ ಟನ್ನು ಉತ್ಪತ್ತಿ ಮಾಡಲಾಗಿತ್ತು. ಸರಾಸರಿ ಇಳುವರಿ ಪ್ರತಿ ಹೆಕ್ಟೇರ್‌ಗೆ ೩೫೮ ಕೆ.ಜಿ. ಗಳಾಗಿತ್ತು. ಒಟ್ಟು ಆಹಾರ ಧಾನ್ಯಗಳನ್ನು ೧,೭೨,೫೪೩ ಹೆಕ್ಟೇರು ಪ್ರದೇಶಗಳಲ್ಲಿ ಬಿತ್ತನೆ ಮಾಡಿ ೨,೫೦,೨೨೦ ಟನ್ನು ಉತ್ಪಾದಿಸಿ, ಪ್ರತಿ ಹೆಕ್ಟೇರಿಗೆ ಸರಾಸರಿ ಇಳುವರಿ ೧೫೨೭ ಕೆ.ಜಿ. ಆಗಿತ್ತು. ೯೬,೦೭೨ ಹೆಕ್ಟೇರುಗಳಲ್ಲಿ ಎಣ್ಣೆಕಾಳುಗಳನ್ನು ಬಿತ್ತನೆ ಮಾಡಲಾಗಿ ೭೫,೬೮೭ ಟನ್ನು ಉತ್ಪಾದಿಸಿ, ೮೪೯ ಕೆ.ಜಿ. ಸರಾಸರಿ ಇಳುವರಿ (ಪ್ರತಿ ಹೆಕ್ಟೇರಿಗೆ) ಪಡೆಯಲಾಯಿತು. ಆ ಸಾಲಿನಲ್ಲಿ ೫೧೪ ಕೆ.ಜಿ. ಚಿನ್ನದ ಉತ್ಪಾದನೆಯಾಗಿದ್ದು, ಇದರ ಮೌಲ್ಯ ೨೦.೭೯ ಕೋಟಿ ಆಗಿತ್ತು. ೧,೧೪,೪೪೧ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು.

ಗ್ರಾಮೀಣಾಭಿವೃದ್ಧಿ ಹಾಗೂ ಗ್ರಾಮೀಣ ಬಡತನ, ಹಿಂದುಳಿದ ಹಾಗೂ ಹರಿಜನ, ಗಿರಿಜನರ ಅಭಿವೃದ್ಧಿಗಾಗಿ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಅವುಗಳಲ್ಲಿ ೧೯೯೭-೯೮ರಲ್ಲಿ ಜವಾಹರ್ ರೋಜಗಾರ್ ಯೋಜನೆಯಲ್ಲಿ ೨೦ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ೩೮೨೦ ಜನ ಪ್ರಯೋಜನ ಪಡೆದರೆ, ಇಂದಿರಾ ಆವಾಸ್ ಯೋಜನೆಯಲ್ಲಿ ೮,೭೮೫ ಮನೆಗಳನ್ನು ಹಂಚಲಾಯಿತು. ೯೨೪ ಮಂದಿಗೆ ಟ್ರೈಸಂ ಯೋಜನೆಯಡಿಯಲ್ಲಿ ತರಬೇತಿ ನೀಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶ ಕಲ್ಪಿಸಲಾಯಿತು. ಅಲ್ಲದೇ ವಿಶೇಷ ಘಟಕ ಯೋಜನೆಯಲ್ಲಿ ೧೭೫.೯೬೫ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ರೇಷ್ಮೆ ಇಲಾಖೆ ಅಭಿವೃದ್ಧಿಗೆ ೭೩.೬೪೮ ಲಕ್ಷ ರೂ.ಗಳನ್ನು, ಪೌಷ್ಟಿಕ ಆಹಾರ ಪೂರೈಸಲು ೨೫೦.೩೦೩ ಲಕ್ಷ ರೂ. ಗಳನ್ನು, ಖಾದಿ ಮತ್ತು ಗ್ರಾಮೋದ್ಯೋಗ ಸುಧಾರಣೆಗೆ ೧೮.೦೦೮ ಲಕ್ಷ ರೂ.ಗಳನ್ನು ಹಾಗೂ ರಸ್ತೆ ಮತ್ತು ಕಟ್ಟಡಗಳಿಗಾಗಿ ೨೦೪.೬೫೨ ಲಕ್ಷ ರೂ.ಗಳನ್ನು ಖರ್ಚು ಮಾಡುವುದರ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಯೋಜಿಸಲಾಗಿದೆ.

೨೦೦೧–೨೦೦೨ ಅವಧಿಯಲ್ಲಿ ವ್ಯವಸಾಯ ಕ್ಷೇತ್ರದ ಅಭಿವೃದ್ಧಿಗಾಗಿ ೨೮೬.೯ ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಯಿತು. ಈ ವರ್ಷದಲ್ಲಿ ೧,೪೨,೪೨೬ ಹೆಕ್ಟೇರು ಪ್ರದೇಶಗಳಲ್ಲಿ ಏಕದಳ ಮತ್ತು ತೃಣಧಾನ್ಯಗಳನ್ನು ಬಿತ್ತನೆ ಮಾಡಲಾಗಿ ೨,೪೩,೭೭೮ ಟನ್ನು ಉತ್ಪತ್ತಿ ಮಾಡಲಾಯಿತು. ಸರಾಸರಿ ಇಳುವರಿ ಪ್ರತಿ ಹೆಕ್ಟೇರಿಗೆ ೧,೮೦೨ ಕಿ.ಲೋ.ಗ್ರಾಂ. ಆಗಿತ್ತು. ೨೪,೦೦೭ ಹೆಕ್ಟೇರು ಪ್ರದೇಶಗಳಲ್ಲಿ ದ್ವಿದಳ ಧಾನ್ಯಗಳನ್ನು ಬಿತ್ತನೆಮಾಡಿ ೮,೪೬೭ ಟನ್ನು ಉತ್ಪತ್ತಿ ಮಾಡಲಾಗಿತ್ತು. ಸರಾಸರಿ ಪ್ರತಿ ಹೆಕ್ಟೇರಿಗೆ ೩೭೧ ಕಿ.ಲೋ.ಗ್ರಾಂ. ಆಗಿತ್ತು. ಒಟ್ಟು ಆಹಾರ ಧಾನ್ಯಗಳನ್ನು ೧,೬೬,೪೩೩ ಹೆಕ್ಟೇರು ಪ್ರದೇಶಗಳಲ್ಲಿ ಬಿತ್ತನೆಮಾಡಿ ೨,೫೨,೨೪೫ ಟನ್ನು ಉತ್ಪಾದಿಸಿ, ಪ್ರತಿ ಹೆಕ್ಟೇರಿಗೆ ಸರಾಸರಿ ಇಳುವರಿ ೧,೫೯೫ ಕಿ.ಲೋ.ಗ್ರಾಂ ಆಗಿತ್ತು.

ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ಉಂಟುಮಾಡಲು ರಿಯಾಯಿತಿ ದರದಲ್ಲಿ ಪ್ರಮಾಣಿತ ಬೀಜ, ರಸಾಯನಿಕ ಕೀಟನಾಶಕ, ಸುಧಾರಿತ ಕೃಷಿ ಉಪಕರಣ, ಬೀಜೋಪಚಾರ, ಸಸ್ಯ ಸಂರಕ್ಷಣಾ ಲಘು ಪೋಷಕಾಂಶಗಳು, ಜಿಪ್ಸಂ, ಉಗ್ರಾಣ, ಕೀಟನಾಶಕ ಹಾಗೂ ಲೋಹದ ಧಾನ್ಯ ಸಂಗ್ರಹಣಾ ಪೆಟ್ಟಿಗೆಗಳ ವಿತರಣೆ ಮುಂತಾದ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ವಿಶೇಷ ಘಟಕ ಯೋಜನೆ (ರಾಜ್ಯ)ಯಡಿ ರೂ. ೨.೮೧ ಲಕ್ಷಗಳನ್ನು ವೆಚ್ಚ ಮಾಡಿ ಒಟ್ಟು ೩೪೬ (೧೧೬ ಹೊಸ ಫಲಾನುಭವಿಗಳು ಹಾಗೂ ೨೩೦ ಹಳೆಯ ಫಲಾನುಭವಿಗಳಿರುತ್ತಾರೆ.) ಮಂದಿ ಫಲಾನುಭವಿಗಳಿಗೆ ಸವಲತ್ತು ನೀಡಲಾಗಿದೆ. ಈ ಎಲ್ಲಾ ಫಲಾನುಭವಿಗಳನ್ನು ಗೊಂಚಲು ಗ್ರಾಮ (ಗುಂಪು ಗ್ರಾಮ)ಗಳಿಂದ ಪರಿಶಿಷ್ಟ ಜಾತಿಗೆ ಸೇರಿದವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಹೊಸ ಫಲಾನುಭವಿಗಳಿಗೆ ಮೊದಲ ವರ್ಷದಲ್ಲಿ ಅರ್ಧ ಎಕರೆ ವಿಸ್ತೀರ್ಣದಲ್ಲಿ ಸಣ್ಣ ತೆಂಗಿನ ತೋಟ ರಚಿಸಲು ರೂ. ೧,೫೦೦ ನಿರ್ವಹಣಾ ವೆಚ್ಚವಾಗಿ ನೀಡಲಾಗುತ್ತದೆ. ಎರಡನೆಯ ವರ್ಷದಲ್ಲಿ ರಸಗೊಬ್ಬರಕ್ಕೆ ರೂ. ೬೫೦ಅನ್ನು ನೀಡಿದರೆ, ಮೂರನೆಯ ವರ್ಷದಲ್ಲಿ ರೂ. ೩೫೦ಅನ್ನು ಸಸ್ಯ ಸಂರಕ್ಷಣೆಗಾಗಿ ನೀಡಲಾಗುವುದು. ಗಿರಿಜನ ಉಪ ಯೋಜನೆಯಡಿ ೨.೬೪ ಲಕ್ಷ ರೂ.ಗಳನ್ನು ವೆಚ್ಚಮಾಡಿ ೧೦೩ ಹೊಸ ಫಲಾನುಭವಿಗಳಿಗೆ ಹಾಗೂ ೧೯೮ ಹಳೆಯ ಫಲಾನುಭವಿಗಳಿಗೆ ಸವಲತ್ತುಗಳನ್ನು ನೀಡಲಾಗಿದೆ.

ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ನವೆಂಬರ್ ೨೦೦೧ರ ಅಂತ್ಯಕ್ಕೆ ೩೬೦.೯೧ ಲಕ್ಷ ರೂ.ಗಳನ್ನು ಖರ್ಚು ಮಾಡಿ ೨೭೬೭ ಕಾಮಗಾರಿಗಳನ್ನು ಪೂರ್ಣಗೊಳಿಸಿ ೬.೨೧.ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಇಂದಿರಾ ಆವಾಸ್ ಯೋಜನೆಯಡಿ ೮೩೭ ಮನೆಗಳನ್ನು ನಿರ್ಮಿಸಲು, ೨೫೬.೫೦೨ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡುವ ಮೂಲಕ ಗ್ರಾಮ ನೈರ್ಮಲ್ಯವನ್ನು ವ್ಯಾಪಕವಾಗಿ ಕಾಪಾಡುವ ಉದ್ದೇಶದಿಂದ ೧೯೯೫–೯೬ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದು, ೨೦೦೧–೨೦೦೨ರಲ್ಲಿ ೧೫೬.೦೭೨ ಲಕ್ಷ ರೂ.ಗಳನ್ನು ವೆಚ್ಚ ಮಾಡಿ ೮೬೪೦ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಸಣ್ಣ ನೀರಾವರಿಯ ವ್ಯಾಪ್ತಿಗೆ ೪೦ ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶ ಹೊಂದಿರುವ ಕೆರೆಗಳು ಒಳಪಡುತ್ತವೆ. ಸಣ್ಣ ನೀರಾವರಿ ಕ್ರಿಯಾ ಯೋಜನೆಯಡಿ ಹೊಸಕೆರೆಗಳ ಜೀರ್ಣೋದ್ಧಾರ, ಆಣೆಕಟ್ಟು, ಪಿಕ್‌ಅಪ್‌ಗಳ ನಿರ್ಮಾಣ ಮುಂತಾದ ಕಾಮಗಾರಿಗಳಿಗಾಗಿ ೧೭೯೧೪ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ತತ್ಪರಿಣಾಮವಾಗಿ ಈ ಯೋಜನೆಯ ಆರಂಭದಲ್ಲಿ ೨೯,೧೧೨ ಲಕ್ಷ .ರೂ.ಗಳಿದ್ದ ಜಿಲ್ಲಾ ಆದಾಯ ೨೦೦೦–೨೦೦೧ರ ಹೊತ್ತಿಗೆ ೩,೬೮,೬೬೧ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡು, ರಾಜ್ಯ ಮಟ್ಟದಲ್ಲಿ ಜಿಲ್ಲೆಯು ಎಂಟನೆಯ ಸ್ಥಾನ ಪಡೆದಿತ್ತು. ಇದೇ ಅವಧಿಯಲ್ಲಿ ತಲಾ ಆದಾಯ ರೂ. ೧೦,೦೧೩ ರಿಂದ ರೂ. ೧೪,೬೮೭ ಹೆಚ್ಚಳಗೊಂಡು ೨೩ನೇ ಸ್ಥಾನ ಗಳಿಸಿತ್ತು. ಈ ಅಂಕಿ–ಅಂಶಗಳು ವಿವಿಧ ಉತ್ಪಾದನಾಂಗಗಳ ಉತ್ಪಾದನಾ ದರ ಹೆಚ್ಚಳದಲ್ಲಿ ಹಾಗೂ ಜೀವನ ಮಟ್ಟವನ್ನು ಸೂಚಿಸುವುದರಿಂದ ಜಿಲ್ಲೆಯು ಆರ್ಥಿಕ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವುದು ಸ್ಪಷ್ಟವಾಗಿದೆ.

**ಹತ್ತನೇಯ ಪಂಚವಾರ್ಷಿಕ ಯೋಜನೆ:(೨೦೦೨–೨೦೦೭)**

ಹತ್ತನೆಯ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷದಲ್ಲಿ (೨೦೦೨–೨೦೦೩) ಒಟ್ಟು ೬,೦೧೧.೪೫ ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು, ೫,೩೬೧.೩೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಶೇಕಡಾ ೮೯.೨೦ ರಷ್ಟು ಸಾಧನೆ ಮಾಡಲಾಗಿದೆ. ಜಿಲ್ಲೆಯ ಏಳಿಗೆಗಾಗಿ ಆಯ್ದ ವಲಯವಾರು ಅನುದಾನ ಹಾಗೂ ವೆಚ್ಚವನ್ನು ಕೋಷ್ಟಕ ೮.೩೮ ರಲ್ಲಿ ನೀಡಿದೆ.

## ಕೋಷ್ಟಕ ೮.೩೮: ಹತ್ತನೇಯ ಪಂಚವಾರ್ಷಿಕ ಯೋಜನೆಯ ಮೊದಲೆರಡು ವರ್ಷಗಳಲ್ಲಿ (೨೦೦೨–೨೦೦೩ ಹಾಗೂ ೨೦೦೩–೨೦೦೪) ಜಿಲ್ಲೆಯ ಪ್ರಗತಿಗಾಗಿ ಮಾಡಿದ ವೆಚ್ಚದ ವಿವರ.

(ಲಕ್ಷ ರೂ.ಗಳಲ್ಲಿ)

| ವಲಯ | ವಾರ್ಷಿಕ ಅನುದಾನ | ಮಾರ್ಚ್ ೨೦೦೩ರ ಅಂತ್ಯಕ್ಕೆ ಆಗಿರುವ ಖರ್ಚು | ಶೇಕಡಾ | ವಾರ್ಷಿಕ ಅನುದಾನ | ಮಾರ್ಚ್ ೨೦೦೪ ರ ಅಂತ್ಯಕ್ಕೆ ಆಗಿರುವ ಖರ್ಚು | ಶೇಕಡಾ |
|---|---|---|---|---|---|---|
| ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣ | ೧೧೦.೦೩ | ೬೩.೬೯ | ೫೭.೯೨ | ೧೦೬.೦೦ | ೪೬.೦೩ | ೪೩.೪೩ |
| ಕ್ರೀಡಾ ಮತ್ತು ಯುವಜನ ಸೇವೆ | ೧೨.೦೨ | ೧೧.೭೩ | ೯೭.೫೯ | ೧೨.೦೨ | ೫.೭೩ | ೪೭.೬೭ |
| ವೈದ್ಯಕೀಯ ಮತ್ತು ಜನಾರೋಗ್ಯ | ೬೬.೬೩ | ೨೯.೮೭ | ೪೪.೮೩ | ೬೬.೬೩ | ೨೯.೭೬ | ೪೪.೬೬ |
| ಕುಟುಂಬ ಕಲ್ಯಾಣ | ೩೧೫.೫೮ | ೨೨೯.೯೭ | ೭೨.೮೭ | ೩೧೫.೫೮ | ೨೫೧.೦೯ | ೭೯.೫೭ |
| ನೀರು ಪೂರೈಕೆ ಮತ್ತು ನೈರ್ಮಲ್ಯ | ೮೩೩.೩೨ | ೫೦೪.೫೮ | ೬೦.೫೫ | ೮೩೩.೩೨ | ೭೨೫.೭೦ | ೮೭.೦೯ |
| ಹರಿಜನ ಮತ್ತು ಗಿರಿಜನ ಕಲ್ಯಾಣ | ೩೧೬.೮೯ | ೩೧೬.೮೯ | ೧೦೦.೦೦ | ೩೧೨.೭೫ | ೧೮೪.೧೬ | ೫೮.೮೯ |
| ವಿಶೇಷ ಘಟಕ ಯೋಜನೆ | ೧೧೮.೯೪ | ೮೬.೪೨ | ೭೨.೬೬ | ೧೧೮.೯೪ | ೬೪.೩೫ | ೫೪.೧೧ |
| ಹಿಂದುಳಿದ ವರ್ಗಗಳ ಕಲ್ಯಾಣ | ೨೮.೨೫ | ೨೬.೪೦ | ೯೩.೪೫ | ೨೮.೨೫ | ೨೭.೯೪ | ೯೮.೯೧ |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೫೪೩.೬೯ | ೬೫೦.೩೨ | ೧೧೯.೬೧ | ೭೭೮.೬೯ | ೭೬೯.೮೯ | ೯೮.೮೭ |
| ಪೌಷ್ಠಿಕ ಆಹಾರ | ೨೬೩.೮೩ | ೧೯೯.೦೧ | ೭೫.೪೩ | ೨೬೩.೮೩ | ೨೬೯.೪೯ | ೧೦೨.೧೫ |
| ವ್ಯವಸಾಯ | ೧೦೯.೯೧ | ೪೧.೯೦ | ೩೮.೧೨ | ೧೦೯.೯೧ | ೮೧.೪೦ | ೭೪.೦೭ |
| ತೋಟಗಾರಿಕೆ | ೨೨.೫೧ | ೧೯.೦೪ | ೮೪.೫೮ | ೨೨.೫೧ | ೧೦.೦೩ | ೪೪.೫೬ |
| ಪಶುಸಂಗೋಪನೆ | ೬೪.೪೧ | ೭೫.೭೧ | ೧೧೭.೫೪ | ೬೪.೪೧ | ೯೨.೫೦ | ೧೪೩.೬೨ |
| ಮೀನುಗಾರಿಕೆ | ೨೫.೦೫ | ೧೯.೨೨ | ೭೬.೭೩ | ೨೫.೦೫ | ೨೦.೩೩ | ೮೧.೦೫ |
| ಸಾಮಾಜಿಕ ಅರಣ್ಯ | ೮೩.೬೨ | ೧೧೨.೪೨ | ೧೩೪.೪೪ | ೮೩.೬೨ | ೧೦೫.೨೭ | ೧೨೫.೮೮ |
| ಸಹಕಾರ | ೮.೨೮ | ೫.೦೬ | ೬೧.೧೧ | ೮.೨೮ | ೫.೦೪ | ೬೦.೮೭ |
| ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ | ೧೬೦.೯೧ | ೧೨೮.೯೯ | ೮೦.೧೬ | ೧೨೭.೬೪ | ೯೫.೭೦ | ೭೫.೦೦ |
| ಇಂದಿರಾ ಅವಾಜ್ ಯೋಜನೆ | ೪೧೬.೦೬ | ೩೧೬.೫೦ | ೭೬.೦೭ | ೩೯೮.೨೪ | ೨೯೮.೬೮ | ೭೫.೦೦ |
| ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ | ೧,೦೨೮.೩೨ | ೭೮೨.೨೪ | ೭೬.೦೭ | – | – | – |
| ಸಣ್ಣ ನೀರಾವರಿ | ೩೨.೬೯ | ೧೬.೦೦ | ೪೮.೮೦ | ೩೨.೬೯ | ೨೨.೮೯ | ೬೯.೮೨ |
| ಕೈಮಗ್ಗ ಮತ್ತು ಜವಳಿ | ೧೩.೨೨ | ೪.೮೭ | ೩೬.೮೪ | ೧೩.೨೨ | ೮.೪೦ | ೬೩.೫೪ |
| ರಸ್ತೆ ಮತ್ತು ಸೇತುವೆಗಳು | ೧೦೦.೬೩ | ೬೦.೮೯ | ೬೦.೫೧ | ೧೦೦.೬೩ | ೬೨.೮೧ | ೬೨.೪೨ |
| ರೇಷ್ಮೆ | ೩೧.೨೪ | ೧೯.೫೧ | ೬೨.೪೫ | ೩೧.೨೭ | ೧೮.೩೮ | ೫೮.೭೮ |
| ಗಿರಿಜನ ಉಪಯೋಜನೆ | ೨೧.೩೧ | ೨೦.೦೦ | ೯೩.೮೫ | ೨೧.೩೧ | ೬.೩೧ | ೨೯.೬೨ |

ಆಧಾರ: ಜಿಲ್ಲಾ ಪಂಚಾಯತ್, ಕೋಲಾರ.

**ಭೌತಿಕ ಪ್ರಗತಿ**

ಹತ್ತನೆಯ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷದಲ್ಲಿ ಬಂಗಾರಪೇಟೆ ತಾಲೂಕು ಕದಿರಿನತ್ತ (ಕದಿರಿನಾಥ) ಬಳಿ ಹೊಸಕೆರೆಯ ೨೫೯ ಹೆಕ್ಟೇರುಗಳ ಪೈಕಿ ೫೦ ಹೆಕ್ಟೇರುಗಳನ್ನು ನೀರಾವರಿಗೆ ಒಳಪಡಿಸಲಾಗಿದೆ. ಬೇತಮಂಗಲದ ಮೀನುಮರಿ ಕೇಂದ್ರದಲ್ಲಿ ೧೧ ಲಕ್ಷ ಮೀನುಮರಿ ಉತ್ಪಾದಿಸಿದ್ದು, ಜಿಲ್ಲೆಯ ವಿವಿಧ ಕೆರೆಗಳಲ್ಲಿ ೨.೮೨ ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ. ಇದಕ್ಕಾಗಿ ೪.೨೮ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಸಾರ್ವಜನಿಕರಲ್ಲಿ ಮೀನುಗಾರಿಕೆಯ ಬಗ್ಗೆ ಆಸಕ್ತಿ ಮೂಡಿಸಲು ಮತ್ಸ್ಯಾಲಯ ಸ್ಥಾಪನೆಗಾಗಿ ೦.೪೪ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯಡಿ (ಜೆ.ಜಿ.ಎಸ್.ವೈ) ನವೆಂಬರ್ ೨೦೦೧ರ ಅಂತ್ಯಕ್ಕೆ ೨೬೬೨ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇದಕ್ಕಾಗಿ ೩೬೦.೯೧ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಪ್ರತಿಫಲವಾಗಿ ೬.೨೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್) ಯಡಿ ೨೦೦೨–೨೦೦೩ರ ಸಾಲಿಗೆ ಒಟ್ಟು ೫೪೨.೯೫ ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು, ನವೆಂಬರ್ ೨೦೦೧ರ ಅಂತ್ಯಕ್ಕೆ ೩೬.೫೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ೧೯೮ ಕಾಮಗಾರಿಗಳು ಪೂರ್ಣಗೊಂಡಿದ್ದವು. ಇದರಿಂದಾಗಿ ೫.೧೪ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಅಲ್ಲದೆ ಜಿಲ್ಲೆಯಾದ್ಯಂತ ೨೨೮೩ ಆಶ್ರಯ ನಿವೇಶನಗಳನ್ನು ಅರ್ಹತಾನುಸಾರ ಹಂಚಲಾಗಿದೆ.

## ಬಡತನ ನಿವಾರಣೆ

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಇದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾ ನಿರ್ದೇಶಕರಾಗಿದ್ದ ಲಾರ್ಡ್ ಬಾಯಿಡಾರ್ ಅವರು ೧೯೪೫ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸುತ್ತಾ, 'ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨೩೦೦ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಣಿಸಬೇಕಾಗುತ್ತದೆ' ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ೨,೪೦೦ ಕ್ಯಾಲರಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ೨,೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಸೇವಿಸುತ್ತಿರುವವರನ್ನು ಬಡತನ ರೇಖೆಗಿಂತಲೂ ಕೆಳಗಿರುವವರೆಂದು ಪರಿಗಣಿಸಲಾಗುತ್ತದೆ.

ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಆದಾಯ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಠ ಅನುಭೋಗ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ, ರಾಜಕೀಯ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ. ಆಗಾಗಿ ಐದನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ. ಅಲ್ಲದೆ ವ್ಯಾಪಕವಾಗಿಯೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ_ಕಾರ್ಯಕ್ರಮಗಳೊಂದಿಗೆ ಕನಿಷ್ಟ ಅವಶ್ಯಕತೆ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಧೃಡೀಕರಣ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ಗ್ರಾಮೀಣ ಯುವಕರಿಗೆ ಸ್ವ–ಉದ್ಯೋಗ ತರಬೇತಿ ಯೋಜನೆ, ದಶಲಕ್ಷ ಬಾವಿ ಯೋಜನೆ, ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ ಮುಂತಾದವುಗಳನ್ನು ಜಾರಿಗೆ ತರಲಾಯಿತು. ಕೋಲಾರ ಜಿಲ್ಲೆಯಲ್ಲಿ ಗ್ರಾಮೀಣಾವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಜಾರಿಗೆ ತಂದಿರುವ ಪ್ರದೇಶಾಭಿವೃದ್ಧಿ ಯೋಜನೇಯ (ಎ.ಡಿ.ಪಿ.) ಕಾರ್ಯಕ್ರಮಗಳ ಸಂಕ್ಷಿಪ್ತ ವಿವರವನ್ನು ಮುಂದೆ ನೀಡಲಾಗಿದೆ.

**ಅ) ಜವಾಹರ್ ಗ್ರಾಮ ಸಮೃದ್ಧಿ ಯೋಜನೆ (ಜೆ.ಜಿ.ಎಸ್.ವೈ)**

ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯು ೧೯೯೯ರ ಏಪ್ರಿಲ್‌ನಿಂದ ಜಾರಿಗೆ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕೂಲಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯ ಮತ್ತು ಆಸ್ತಿಗಳನ್ನು ನಿರ್ಮಾಣ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶಗಳಾಗಿವೆ.

ಈ ಯೋಜನೆಯನ್ನು ಸಂಪೂರ್ಣವಾಗಿ ಗ್ರಾಮಪಂಚಾಯ್ತಿ ಮಟ್ಟದಲ್ಲಿ ಜಾರಿಗೊಳಿಸಬಹುದು. ಗ್ರಾಮೀಣ ಜನತೆಗೆ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳು, ಹರಿಜನ–ಗಿರಿಜನರಿಗೆ ಮನೆಗಳ ನಿರ್ಮಾಣ, ರಸ್ತೆ ಸಂಪರ್ಕ, ಸೇತುವೆ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಗೆ ೨೦೦೨–೦೩ರಲ್ಲಿ ರೂ. ೩೬೮.೬೪ ಲಕ್ಷ ಅನುದಾನ ಒದಗಿಸಲಾಗಿದ್ದು, ನವೆಂಬರ್–೨೦೦೧ರ ಅಂತ್ಯಕ್ಕೆ ೨,೭೬೨ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ರೂ. ೩೬೦.೯೧ ಲಕ್ಷ ವೆಚ್ಚ ಮಾಡಿ, ೬.೨೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

**ಆ) ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್)**

ಕೃಷಿ ಕೆಲಸಗಳು ಕಡಿಮೆ ಇರುವ ಕಾಲದಲ್ಲಿ ಉದ್ಯೋಗ ಒದಗಿಸುವ, ಸಮುದಾಯ ಆಸ್ತಿಗಳನ್ನು ಸೃಜಿಸುವ ಮುಖ್ಯ ಉದ್ದೇಶಗಳೊಂದಿಗೆ ೧೯೯೬–೯೭ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಂತೆ ಕನಿಷ್ಠ ೧೮ ವರ್ಷಕ್ಕೆ ಮೇಲ್ಪಟ್ಟು ೬೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀ–ಪುರುಷರಿಗೆ ೧೦೦ ಮಾನವ ದಿನಗಳ ಕೆಲಸವನ್ನು ಕನಿಷ್ಠ ವೇತನಕ್ಕೆ ಅನುಗುಣವಾಗಿ ನೀಡಲಾಗುವುದು. ಈ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ೮೦:೨೦ರ ಅನುಪಾತದಲ್ಲಿ ಭರಿಸುತ್ತವೆ.

ಜಿಲ್ಲೆಯಲ್ಲಿ ೨೦೦೨–೦೩ರಲ್ಲಿ ರೂ. ೫೪೨.೯೫ ಲಕ್ಷ ಅನುದಾನವಿದ್ದು, ೩೦ನೇ ನವೆಂಬರ್ ೨೦೦೧ರ ಅಂತ್ಯಕ್ಕೆ ರೂ. ೩೯೬.೫೦ ಲಕ್ಷ ವೆಚ್ಚ ಮಾಡಿ, ೧೯೮ ಕಾಮಗಾರಿಗಳನ್ನು ಪೂರ್ಣಗೊಳಿಸಿ, ೫.೧೪ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

**ಇ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್.ಜಿ.ಆರ್.ವೈ)**

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿ ೧೫ನೇ ಆಗಸ್ಟ್ ೨೦೦೧ರಂದು ಜಾರಿಗೆ ಬಂದಿದೆ. ಎಲ್ಲಾ ಉದ್ಯೋಗ ಸೃಷ್ಟಿಸುವ ಯೋಜನೆಗಳು ಎಸ್.ಜಿ.ಆರ್.ವೈ ಯೋಜನೆಯ ಭಾಗವಾಗಿ ಮುಂದುವರೆದು ಎಲ್ಲಾ ಹಂತಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆ (ಪಿ.ಆರ್.ಐ)ಗಳ ಮೂಲಕ ಅನುಷ್ಠಾನ ಗೊಳ್ಳುತ್ತವೆ. ಎಸ್.ಜಿ.ಆರ್.ವೈ. ಯೋಜನೆಯ ವಾರ್ಷಿಕ ಆಯವ್ಯಯದಲ್ಲಿ ಶೇ. ೫೦ರಷ್ಟು ಅನುದಾನವನ್ನು ಮೊದಲನೆ ವಾಹಿನಿಯಡಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯ್ತಿಗಳಿಗೆ, ಉಳಿದ ಶೇ. ೫೦ ರಷ್ಟು ಅನುದಾನವನ್ನು ಎರಡನೇ ವಾಹಿನಿಯಲ್ಲಿ ಗ್ರಾಮ ಪಂಚಾಯ್ತಿಗಳಿಗೆ ಒದಗಿಸಲಾಗುತ್ತದೆ. ಎಸ್.ಜಿ.ಆರ್.ವೈ. ಯೋಜನೆಯ ಮೊದಲನೆ ವಾಹಿನಿಯಲ್ಲಿ ನಿಗದಿಯಾಗಿರುವ ಅನುದಾನದಲ್ಲಿ ಶೇ. ೪೦ ರಷ್ಟು ಹಣವನ್ನು ಜಿಲ್ಲಾ ಪಂಚಾಯ್ತಿಗೂ, ಶೇ. ೬೦ ರಷ್ಟು ಹಣವನ್ನು ತಾಲೂಕು ಪಂಚಾಯ್ತಿಗಳಿಗೂ ಹಂಚಿಕೆ ಮಾಡಲಾಗುತ್ತದೆ. ೨೦೦೧–೦೨ರಲ್ಲಿ ಈ ಯೋಜನೆಯ ಮೊದಲನೆ ವಾಹಿನಿಯಲ್ಲಿ (ಇ.ಎ.ಎಸ್) ರೂ. ೫೧೫.೦೩ ಲಕ್ಷ ಅನುದಾನವಿದ್ದು, ೪೪೦.೧೯ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ೫.೧೭ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಈ ಯೋಜನೆಯ ಎರಡನೇಯ ವಾಹಿನಿಯಲ್ಲಿ (ಜೆ.ಜಿ.ಎಸ್.ವೈ) ರೂ. ೪೧೮.೪೩ ಲಕ್ಷ ರೂ.ಗಳ ಅನುದಾನವಿದ್ದು, ರೂ. ೩೬೩.೨೮೫ ಲಕ್ಷಗಳನ್ನು ಖರ್ಚು ಮಾಡಿ ೬.೨೮ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

### ಈ) ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ (ಡಿ.ಪಿ.ಎ.ಪಿ.)

ಬರಪೀಡಿತ ಪ್ರದೇಶದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ, ಜನರ ಜೀವನಮಟ್ಟವನ್ನು ಸುಧಾರಿಸಲು ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ೭೫:೨೫ರ ಅನುಪಾತದಂತೆ ಒದಗಿಸುತ್ತಿವೆ. ಜಿಲ್ಲೆಯಲ್ಲಿ ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮವು ೧೯೮೭ ರಿಂದ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿರುತ್ತದೆ. ಜಲಾನಯನ ಪ್ರದೇಶಗಳ ಅಭಿವೃದ್ಧಿ ಯೋಜನೆಯ ಆಧಾರದ ಮೇಲೆಯೇ ಬರಪೀಡಿತ ಪ್ರದೇಶ ಹಾಗೂ ಬಂಜರು ಭೂಮಿಗಳನ್ನು ಅಭಿವೃದ್ಧಿಗೊಳಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿನ ಒಂಭತ್ತು ತಾಲೂಕುಗಳಲ್ಲಿ ೪೭ ಜಲಾನಯನ ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ. ಈ ಜಲಾನಯನ ಪ್ರದೇಶಗಳ ವ್ಯಾಪ್ತಿಗೆ ೧೩೫ ಹಳ್ಳಿಗಳು ಒಳಪಡುತ್ತವೆ. ಈ ಯೋಜನೆಗೆ ೨೦೦೨–೦೩ರಲ್ಲಿ ರೂ. ೪೧೧.೫೩ ಲಕ್ಷಗಳ ಅನುದಾನವಿದ್ದು, ರೂ. ೩೨೯.೦೦ ಲಕ್ಷ ವೆಚ್ಚವಾಗಿದೆ. ೨೦೦೩–೦೪ರಲ್ಲಿ ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಐದು ವಾಹಿನಿಗಳಲ್ಲಿ ಬಿಡುಗಡೆಯಾದ ಒಟ್ಟು ಹಣ ರೂ ೫೮೪.೨೯೨ ಲಕ್ಷಗಳಾಗಿದ್ದು, ರೂ ೪೫೯.೫೮೭ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

### ಉ) ಇಂದಿರಾ ಆವಾಸ್ ಯೋಜನೆ: (ಐ.ಎ.ವೈ)

ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಶೇ. ೬೦ ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಶೇ. ೪೦ರಷ್ಟು ಇತರೆ ವರ್ಗದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಆರ್ಥಿಕ ನೆರವು ಒದಗಿಸಲಾಗುತ್ತದೆ. ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಿ, ರೂ. ೨೦,೦೦೦ ಗಳನ್ನು ಸಹಾಯ ಧನದ ರೂಪದಲ್ಲಿ ನೀಡಲಾಗುತ್ತದೆ.

### ಊ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ.)

ಸ್ವ–ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಈ ಯೋಜನೆಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.), ಗ್ರಾಮೀಣ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ (ಟ್ರೈಸಂ), ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಯೋಜನೆ (ದ್ವಾಕ್ರಾ), ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು (ಸಿಟ್ರಾ), ಗಂಗಾ ಕಲ್ಯಾಣ ಯೋಜನೆ (ಜೆ.ಕೆ.ವೈ) ದಶಲಕ್ಷ ಬಾವಿ ಯೋಜನೆ (ಎಂ.ಡಬ್ಲ್ಯೂ.ಎಸ್.) ಮುಂತಾದ ಉದ್ಯೋಗ ಯೋಜನೆಗಳನ್ನು ವಿಲೀನಗೊಳಿಸಿ ಏಪ್ರಿಲ್ ೧೯೯೯ ರಿಂದ ಜಾರಿಗೆ ತರಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇ. ೭೫:೨೫ರ ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ.

ಗ್ರಾಮೀಣ ಬಡಜನರನ್ನು (ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರನ್ನು) ಸ್ವ ಸಹಾಯ ಗುಂಪುಗಳಾಗಿ ವಿಂಗಡಿಸಿ, ಅವರಿಗೆ ತರಬೇತಿ, ಸಾಲ, ತಂತ್ರಜ್ಞಾನ, ಮೂಲಭೂತ ಸೌಕರ್ಯ ಹಾಗೂ ಮಾರುಕಟ್ಟೆಯಂತಹ ಸೌಲಭ್ಯಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಗೆ ನಿಗದಿಪಡಿಸಿರುವ ವಾರ್ಷಿಕ ಆಯವ್ಯಯದಲ್ಲಿ ಶೇ. ೧೦ರಷ್ಟು ಅನುದಾನ ಗುಂಪು ರಚನೆಗೆ, ಶೇ. ೧೦ರಷ್ಟು ಅನುದಾನ ತರಬೇತಿಗೆ, ಶೇ ೨೦ರಷ್ಟು ಅನುದಾನ ಮೂಲಭೂತ ಸೌಕರ್ಯಕ್ಕೆ ಹಾಗೂ ಶೇ. ೬೦ರಷ್ಟು ಅನುದಾನ ಗುಂಪು ಹಾಗೂ ವೈಯಕ್ತಿಕ ಫಲಾನುಭವಿಗಳಿಗೆ ಸಹಾಯಧನ ಪಾವತಿಗಾಗಿ ನಿಗದಿಪಡಿಸಲಾಗಿದೆ. ಈ ಯೋಜನೆಯಲ್ಲಿ ಶೇ. ೪೨ರಷ್ಟು ಪರಿಶಿಷ್ಟ ಜಾತಿಯವರಿಗೆ, ಶೇ. ೮ರಷ್ಟು ಪರಿಶಿಷ್ಟ ಪಂಗಡದವರಿಗೆ, ಶೇ. ೧೧ರಷ್ಟು ಅಲ್ಪಸಂಖ್ಯಾತರರಿಗೆ, ಹಾಗೂ ಶೇ. ೩೯ರಷ್ಟು ಇತರರಿಗೆ ಪ್ರಯೋಜನ ಒದಗಿಸಲಾಗುವುದು. ೨೦೦೨–೦೩ರಲ್ಲಿ ೧೦೦೧ ವೈಯಕ್ತಿಕ ಫಲಾನುಭವಿಗಳಿಗೆ ಮತ್ತು ೧೮೯ ಸ್ವ ಸಹಾಯ ಗುಂಪುಗಳಿಗೆ ಅನುಕೂಲ ಕಲ್ಪಿಸಲಾಗಿದ್ದು, ಇದಕ್ಕಾಗಿ ರೂ. ೩೮೮.೯೨ ಲಕ್ಷಗಳನ್ನು ವೆಚ್ಚ ಮಾಡಲಾಯಿತು.

**ಋ) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಡಿ)**

ಗ್ರಾಮೀಣ ಇಂಧನ ಕಾರ್ಯಕ್ರಮಗಳಲ್ಲಿ ಈ ಯೋಜನೆ ಮಹತ್ವ ಪಡೆದಿದ್ದು, ಅಸಂಪ್ರದಾಯಕ ಇಂಧನ ಮೂಲಗಳ ಉಪಯೋಗವನ್ನು ಜನಪ್ರಿಯಗೊಳಿಸಲು, ಅಡಿಗೆಗಾಗಿ ಉಪಯೋಗಿಸಲಾಗುತ್ತಿರುವ ಸೌದೆ ಬಳಕೆಯ ನಿಯಂತ್ರಣ ಹಾಗೂ ಅರಣ್ಯ ನಾಶವನ್ನು ತಡೆಗಟ್ಟುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೨–೮೩ ರಿಂದ ಜಾರಿಗೆ ತರಲಾಗಿದೆ.

೨೦೦೨–೦೩ರಲ್ಲಿ ಈ ಯೋಜನೆಯಂತೆ ಜಿಲ್ಲೆಯಲ್ಲಿ ೬೦೦ ಸ್ಥಾವರಗಳ ಸ್ಥಾಪನೆಯ ಭೌತಿಕ ಗುರಿ ನಿಗದಿಪಡಿಸಲಾಗಿದ್ದು, ೩೩೮ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಇದಕ್ಕಾಗಿ ರೂ. ೨೦.೪೭ಲಕ್ಷ ಗಳನ್ನು ವೆಚ್ಚ ಮಾಡಲಾಗಿದೆ.

**ಎ) ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ (ಎನ್.ಸಿ.ಐ.ಸಿ.)**

ಗ್ರಾಮೀಣ ಪ್ರದೇಶದ ಗೃಹಿಣಿಯರ ಆರೋಗ್ಯ ಕಾಪಾಡಲು, ಇಂಧನ ವೆಚ್ಚ ಕಡಿಮೆ ಮಾಡಲು ಹೊಗೆ ರಹಿತ ಒಲೆಗಳನ್ನು ಒದಗಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೪–೮೫ ರಿಂದ ಜಾರಿಗೆ ತರಲಾಯಿತು. ಈ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಇಂಧನ ಉಳಿಸಲು ವಿನ್ಯಾಸಗೊಳಿಸಿರುವ ಸುಧಾರಿತ ಒಲೆಗಳನ್ನು ಎಲ್ಲಾ ವರ್ಗದ ಜನರು ಬಳಸಬಹುದಾಗಿದೆ. ಸುಧಾರಿತ ಒಲೆಗಳಿಂದಾಗಿ ಕಟ್ಟಿಗೆಯ ಉಳಿತಾಯ, ಹೊಗೆರಹಿತ ಹಾಗೂ ಅತಿಶೀಘ್ರ ಅಡುಗೆಯನ್ನು ಮಾಡಬಹುದು. ಈ ಒಲೆಗಳಲ್ಲಿ ಸ್ಥಿರ ಮತ್ತು ಚರ ಒಲೆಗಳೆಂದು ಎರಡು ಬಗೆಗಳಿದ್ದು, ಚರ ಒಲೆಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೊಂಡ್ಯೊಯ್ಯಬಹುದು. ೨೦೦೨–೦೩ರಲ್ಲಿ ಜಿಲ್ಲೆಯಲ್ಲಿ ೩೦೦೦ ಒಲೆಗಳನ್ನು ಅಳವಡಿಸುವ ಗುರಿ ಹೊಂದಲಾಗಿದ್ದು, ೩,೨೭೭ ಒಲೆಗಳನ್ನು ಅಳವಡಿಸಿ ಗುರಿ ಮೀರಿ ಸಾಧನೆ ಮಾಡಲಾಗಿದೆ. ಇದಕ್ಕಾಗಿ ೪.೭೨ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ಏ) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ (ಐ.ಆರ್.ಇ.ಪಿ)**

ಸಾಂಪ್ರದಾಯಕ ಇಂಧನ ಶಕ್ತಿ ಮೂಲಗಳಾದ ವಿದ್ಯುತ್, ಸೀಮೆಎಣ್ಣೆ ಮತ್ತು ಸೌದೆ ಇವುಗಳ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಉಪಕರಣಗಳನ್ನು ಬಳಸುವುದು ಹಾಗೂ ಅಸಂಪ್ರದಾಯಕ, ಇಂಧನ ಶಕ್ತಿ ಮೂಲಗಳಾದ ಸೌರಶಕ್ತಿ, ಪವನಶಕ್ತಿ ಹಾಗೂ ಜೈವಾನಿಲ ಶಕ್ತಿಯನ್ನು ಹೆಚ್ಚು ಹೆಚ್ಚು ಬಳಸುವುದರ ಮೂಲಕ ಇಂಧನ ಶಕ್ತಿಯ ಕೊರತೆಯನ್ನು ನೀಗಿಸಲು ಐ.ಆರ್.ಇ.ಪಿ ಯೋಜನೆಯನ್ನು ೧೯೯೪–೯೫ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯನ್ನು ಜಿಲ್ಲೆಯ ಗೌರಿಬಿದನೂರು ತಾಲೂಕಿನಲ್ಲಿ ಅನುಷ್ಠಾನಗೊಳಿಸಲಾಗಿದೆ. ಒಟ್ಟು ೮೪ ಭೌತಿಕ ಉಪಕರಣಗಳು ಹಾಗೂ ರೂ.೧೩.೫೦ ಲಕ್ಷಗಳ ಆರ್ಥಿಕ ಗುರಿಯನ್ನು ಹೊಂದಲಾಗಿದ್ದು, ೯೬ ಭೌತಿಕ ಉಪಕರಣಗಳ ಹಾಗೂ ೧೪.೨೮ ಲಕ್ಷ ರೂ.ಗಳ ಆರ್ಥಿಕ ಸಾಧನೆ ಮಾಡಲಾಗಿದೆ.

**ಐ) ಆಶ್ರಯ (ಗ್ರಾಮೀಣ) ಯೋಜನೆ**

ಗ್ರಾಮೀಣ ಪ್ರದೇಶದಲ್ಲಿ ನಿವೇಶನರಹಿತರಿಗೆ ನಿವೇಶನ ಒದಗಿಸಲು ಆಶ್ರಯ ಯೋಜನೆಯನ್ನು ೧೯೯೧–೯೨ರಲ್ಲಿ ಜಾರಿಗೆ ತರಲಾಯಿತು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಾರ್ಷಿಕ ೧೧,೦೦೦ ರೂ.ಗಳಿಗಿಂತ ಕಡಿಮೆ ಆದಾಯವಿರುವ ನಿವೇಶನ ರಹಿತ ಜನರಿಗೆ ಕುಟುಂಬಕ್ಕೆ ಒಂದರಂತೆ ಗ್ರಾಮೀಣ ಪ್ರದೇಶದವರಿಗೆ ೩೦×೪೦ ಅಡಿಗಳ ಹಾಗೂ ನಗರ ಪ್ರದೇಶದವರಿಗೆ ೨೦×೩೦ ಅಡಿಗಳ ಅಳತೆಯ ನಿವೇಶನಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಆಶ್ರಯ (ಗ್ರಾಮೀಣ) ಯೋಜನೆಯನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ೨೦೦೨–೦೩ರಲ್ಲಿ ೫,೩೨೫ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದೆ. ಇದರಲ್ಲಿ ೭೨೭ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಉಳಿದ ೪,೫೯೮ ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಈ ಅವಧಿಯಲ್ಲಿ ಇದಕ್ಕಾಗಿ ೫೯೬.೬೬ ಲಕ್ಷ ರೂ.ಗಳ ಆರ್ಥಿಕ ಗುರಿ ಹೊಂದಿದ್ದು, ೪೯೩.೪೬ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

### ಒ) ಅಂಬೇಡ್ಕರ್ (ಗ್ರಾಮೀಣ) ಯೋಜನೆ

ಅಂಬೇಡ್ಕರ್ ವಸತಿ ಯೋಜನೆಯು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮಾತ್ರ ಮೀಸಲಾಗಿದೆ. ಜಿಲ್ಲೆಯಲ್ಲಿ ೨೦೦೨–೨೦೦೩ರಲ್ಲಿ ೧,೫೯೨ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದ್ದು, ೨೦೪ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಉಳಿದ ೧,೩೮೮ ಮನೆಗಳ ನಿರ್ಮಾಣ ವಿವಿಧ ಹಂತದಲ್ಲಿದೆ. ಇದಕ್ಕಾಗಿ ೧೭೦.೫೨ ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು, ೧೨೪.೬೯ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

### ಓ) ಸ್ವಚ್ಛ ಗ್ರಾಮ ಯೋಜನೆ

ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ರಾಜ್ಯ ಸರ್ಕಾರ ಕೆಳಗಿನ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ೨೦೦೦ದಿಂದ ಜಾರಿಗೆ ತಂದಿದೆ.

೧) ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮಪಡಿಸುವುದು.

೨) ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತೀ ಬೀದಿಯಲ್ಲಿ ಚರಂಡಿಗಳ ನಿರ್ಮಾಣ.

೩) ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳ (ಕಮ್ಯೂನಿಟಿ ಕಾಂಪೋಸ್ಟ್) ಗಳನ್ನು ಒದಗಿಸಿ, ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು.

೪) ಗ್ರಾಮದ ಎಲ್ಲಾ ಮನೆಗಳಲ್ಲಿಯೂ ಹೊಗೆ ರಹಿತ ಸುಧಾರಿತ ಅಸ್ತ್ರ ಒಲೆಗಳನ್ನು ಬಳಸುವಂತೆ ಒದಗಿಸುವುದು.

೫) ಗ್ರಾಮದ ಎಲ್ಲಾ ಜನರಿಗಾಗಿ ಕುಟುಂಬಗಳಿಗಾಗಿ ಸಾಮೂಹಿಕ ಶೌಚಾಲಯಗಳು, ಕೌಟುಂಬಿಕ ಶೌಚಾಲಯಗಳು, ಹಾಗೂ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡುವುದು ಮುಂತಾದವು.

ಜಿಲ್ಲೆಯಲ್ಲಿ ೨೦೦೦–೦೧ರಲ್ಲಿ ಸ್ವಚ್ಛ ಗ್ರಾಮ ಯೋಜನೆಗಾಗಿ ೪೯ ಗ್ರಾಮಗಳನ್ನು ಆಯ್ಕೆ ಮಾಡಿದ್ದು, ಪ್ರತಿ ಗ್ರಾಮಕ್ಕೆ ೨೦ ಲಕ್ಷ ರೂ.ಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಕೆಲಸ ಪ್ರಗತಿಯಲ್ಲಿತ್ತು. ಇದಕ್ಕಾಗಿ ೨೮೧ ಲಕ್ಷ ರೂ.ಗಳ ಅನುದಾನವಿದ್ದು, ೧೯೨.೯೪ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿರ್ಮೂಲನೆಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿವೆ. ರಾಜ್ಯ ಸರ್ಕಾರ ಸ್ತ್ರೀ–ಶಕ್ತಿಯೋಜನೆ, ಅಕ್ಷರದಾಸೋಹ, ಯಶಸ್ವಿನಿ, ನಿರ್ಮಲ ಕರ್ನಾಟಕ ಮುಂತಾದ ಇನ್ನೂ ಹತ್ತು ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಜಾರಿಗೊಳಿಸುತ್ತಿದೆ.

## ಬರ ಮತ್ತು ಪ್ರವಾಹ

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಕೋಲಾರ ಜಿಲ್ಲೆಯು ಭೀಕರ ಬರಗಾಲಕ್ಕೆ ತುತ್ತಾಗಿತ್ತು. ಇಂತಹ ಸ್ಥಿತಿಯಲ್ಲಿ ಮರಾಠರೊಂದಿಗೆ ಯುದ್ಧ ಸಂಭವಿಸಿ, ಮತ್ತಷ್ಟು ತತ್ತರಿಸಿತು. ಮತ್ತೆ ಲಾರ್ಡ್ ಕಾರನ್ ವಾಲೀಸ್‌ನ ದಂಡಯಾತ್ರೆಯ ಕಾಲದಲ್ಲಿ ಹಸಿವಿನಿಂದ ಹಲವಾರು ಮಂದಿ ಪ್ರಾಣತ್ಯಾಗ ಮಾಡಿದರು. ೧೯ನೇ ಶತಮಾನದಲ್ಲಿ ೧೮೨೪, ೧೮೩೧ ಮತ್ತು ೧೮೩೩ರ ಅವಧಿ ಆಹಾರ ಪದಾರ್ಥಗಳ ಕೊರತೆಯ ಅವಧಿಯಾಗಿತ್ತು. ೧೮೫೧ರ ಅವಧಿಯು ತುಂಬಾ ಕ್ಲಿಷ್ಟಕರವಾಗಿದ್ದು, ಇದೇ ಪರಿಸ್ಥಿತಿ ನಂತರದ ವರ್ಷವು ಮುಂದುವರಿಯಿತು. ೧೮೭೫–೭೬ ಹಾಗೂ ೧೮೭೬–೭೭ರಲ್ಲೂ ಭೀಕರ ಬರಗಾಲ ಸಂಭವಿಸಿತು. ಈ ಪರಿಸ್ಥಿತಿ ೧೮೭೭ರ ಮೇ ತಿಂಗಳಿನವರಿಗೂ ಬದಲಾಗಲಿಲ್ಲ. ಸಾವಿರಾರು ಜನರು ಹಸಿವಿನಿಂದ ಬಳಲುತ್ತಿದ್ದಾಗ ಅನ್ನಸತ್ರ

(ಗಂಜಿಕೇಂದ್ರ)ಗಳನ್ನು ತೆರೆಯಲಾಯಿತು. ಈ ಕಠಿಣ ಪರಿಸ್ಥಿತಿಯಲ್ಲಿ ಆಗಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಲಾಯ್‌ಟನ್ ರಾಜ್ಯಕ್ಕೆ ಭೇಟಿ ನೀಡಿ ಸರ್ ಚಾರ್ಲ್‌ಸ್ ಎಲಿಟನ್ ರವರನ್ನು ಬರಗಾಲದ ಕಮೀಷನರ್ ಆಗಿ ನೇಮಕ ಮಾಡಿದರು. ಅಲ್ಲದೇ ದೊಡ್ಡ ಪ್ರಮಾಣದ ಸಿಬ್ಬಂದಿಯನ್ನು ನೇಮಕ ಮಾಡಿ ಪರಿಹಾರ ಕಾರ್ಯ ಕೈಗೊಳ್ಳಲಾಯಿತು. ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿತು. ೧೮೯೯ (೨೦ ವರ್ಷಗಳ ನಂತರ)ರಲ್ಲಿ ಬಹಳ ಕಡಿಮೆ ಪ್ರಮಾಣದ ಮಳೆ ಬಿದ್ದಿತು. ಅಲ್ಲದೇ ಈಶಾನ್ಯ ಮಾರುತ ನಿರೀಕ್ಷಿಸಿದಷ್ಟು ಮಳೆಯನ್ನು ತರುವಲ್ಲಿ ವಿಫಲವಾಯಿತು. ಮಳೆಯು ಸೆಪ್ಟೆಂಬರ್ ಹಾಗೂ ಅಕ್ಟೋಬರ್ ೧೮೯೯ರವರೆವಿಗೂ ಸಾಧಾರಣ ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಆಯಿತು.

೨೦ನೇ ಶತಮಾನದ ಆರಂಭದ ದಶಕದಲ್ಲೂ ಅನಾವೃಷ್ಟಿಯಿಂದಾಗಿ ಅಗತ್ಯ ವಸ್ತುಗಳ ಕೊರತೆ ಉಂಟಾಯಿತು. ನಂತರ ೧೯೦೩-೦೪ರಲ್ಲಾದ ಅತಿವೃಷ್ಟಿಯಿಂದಾಗಿ ಜಿಲ್ಲೆಯಾದ್ಯಂತ ಬೆಳೆದು ನಿಂತಿದ್ದ ಫಸಲು ನಾಶವಾಯಿತು. ೧೯೦೪-೦೫ನೇ ಸಾಲಿನಲ್ಲಿ ಈಶಾನ್ಯ ಮಾರುತ ಮಳೆ ತರುವಲ್ಲಿ ವಿಫಲವಾಯಿತು. ಇದರಿಂದ ರೈತರು ಹತಾಶರಾದರು. ೧೯೦೮-೦೯ರ ಸಾಲು ಕೂಡ ರೈತರ ಬಾಳಿಗೆ ಕತ್ತಲಾಯಿತು. ಜಿಲ್ಲೆಯಲ್ಲಿ ೧೯೨೩ರಲ್ಲಿ ನೈರುತ್ಯ ಮಾರುತ ಅಲ್ಪಪ್ರಮಾಣದಲ್ಲಿ ಮಳೆ ತಂದರೆ, ಈಶಾನ್ಯ ಮಾರುತ ಸಂಪೂರ್ಣ ವಿಫಲ ಹೊಂದಿತು. ಇಂಥ ಸಂಕಷ್ಟದಲ್ಲಿದ್ದಾಗ ೧೯೨೪ರಲ್ಲಿ ನೈರುತ್ಯ ಮಾನ್‌ಸೂನ್ ಮಾರುತ ಭಾರಿ ಮಳೆಯನ್ನು ತಂದು ಬೆಳೆನಾಶಕ್ಕೆ ಕಾರಣವಾಯಿತು. ಮಳೆಯ ನಿಯತಕಾಲಿಕ ಕೊರತೆಯಿಂದಾಗಿ ಜಿಲ್ಲೆಯ ಉತ್ಪಾದನೆ ಕುಂಠಿತಗೊಂಡಿತು. ಪರಿಣಾಮವಾಗಿ ಜನರು ಕ್ಷೋಭೆಗೆ ತುತ್ತಾದರು. ಸ್ವಾತಂತ್ರ್ಯಾನಂತರ ಯಶಸ್ವೀ ಯೋಜನೆಗಳ ಮೂಲಕ ಪರಿಹಾರ ಕಾರ್ಯಗಳನ್ನು ತೀವ್ರಗೊಳಿಸಿ ಆರ್ಥಿಕಾಭಿವೃದ್ಧಿಯ ಬೆಳವಣಿಗೆಗೆ ಪ್ರಯತ್ನಿಸಲಾಯಿತು. ಉತ್ತಮ ಮಳೆಯಿಂದಾಗಿ ೧೯೬೬ರಲ್ಲಿ ಆಹಾರ ಪದಾರ್ಥಗಳ ಉತ್ಪಾದನೆ ಅಧಿಕವಾಗಿತ್ತು. ಆದರೆ ಮತ್ತೆ ೧೯೬೭ರಲ್ಲಿ ಎದುರಾದ ಅನಾವೃಷ್ಟಿಯು ಉತ್ಪಾದನೆಯ ಮೇಲೆ ಭೀಕರ ಪರಿಣಾಮ ಬೀರಿತು.

೧೯೮೨ ರಿಂದ ೧೯೮೫ರವರೆಗಿನ ವರ್ಷಗಳಲ್ಲಿ ಮುಂಗಾರಿನ (ಜೂನ್‌ನಿಂದ ಸೆಪ್ಟೆಂಬರ್‌ರವರೆಗೆ) ಅವಧಿಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಎರಡು ಆಗಿದ್ದರೆ, ೧೯೮೪ರಲ್ಲಿ ಒಂದು ತಾಲೂಕು ಹಾಗೂ ೧೯೮೫ರಲ್ಲಿ ಎರಡು ತಾಲೂಕುಗಳು ಸೇರಿದ್ದವು. ಸಾಧಾರಣ ಬರಗಾಲಕ್ಕೆ ತುತ್ತಾದ ತಾಲೂಕುಗಳ ಸಂಖ್ಯೆ ೧೯೮೩ರಲ್ಲಿ ಒಂದು, ೧೯೮೪ರಲ್ಲಿ ಒಂದು ಹಾಗೂ ೧೯೮೫ರಲ್ಲಿ ನಾಲ್ಕು ಆಗಿದ್ದವು. ಕಡಿಮೆ ಬರಗಾಲಕ್ಕೆ ತುತ್ತಾದ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಆರು, ೧೯೮೩ರಲ್ಲಿ ಎರಡು, ೧೯೮೪ರಲ್ಲಿ ಐದು ಹಾಗೂ ೧೯೮೫ರಲ್ಲಿ ನಾಲ್ಕು ಆಗಿದ್ದವು. ಹೀಗೆ ಒಟ್ಟು ಬರಗಾಲಕ್ಕೆ ತುತ್ತಾದ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಎಂಟು ಆಗಿದ್ದರೆ, ೧೯೮೩ರಲ್ಲಿ ಮೂರು, ೧೯೮೪ರಲ್ಲಿ ಏಳು ಹಾಗು ೧೯೮೫ರಲ್ಲಿ ೧೦ ಆಗಿದ್ದವು.

೧೯೮೨ರಿಂದ ೧೯೮೫ರವರೆಗಿನ ವರ್ಷಗಳಲ್ಲಿ ಹಿಂಗಾರಿನ (ಅಕ್ಟೋಬರ್ ನಿಂದ ಡಿಸೆಂಬರ್ ರವರೆಗೆ) ಅವಧಿಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ತಾಲೂಕುಗಳು ೧೯೮೨ರಲ್ಲಿ ಎರಡು ಆಗಿದ್ದರೆ, ೧೯೮೩ರಲ್ಲಿ ಏಳು, ೧೯೮೪ರಲ್ಲಿ ಒಂದು ಹಾಗೂ ೧೯೮೫ರಲ್ಲಿ ಮೂರು ಆಗಿದ್ದವು. ಸಾಧಾರಣ ಬರಗಾಲಕ್ಕೆ ಒಳಗಾದ ತಾಲೂಕುಗಳು ೧೯೮೨ರಲ್ಲಿ ಆರು, ೧೯೮೩ರಲ್ಲಿ ಮೂರು, ೧೯೮೪ರಲ್ಲಿ ಎರಡು ಹಾಗೂ ೧೯೮೫ರಲ್ಲಿ ಏಳು ಆಗಿದ್ದರೆ, ಕಡಿಮೆ ಬರಗಾಲಕ್ಕೆ ತುತ್ತಾದ ತಾಲೂಕುಗಳು ೧೯೮೨ ಹಾಗೂ ೧೯೮೩ರಲ್ಲಿ ತಲಾ ಒಂದೊಂದಾದರೆ, ೧೯೮೪ರಲ್ಲಿ ಮೂರು ಆಗಿದ್ದವು.

೧೯೯೦-೯೧ರಲ್ಲಿ ಮಳೆಯಿಂದ ಮನೆ ಕುಸಿದು ನಷ್ಟಕ್ಕೊಳಗಾದ ಕುಟುಂಬಗಳ ಸಂಖ್ಯೆ ೨೪,೧೪೫ ಆಗಿದ್ದು, ಈ ಕುಟುಂಬಗಳಿಗೆ ೧೩೬ ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಿದ್ದರೆ, ೨೦೦೦-೨೦೦೧ರಲ್ಲಿ ಕೇವಲ ೪,೦೦೪ ಕುಟುಂಬಗಳು ಹಾನಿಗೊಳಗಾಗಿದ್ದು, ೧೬.೨೨ ಲಕ್ಷ ರೂ.ಗಳ ಪರಿಹಾರ ನೀಡಲಾಯಿತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೯ ಅನ್ನು ನೋಡಿ.

**ಕೋಷ್ಟಕ ೮.೩೯: ೧೯೯೦–೯೧ ಹಾಗೂ ೧೯೯೫–೯೬ರಿಂದ ೨೦೦೨–೨೦೦೩ರವರೆಗೆ ಕೋಲಾರ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಸಂಭವಿಸಿದ ಹಾನಿ ಮತ್ತು ಪರಿಹಾರ ಹಣ ವಿತರಣೆಯ ವಿವರಗಳು**

| ವರ್ಷಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಮನೆ ಹಾಗೂ ಜಾನುವಾರು ವರ್ಷಕ್ಕೆ ನೀಡಲಾದ ಪರಿಹಾರ ರೂ.ಗಳಲ್ಲಿ | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ ರೂ.ಗಳಲ್ಲಿ |
|---|---|---|---|---|---|
| ೧೯೯೦–೯೧ | ೧,೯೮೭ | ೪೮ | ೧,೩೫,೮೪,೬೧೪ | ೯೯ | ೪,೫೧,೪೦೦ |
| ೧೯೯೫–೯೬ | ೧೪ | ೦೬ | ೧,೦೦,೭೫೦ | ೬೪೨ | ೬,೪೯,೧೮೬ |
| ೧೯೯೬–೯೭ | ೦೭ | ೦೩ | ೪,೯೪,೪೪೦ | ೩೬೦ | ೪,೮೮,೫೧೫ |
| ೧೯೯೭–೯೮ | ೧೦ | ೧೦ | ೧೮,೬೯,೩೮೨ | ೫೦೨ | ೯,೫೨,೪೮೬ |
| ೧೯೯೮–೯೯ | ೧೫೭ | ೦೭ | ೨೪,೩೭,೬೧೮ | ೭೪೧ | ೫,೬೧,೦೩೧ |
| ೧೯೯೯–೦೦ | ೦೪ | ೦೭ | ೮,೨೦,೮೮೦ | ೬೧೪ | ೩,೫೩,೮೦೯ |
| ೨೦೦೦–೦೧ | ೫೪ | ೦೧ | ೧೬,೨೨,೨೨೦ | ೧,೨೮೫ | ೮,೭೯,೦೧೦ |
| ೨೦೦೧–೦೨ | ೨೩ | ೫೩ | ೨೪,೭೫,೦೫೦ | ೧,೦೨೧ | ೭,೨೨,೯೨೫ |
| ೨೦೦೨–೦೩ | ೨೨ | ೦೨ | ೯,೧೯,೬೬೦ | ೨೨೦ | ೫,೬೪,೪೦೦ |

## ಅಭಿವೃದ್ಧಿ ಸಾಧ್ಯತೆಗಳು

ಜಿಲ್ಲೆಯ ಜನತೆ ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿದ್ದು, ೨೦೦೧ರ ಜನಗಣತಿಯಂತೆ ೧೦,೧೪,೬೬೭ (ಶೇ.೪೦.೦೦) ಮುಖ್ಯ ಕೆಲಸಗಾರರು, ೨,೨೦,೩೬೧ (ಶೇ.೮.೭) ಸೀಮಾಂತ ಕೆಲಸಗಾರರು ಹಾಗೂ ೧೩,೦೧,೦೪೧ (ಶೇ.೫೧.೩) ಕೆಲಸಗಾರರಲ್ಲದವರು ಇದ್ದರು. ಮುಖ್ಯ ಕೆಲಸಗಾರರ ಪೈಕಿ ಶೇ. ೩೪.೯ ಮಂದಿ ವ್ಯವಸಾಯಗಾರರಾಗಿಯೂ, ಶೇ.೧೫.೯ ಮಂದಿ ಕೃಷಿ ಕಾರ್ಮಿಕರಾಗಿಯೂ, ಉಳಿದ ಶೇ.೪೯.೨ ಮಂದಿ ಜಾನುವಾರು, ಅರಣ್ಯ, ಮೀನುಗಾರಿಕೆ, ಬೇಟೆ, ಹಣ್ಣಿನ ತೋಟ ಹಾಗೂ ಸಂಬಂಧಿತ ಚಟುವಟಿಕೆಗಳಲ್ಲಿಯೂ, ಗಣಿಗಾರಿಕೆ, ಕೈಗಾರಿಕೆ, ನಿರ್ಮಾಣ, ವ್ಯಾಪಾರ–ವಾಣಿಜ್ಯ, ಸಾರಿಗೆ, ಸಂಗ್ರಹಣೆ, ಸಂಪರ್ಕ ಕ್ಷೇತ್ರ ಹಾಗೂ ಇತರೆ ಸೇವೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದರು.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ, ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೫೫.೮ ರಷ್ಟು ಜನರು ವ್ಯವಸಾಯ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿರುವುದು ಸ್ಪಷ್ಟವಾಗಿದೆ. ಹೀಗಾಗಿ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಅಗತ್ಯ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚು ಉದ್ಯೋಗ ಸೃಷ್ಟಿ, ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಹಾಗೂ ಕಡಿಮೆ ಪ್ರಮಾಣದ ಮೂಲಭೂತ ಸೌಕರ್ಯಗಳು ದೊರಕಿದರೂ ಸಹ ನಗರ ಪ್ರದೇಶದ ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳು ಬೆಳವಣಿಗೆ ಹೊಂದಬಹುದಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ೨೦೦೩ರ ಅಂತ್ಯಕ್ಕೆ ೭೪,೭೮೬ ನಿರುದ್ಯೋಗಿಗಳಿದ್ದು, ಇವರಲ್ಲಿ ೬೦,೧೨೨ ಮಂದಿ ಪುರುಷರು, ಹಾಗೂ ೧೪,೬೬೪ ಮಂದಿ ಮಹಿಳೆಯರೂ ಸೇರಿದ್ದರು. ನಿರುದ್ಯೋಗ ಸಮಸ್ಯೆಯ ಪರಿಹಾರಾರ್ಥವಾಗಿ ಉದ್ದಿಮೆಗಳ ಸೃಷ್ಟಿ ತನ್ಮೂಲಕ ಉದ್ಯೋಗಾವಕಾಶದ ಹೆಚ್ಚಳ, ಜಿಲ್ಲಾದಾಯ, ತಲಾದಾಯಗಳ ಹೆಚ್ಚಳಗಳ ಮೂಲಕ ಜನರ ಜೀವನ ಮಟ್ಟದ ಸುಧಾರಣೆಯಾಗುತ್ತದೆ.

ಜಿಲ್ಲೆಯಲ್ಲಿ ರಾಗಿ, ಭತ್ತ ಮುಸುಕಿನ ಜೋಳ, ನೆಲಗಡಲೆ, ಮಾವು, ಹುಣಸೆ, ಟೊಮ್ಯಾಟೋ, ಆಲೂಗಡ್ಡೆ, ರೇಷ್ಮೆ ಹಾಗೂ ವಿವಿಧ ತರಕಾರಿಗಳನ್ನು ಬೆಳೆಯಲಾಗುತ್ತಿದೆ. ಕೋಲಾರ ಜಿಲ್ಲೆಯು ಕೃಷಿ ಪ್ರಧಾನವಾಗಿರುವುದರಿಂದ ವ್ಯವಸಾಯಧಾರಿತ

ಕೈಗಾರಿಕೆಗಳ ಸ್ಥಾಪನೆಗೆ ವಿಪುಲ ಅವಕಾಶವಿದೆ. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. ೧೩.೬ ರಷ್ಟು ಮಾತ್ರ ಅರಣ್ಯ ಪ್ರದೇಶವಿದ್ದು, ಕೇವಲ ಉರುವಲು ಕಟ್ಟಿಗೆ ಹಾಗೂ ನೀಲಗಿರಿ ನೆಡುತೋಪುಗಳನ್ನು ಬಿಟ್ಟರೆ ಯಾವುದೇ ಬೆಲೆಬಾಳುವ ಮರಗಳು ಕಂಡುಬರುವುದಿಲ್ಲ. ೨೦೦೩ರ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ೧೪.೨೨ ಲಕ್ಷ ಜಾನುವಾರುಗಳಿದ್ದು, ಚರ್ಮೋದ್ಯಮದ ಸ್ಥಾಪನೆಗೆ ವಿಪುಲ ಅವಕಾಶವಿದೆ.

ಕೋಲಾರ ಜಿಲ್ಲೆಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ಒಟ್ಟು ೨೦ ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ. ೧೬,೫೫೩.೪೯ ಕೋಟಿ ಬಂಡವಾಳ ತೊಡಗಿಸಿ ೨೭,೭೮೫ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿರುವ ೧೧,೬೮೩ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು, ರೂ.೩೩,೫೪೫. ಲಕ್ಷ ಮೊತ್ತದ ಬಂಡವಾಳವನ್ನು ಹೊಂದಿದ್ದು, ೭೫,೩೮೯ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿವೆ.

ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗೆ ವಿಪುಲ ಅವಕಾಶವಿದ್ದು, ಅವುಗಳನ್ನು ಬೇಡಿಕೆ ಆಧಾರಿತ, ಸಂಪನ್ಮೂಲ ಆಧಾರಿತ ಹಾಗೂ ಕೌಶಲ್ಯ ಆಧಾರಿತ ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿವೆ.

೧. **ವ್ಯವಸಾಯಾಧಾರಿತ ಕೈಗಾರಿಕೆಗಳು :** ಅಕ್ಕಿ, ಅವಲಕ್ಕಿ, ಹಿಟ್ಟು ಬೀಸುವ, ಬೇಳೆ ಮಾಡುವ, ಕಡಲೆಕಾಯಿ ಸಿಪ್ಪೆ ಬೇರ್ಪಡಿಸುವ, ಎಣ್ಣೆ ಗಿರಣಿಗಳು, ಕಾಂಡಿಮೆಂಟ್ಸ್, ಸಿಹಿಪದಾರ್ಥಗಳ ತಯಾರಿಕೆ, ಸಾಂಬಾರ ಪದಾರ್ಥಗಳ ತಯಾರಿಕೆ, ಹಣ್ಣಿನರಸ, ತರಕಾರಿಗಳ ಸಂರಕ್ಷಣಾ ಕೇಂದ್ರ, ಹಾಲಿನ ಉತ್ಪನ್ನ ಮತ್ತು ಸಂಸ್ಕರಣೆ, ರೇಷ್ಮೆ ನೂಲುವುದು, ರೇಷ್ಮೆ ನೂಲುಹುರಿ ಮಾಡುವುದು, ರೇಷ್ಮೆ ನೇಯ್ಗೆ, ಸಿದ್ದ ಉಡುಪುಗಳ ತಯಾರಿಕೆ ಮುಂತಾದವು.

೨. **ಖನಿಜ ಆಧಾರಿತ ಕೈಗಾರಿಕೆಗಳು :** ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಜೇಡಿಮಣ್ಣು, ಕಟ್ಟಡ ನಿರ್ಮಾಣಕ್ಕೆ ಬಳಸುವ ಕಲ್ಲುಗಳ ಜೊತೆಗೆ ಬೆಣಚುಕಲ್ಲು, ಸಿಲಿಕಾನ್ ಹಾಗೂ ಚೈನಾಕ್ಲೇ ಸಮೃದ್ಧವಾಗಿ ದೊರಕುತ್ತವೆ. ಆದ್ದರಿಂದ ಖನಿಜಾಧಾರಿತ ಉದ್ದಿಮೆಗಳ ಸ್ಥಾಪನೆಗೆ ವಿಪುಲ ಅವಕಾಶವಿದೆ. ಅವುಗಳೆಂದರೆ ಇಟ್ಟಿಗೆ, ಜೆಲ್ಲಿ ಮಾಡುವುದು, ಹೆಂಚು, ಮೊಸಾಯಿಕ್ ಟೈಲ್ಸ್ ಮತ್ತು ಸಿಮೆಂಟ್ ಟೊಳ್ಳು ಇಟ್ಟಿಗೆ, (ಹಾಲೋಬ್ರಿಕ್ಸ್) ಮುಂತಾದವು.

೩. **ರಾಸಾಯನಿಕ ಆಧಾರಿತ ಕೈಗಾರಿಕೆಗಳು :**ಫಿನಾಯಿಲ್, ಡಿಟರ್ಜೆಂಟ್, ಲಿಕ್ವಿಡ್,ಕರ್ಪೂರ, ಮೇಣದಬತ್ತಿ, ಬ್ಲೀಚಿಂಗ್ ಪೌಡರ್ ಹಾಗೂ ಮೇಣ ಮುಂತಾದ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ.

೪. **ಬೇಡಿಕೆ ಆಧಾರಿತ ಕೈಗಾರಿಕೆಗಳು :** ಚರ್ಮದ, ಪ್ಲಾಸ್ಟಿಕ್, ರಬ್ಬರ್ ಉತ್ಪನ್ನಗಳು, ಆಫ್ ಸೆಟ್ ಪ್ರಿಂಟಿಂಗ್, ಮರದ ಸಾಮಾನು ಮತ್ತು ಸಂಬಂಧಿಸಿದ ಸಾಮಗ್ರಿಗಳು, ಜನರಲ್ ಇಂಜಿನಿಯರಿಂಗ್, ಷೀಟ್‌ಮೆಟಲ್ ಹಾಗೂ ಪ್ಯಾಬ್ರಿಕೇಶನ್, ಸಾರಿಗೆಯ ಉಪಕರಣಗಳು, ಗೃಹೋಪಯೋಗಿ ಪಾತ್ರೆಗಳು, ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳು, ಶೈತ್ಯಾಗಾರ ಮುಂತಾದವು.

೫. **ಇತರ ಸೇವಾ ಕೈಗಾರಿಕೆಗಳು :** ಡಾಟಾ ಪ್ರೊಸೆಸಿಂಗ್ ಮತ್ತು ಡಿಟಿಪಿ ಕೇಂದ್ರಗಳು, ಆಟೋ ಎಲೆಕ್ಟ್ರಿಕಲ್ ವರ್ಕ್ಸ್, ಎಲೆಕ್ಟ್ರಿಕಲ್ ಅಪ್ಲಾಯನ್ಸ್, ದುರಸ್ತಿ ಮತ್ತು ಸೇವೆಗಳಾದ ಮೋಟಾರ್ ರಿವೈಂಡಿಂಗ್, ಆಟೋ ಮೊಬೈಲ್, ಸರ್ವಿಸ್ ಸ್ಟೇಷನ್, ಟಿ.ವಿ ಮತ್ತು ಕಂಪ್ಯೂಟರ್ ರಿಪೇರಿ ಮುಂತಾದವು.

**ಲಾಭದಾಯಕ ಉದ್ದಿಮೆಗಳ ಅಭಿವೃದ್ಧಿಗಾಗಿ ಗುರುತಿಸಲ್ಪಟ್ಟಿರುವ ಸ್ಥಳಗಳು**

| | |
|---|---|
| ಬಾಗೇಪಲ್ಲಿ ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಕಡಲೆಕಾಯಿ ಸಿಪ್ಪೆ ತೆಗೆಯುವುದು, ಎಣ್ಣೆ ಗಿರಣಿ, ಕಾಂಡಿಮೆಂಟ್ಸ್, ಸಿಹಿಪದಾರ್ಥಗಳ ತಯಾರಿಕೆ, ಸಾಂಬಾರು ಪದಾರ್ಥಗಳ ತಯಾರಿಕೆ, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ, ರೆಡಿಮೇಡ್ ಗಾರ್ಮೆಂಟ್ಸ್ , ಮೊಸಾಯಿಕ್ ಟೈಲ್ಸ್, ಫಿನಾಯಿಲ್, |

ಕರ್ಪೂರ, ಮೇಣದಬತ್ತಿ, ಬ್ಲೀಚಿಂಗ್ ಪೌಡರ್, ಚರ್ಮದ ಉತ್ಪನ್ನಗಳು, ಗೃಹೋಪಯೋಗಿ ಪಾತ್ರೆಗಳು, ರೇಡಿಯೋ ಹಾಗೂ ಟಿ.ವಿ. ರಿಪೇರಿ, ಸಾರಿಗೆ ಉಪಕರಣಗಳು, ಮುಂತಾದವು.

| | |
|---|---|
| ಬಂಗಾರಪೇಟೆ ತಾ | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಬೇಳೆ ಮಾಡುವ ಗಿರಣಿ, ಕಾಂಡಿಮೆಂಟ್ಸ್, ಸಾಂಬಾರು ಪದಾರ್ಥಗಳ ತಯಾರಿಕೆ, ತರಕಾರಿ ಸಂಸ್ಕರಣಾ ಘಟಕ, ರೆಡಿಮೇಡ್ ಗಾರ್ಮೆಂಟ್ಸ್ , ಮೌಲ್ಡಿಂಗ್ ಇಟ್ಟಿಗೆ, ಚರ್ಮದ ಉತ್ಪನ್ನಗಳು, ಪ್ಲಾಸ್ಟಿಕ್ ವಸ್ತುಗಳು, ರಬ್ಬರ್ ಉತ್ಪನ್ನಗಳು, ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಉಪಕರಣ ತಯಾರಿಸುವ ಉದ್ದಿಮೆಗಳು, ಖನಿಜಾಧಾರಿತ ಕೈಗಾರಿಕೆಗಳು, |
| ಚಿಕ್ಕಬಳ್ಳಾಪುರ ತಾ. | ಫ್ಲೋರ್ ಮಿಲ್, ಹಣ್ಣಿನ ರಸ, ರೇಷ್ಮೆ ನೂಲುವುದು, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ, ರೆಡಿಮೇಡ್ ಗಾರ್ಮೆಂಟ್ಸ್, ಫಿನಾಯಿಲ್, ಡಿಟರ್ಜೆಂಟ್ ಲಿಕ್ವಿಡ್, ಕರ್ಪೂರ, ಮೇಣ, ಮೇಣದಬತ್ತಿ, ಟಿ.ವಿ. ಹಾಗೂ ಕಂಪ್ಯೂಟರ್ ರಿಪೇರಿ, ಮೋಟಾರ್ ರಿವೈಂಡಿಂಗ್ ಮುಂತಾದವು. |
| ಚಿಂತಾಮಣಿ ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಬೇಳೆ ಮಾಡುವ ಗಿರಣಿ ಕಡಲೆಕಾಯಿ ಸಿಪ್ಪೆ ತೆಗೆಯುವುದು, ಎಣ್ಣೆ ಗಿರಣಿ, ಕಾಂಡಿಮೆಂಟ್ಸ್ , ಸಿಹಿಪದಾರ್ಥಗಳ ತಯಾರಿಕೆ, ಮಸಾಲೆ ಪೌಡರ್ ತಯಾರಿಕೆ, ಹಣ್ಣಿನ ರಸ, ತರಕಾರಿ ಸಂಸ್ಕರಣೆ, ರೇಷ್ಮೆ ನೂಲುವುದು, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ, ರೆಡಿಮೇಡ್ ಗಾರ್ಮೆಂಟ್ಸ್, ಫಿನಾಯಿಲ್, ಕರ್ಪೂರ, ಮೇಣದಬತ್ತಿ, ಬ್ಲೀಚಿಂಗ್ ಪೌಡರ್ ಮುಂತಾದವು, ಚರ್ಮದ ಉತ್ಪನ್ನಗಳು, ಪ್ಲಾಸ್ಟಿಕ್ ಉತ್ಪನ್ನಗಳು, ರಬ್ಬರ್ ಉತ್ಪನ್ನಗಳು, ಜನರಲ್ ಇಂಜಿನಿಯರಿಂಗ್ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಉಪಕರಣಗಳು, ಮುಂತಾದವು. |
| ಗೌರಿಬಿದನೂರು ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಬೇಳೆ ಮಾಡುವ ಗಿರಣಿ, ಕಡಲೆಕಾಯಿ ಸಿಪ್ಪೆ ತೆಗೆಯುವುದು, ಎಣ್ಣೆ ಗಿರಣಿ, ಹಾಲಿನ ಉತ್ಪನ್ನಗಳು, ಫಿನಾಯಿಲ್, ಕರ್ಪೂರ, ಮೇಣ, ಮೇಣದಬತ್ತಿ ಸಾರಿಗೆ ಉಪಕರಣಗಳು, ಗೃಹೋಪಯೋಗಿ ಪಾತ್ರೆಗಳು, ಮುಂತಾದವು. |
| ಗುಡಿಬಂಡೆ ತಾ. | ರೈಸ್ ಮಿಲ್, ಫ್ಲೋರ್ ಮಿಲ್ಲು, ಕಡಲೆಕಾಯಿ ಸಿಪ್ಪೆ ತೆಗೆಯುವುದು, ಜೆಲ್ಲಿಕಲ್ಲು ಪುಡಿ ಮಾಡುವುದು, ಕರ್ಪೂರ, ಮೇಣ, ಮೇಣದಬತ್ತಿ, ಮುಂತಾದವು. |
| ಕೋಲಾರ ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಸಿಹಿಪದಾರ್ಥಗಳ ತಯಾರಿಕೆ, ಸಾಂಬಾರ್ ಪದಾರ್ಥಗಳು, ಹಣ್ಣಿನ ರಸ, ತರಕಾರಿ ಸಂಸ್ಕರಣೆ, ಹಾಲಿನ ಉತ್ಪಾದನೆ ಹಾಗೂ ಸಂಸ್ಕರಣೆ, ರೇಷ್ಮೆ ನೂಲುವುದು, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ, ಇಟ್ಟಿಗೆ, ಜೆಲ್ಲಿಕಲ್ಲು ಪುಡಿ ಮಾಡುವುದು, ಫಿನಾಯಿಲ್, ಕರ್ಪೂರ, ಮೇಣ, ಮೇಣದಬತ್ತಿ, ಬ್ಲೀಚಿಂಗ್ ಪೌಡರ್ ಮುಂತಾದವು, ಚರ್ಮದ ಉತ್ಪನ್ನಗಳು, ಮರದ ಉತ್ಪನ್ನಗಳು, ಜನರಲ್ ಇಂಜಿನಿಯರಿಂಗ್ ಉಪಕರಣಗಳು, ಷೀಟ್ ಮೆಟಲ್ ಅಂಡ್ ಫ್ಯಾಬ್ರಿಕೇಷನ್ ಸಾರಿಗೆ ಉಪಕರಣಗಳು, ಎಲೆಕ್ಟ್ರಿಕ್ ಹಾಗೂ ಎಲೆಕ್ಟ್ರಾನಿಕ್ಸ್ ಉಪಕರಣಗಳು, ಆಟೋ ಎಲೆಕ್ಟ್ರಿಕಲ್ ವರ್ಕ್ಸ್, ಎಲೆಕ್ಟ್ರಿಕಲ್ ಉಪಕರಣಗಳು ರಿಪೇರಿ ಹಾಗೂ ಸರ್ವಿಸ್ ಮುಂತಾದವು. |
| ಮಾಲೂರು ತಾ. | ಹಣ್ಣಿನ ರಸ, ತರಕಾರಿ ಸಂಸ್ಕರಣೆ, ಹಾಲಿನ ಉತ್ಪನ್ನ ಹಾಗೂ ಸಂಸ್ಕರಣೆ, ಜೆಲ್ಲಿಕಲ್ಲು ಪುಡಿ ಮಾಡುವುದು, ಇಟ್ಟಿಗೆ, ಮೊಸಾಯಿಕ್ ಟೈಲ್ಸ್ ಮತ್ತು ಹಾಲೋಬ್ರಿಕ್ಸ್ ಮುಂತಾದವು. |
| ಮುಳಬಾಗಿಲು ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಹಣ್ಣಿನ ರಸ, ತರಕಾರಿ ಸಂಸ್ಕರಣೆ, ಇಟ್ಟಿಗೆ, ಜೆಲ್ಲಿಕಲ್ಲು ಪುಡಿ ಮಾಡುವುದು, ಮುಂತಾದವು. |
| ಶಿಡ್ಲಘಟ್ಟ ತಾ. | ರೇಷ್ಮೆ ನೂಲುವುದು, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ ಮುಂತಾದವು. |

| | |
|---|---|
| ಶ್ರೀನಿವಾಸಪುರ ತಾ. | ರೈಸ್ ಮಿಲ್, ಅವಲಕ್ಕಿ ಮಿಲ್ಲು, ಕಡಲೆಕಾಯಿ ಸಿಪ್ಪೆ ತೆಗೆಯುವುದು, ಹಣ್ಣಿನ ರಸ, ತರಕಾರಿ ಸಂಸ್ಕರಣೆ, ರೇಷ್ಮೆ ನೂಲುವುದು, ರೇಷ್ಮೆ ನೂಲು ಹುರಿ ಮಾಡುವುದು, ರೇಷ್ಮೆ ನೇಯ್ಗೆ, ರೆಡಿಮೇಡ್ ಗಾರ್ಮೆಂಟ್ಸ್, ಫಿನಾಯಿಲ್, ಕರ್ಪೂರ, ಮೇಣದಬತ್ತಿ ಮರದ ಉಪಕರಣಗಳು, ಸಾರಿಗೆ ಉಪಕರಣಗಳು, ಮುಂತಾದವು. |

## ಕೋಲಾರ ಜಿಲ್ಲೆಯ ಸಾಮಾಜಿಕ–ಆರ್ಥಿಕ ಸಮೀಕ್ಷೆ

| | ವಿಷಯ | ಘಟಕ | ೧೯೬೧ | ೧೯೭೧ | ೧೯೮೧ | ೧೯೯೧* | ೨೦೦೧* |
|---|---|---|---|---|---|---|---|
| ೧ | ಒಟ್ಟು ದಶಕದ ಜನಸಂಖ್ಯೆಯಲ್ಲಿ ಬೆಳವಣಿಗೆ | ಶೇಕಡ | – | +೧೭.೫೬ | +೨೫.೬೪ | +೧೬.೩೪ | +೧೩.೮೩ |
| ೨ | ಒಟ್ಟು ದಶಕದ ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆ | ಶೇಕಡ | – | ೨೦.೭೩ | ೨೨.೭೮ | ೧೫.೦೪ | ೧೧.೭೦ |
| ೩ | ಒಟ್ಟು ದಶಕದ ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆಯ ಬೆಳವಣಿಗೆ | ಶೇಕಡ | – | ೬.೭೭ | ೩೬.೬೪ | ೨೦.೮೪ | ೨೦.೮೨ |
| ೪ | ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆ | ಶೇಕಡ | ೭೭.೩ | ೭೯.೩ | ೭೭.೫ | ೭೬.೭ | ೭೫.೩೩ |
| ೫ | ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ | ಶೇಕಡ | ೨೨.೭ | ೨೦.೭ | ೨೨.೫ | ೨೩.೩ | ೨೪.೬೬ |
| ೬ | ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ | ಶೇಕಡ | ೨೪.೭೩ | ೨೩.೯೪ | ೨೪.೭೨ | ೨೫.೭೩ | ೨೬.೪೯ |
| ೭ | ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ | ಶೇಕಡ | ೦.೦೩ | ೦.೧೩ | ೫.೯೭ | ೬.೯೦ | ೮.೧೧ |
| ೮ | ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ಕೆಲಸಗಾರರು | ಶೇಕಡ | ೪೭.೧೩ | ೩೪.೯೧ | ೩೯.೪೯ | ೪೩.೪೨ | ೪೮.೮೫ |
| ೯ | ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಕೆಲಸಗಾರರು | ಶೇಕಡ | ೫೧.೮೧ | ೩೭.೧೫ | ೪೩.೪೪ | ೪೭.೮೮ | ೫೩.೮೦ |
| ೧೦ | ಒಟ್ಟು ಜನಸಂಖ್ಯೆಯಲ್ಲಿ ನಗರ ಕೆಲಸಗಾರರು | ಶೇಕಡ | ೩೧.೨೩ | ೨೬.೩೦ | ೨೫.೮೫ | ೨೮.೮೨ | ೩೩.೭೦ |
| ೧೧ | ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿರುವವರು | ಶೇಕಡ | ೭೮.೭೦ | ೭೬.೦೨ | ೭೫.೫೨ | ೭೨.೭೩ | ೬೪.೨೫ |
| ೧೨ | ಜನಸಾಂದ್ರತೆ ಚ.ಕಿ.ಮೀ.ಗೆ | | ೧೫೬ | ೧೯೪ | ೨೩೨ | ೨೭೦ | ೩೦೭ |
| | ಗ್ರಾಮೀಣ | ಶೇಕಡ | ೧೨೩ | ೧೯೮ | ೧೮೨ | ೨೧೦ | – |
| | ನಗರ | ಶೇಕಡ | ೨೫೬೮ | ೩೧೭೫ | ೪೧೩೧ | ೪೫೬೭ | – |
| ೧೩ | ಲೈಂಗಿಕ ಪ್ರಮಾಣ (೧೦೦೦ ಗಂಡಸರಿಗೆ) | | ೯೬೮ | ೯೬೧ | ೯೭೧ | ೯೬೫ | ೯೭೨ |

ಮುಂದುವರಿದಿದೆ.............

| ವಿಷಯ | ಘಟಕ | ೧೯೬೧ | ೧೯೭೧ | ೧೯೮೧ | ೧೯೯೧* | ೨೦೦೧* |
|---|---|---|---|---|---|---|
| ೧೪. ಸಾಕ್ಷರತೆ ಪ್ರಮಾಣ | | | | | | |
| ಪುರುಷರು | ಶೇಕಡ | ೩೦.೯೩ | ೩೬.೫೭ | ೪೪.೨೧ | ೬೨.೬೯ | ೭೩.೧೪ |
| ಸ್ತ್ರೀಯರು | ಶೇಕಡ | ೧೧.೩೩ | ೧೭.೧೫ | ೨೨.೬೧ | ೩೭.೭೫ | ೫೨.೮೧ |
| **ಒಟ್ಟು** | **ಶೇಕಡ** | **೨೧.೨೯** | **೨೭.೦೬** | **೩೩.೫೭** | **೫೦.೪೫** | **೬೩.೧೪** |
| ೧೬. ಸಾಕ್ಷರತೆ (ಗ್ರಾಮೀಣ) | | | | | | |
| ಪುರುಷರು | ಶೇಕಡ | ೨೪.೯೩ | ೩೦.೧೫ | ೩೭.೯೫ | ೫೬.೭೯ | ೬೯.೨೨ |
| ಸ್ತ್ರೀಯರು | ಶೇಕಡ | ೬.೪೧ | ೧೦.೫೯ | ೧೪.೮೬ | ೨೯.೦೬ | ೪೫.೯೩ |
| **ಒಟ್ಟು** | **ಶೇಕಡ** | **೧೫.೮೧** | **೨೦.೫೩** | **೨೬.೫೪** | **೪೩.೧೬** | **೫೭.೭೫** |
| ೧೭. ಸಾಕ್ಷರತೆ (ನಗರ) | | | | | | |
| ಪುರುಷರು | ಶೇಕಡ | ೫೧.೨೩ | ೬೦.೮೭ | ೬೫.೫೭ | ೮೧.೬೩ | ೮೪.೯೬ |
| ಸ್ತ್ರೀಯರು | ಶೇಕಡ | ೨೮.೧೬ | ೪೨.೮೩ | ೪೯.೭೨ | ೬೬.೧೫ | ೭೩.೫೭ |
| **ಒಟ್ಟು** | **ಶೇಕಡ** | **೩೯.೯೩** | **೫೨.೧೫** | **೫೭.೮೪** | **೭೪.೦೯** | **೭೯.೩೬** |

*೧೯೯೧ ಹಾಗೂ *೨೦೦೧ರಲ್ಲಿ ಸಾಕ್ಷರತೆಗೆ (೦–೬)ರ ವರ್ಗದ ಗುಂಪನ್ನು ಸೇರಿಸಿಲ್ಲ.

| ವ್ಯವಸಾಯ | ಘಟಕ | ೧೯೭೦–೭೧ | ೧೯೮೦–೮೧ | ೧೯೯೦–೯೧ | ೧೯೯೫–೯೬ | ೨೦೦೦–೦೧ |
|---|---|---|---|---|---|---|
| ೧. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಟ್ಟು ಅರಣ್ಯ ಪ್ರದೇಶ | ಶೇಕಡ | ೯.೪೩ | ೯.೦೨ | ೯.೦೨ | ೯.೦೨ | ೯.೦೨ |
| ೨. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ವ್ಯವಸಾಯೇತರ ಉದ್ದೇಶಕ್ಕೆ ಬಳಸಲಾದ ಪ್ರದೇಶ | ಶೇಕಡ | ೮.೩೩ | ೯.೨೩ | ೯.೪೬ | ೯.೪೮ | ೯.೪೮ |
| ೩. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾಗುವಳಿಗೆ ಲಭ್ಯವಿಲ್ಲದ ಬಂಜರು ಭೂಮಿ | ಶೇಕಡ | ೬.೩೫ | ೮.೨೨ | ೮.೧೧ | ೮.೧೦ | ೮.೧೦ |
| ೪. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಖಾಯಂ ಗೋಮಾಳ | ಶೇಕಡ | ೨೫.೮೨ | ೧೮.೯೭ | ೧೫.೧೦ | ೧೪.೪೩ | ೧೨.೬೯ |
| ೫. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ವೃಕ್ಷ ಮತ್ತು ತೋಪು ಮುಂತಾದವು | ಶೇಕಡ | ೧.೬೧ | ೧.೭೩ | ೧.೮೭ | ೧.೭೬ | ೧.೭೩ |
| ೬. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ | ಶೇಕಡ | ೧.೯೧ | ೨.೨೩ | ೧.೬೯ | ೧.೬೧ | ೧.೬೧ |
| ೭. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಇತರೆ ಬೀಳು ಭೂಮಿ | ಶೇಕಡ | ೨.೨೬ | ೧.೯೭ | ೧.೬೪ | ೨.೯೭ | ೧.೨೧ |

ಮುಂದುವರಿದಿದೆ.............

| ವ್ಯವಸಾಯ | ಘಟಕ | ೧೯೭೦-೭೧ | ೧೯೮೦-೮೧ | ೧೯೯೦-೯೧ | ೧೯೯೫-೯೬ | ೨೦೦೦-೦೧ |
|---|---|---|---|---|---|---|
| ೮. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಚಾಲ್ತಿ ಬೀಳು ಭೂಮಿ | ಶೇಕಡ | ೫.೭೦ | ೯.೩೨ | ೫.೨೭ | ೬.೬೭ | ೯.೬೧ |
| ೯. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ | ಶೇಕಡ | ೩೮.೫೮ | ೩೯.೩೨ | ೪೭.೮೩ | ೪೫.೯೬ | ೪೬.೫೨ |
| ೧೦. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶ | ಶೇಕಡ | ೮.೩೩ | ೦.೬೧ | ೫.೧೪ | ೪.೨೪ | ೯.೩೩ |
| ೧೧. ಒಟ್ಟು ಬಿತ್ತನೆ ಪ್ರದೇಶದಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ | | ೧೦೮.೩೩ | ೧೦೦.೬೧ | ೧೦೫.೧೪ | ೧೦೪.೨೪ | ೧೦೯.೩೩ |
| ೧೨ ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ | ಶೇಕಡ | ೨೪.೯ | ೧೮.೬ | ೨೩.೯ | ೨೨.೪೨ | ೨೨.೦೯ |
| ೧೩. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿಯಾದ ಪ್ರದೇಶ | ಶೇಕಡ | ೨೭.೩೦ | ೧೯.೧೬ | ೨೭.೬೨ | ೨೫.೫೭ | ೨೩.೩೩ |
| ೧೪. ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಕೆರೆಗಳಿಂದ ನೀರಾವರಿಯಾದ ಪ್ರದೇಶ | ಶೇಕಡ | ೫೫.೦೦ | ೨೯.೦೬ | ೨೩.೬೩ | ೧೩.೧೧ | ೧೫.೦೩ |
| ೧೫. ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಬಾವಿಗಳಿಂದ ನೀರಾವರಿಯಾದ ಪ್ರದೇಶ | ಶೇಕಡ | ೪೬.೦೦ | ೫೭.೦೦ | ೭೨.೦ | ೮೬.೮೯ | ೮೪.೯೭ |
| ೧೬. ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಇತರೆ ಮೂಲಗಳಿಂದಾದ ನೀರಾವರಿ ಪ್ರದೇಶ | ಶೇಕಡ | ೨.೦೦ | – | – | – | – |
| ೧೭. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಭತ್ತದ ಬಿತ್ತನೆ ಪ್ರದೇಶ | ಶೇಕಡ | ೧೦.೪೯ | ೬.೩೪ | ೭.೯೩ | ೪.೮೫ | ೨.೮೧ |
| ೧೮. ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ರಾಗಿ ಬಿತ್ತನೆ ಪ್ರದೇಶ | ಶೇಕಡ | ೩೭.೨೦ | ೩೭.೪೨ | ೩೦.೦೦ | ೨೭.೬೬ | ೩೩.೨೯ |
| ೧೯. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಜೋಳದ ಬಿತ್ತನೆ ಪ್ರದೇಶ | ಶೇಕಡ | ೧.೬೫ | ೧.೬೮ | ೧.೬೪ | – | – |
| ೨೦. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಗೋಧಿ ಬಿತ್ತನೆ ಪ್ರದೇಶ | ಶೇಕಡ | ೦.೦೮ | | ೦.೦೨ | ೦.೦೧ | – |

ಮುಂದುವರಿದಿದೆ.............

| ವ್ಯವಸಾಯ | ಘಟಕ | ೧೯೭೦-೭೧ | ೧೯೮೦-೮೧ | ೧೯೯೦-೯೧ | ೧೯೯೫-೯೬ | ೨೦೦೦-೦೧ |
|---|---|---|---|---|---|---|
| ೨೧. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಸಜ್ಜೆ ಬಿತ್ತನೆ ಪ್ರದೇಶ | ಶೇಕಡ | ೩.೧೬ | ೧.೪೬ | ೦.೧೪ | ೦.೦೬ | ೦.೦೧ |
| ೨೨. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಇತರ ಏಕದಳ ಧಾನ್ಯಗಳು | ಶೇಕಡ | ೯.೭೪ | ೫.೫೭ | ೩.೨೪ | ೩.೧೯ | ೪.೧೫ |
| ೨೩. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ಏಕದಳ ಮತ್ತು ತೃಣ ಧಾನ್ಯಗಳು | ಶೇಕಡ | ೬೨.೧೯ | ೫೨.೪೯ | ೪೨.೯೮ | ೩೫.೭೭ | ೪೫.೩೭ |
| ೨೪. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ದ್ವಿದಳ ಧಾನ್ಯಗಳ ಬಿತ್ತನೆ ಪ್ರದೇಶ | ಶೇಕಡ | ೯.೮೪ | ೧೮.೦೮ | ೭.೪೬ | ೧೦.೩೮ | ೮.೩೦ |
| ೨೫. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಹತ್ತಿಯ ಬಿತ್ತನೆ ಪ್ರದೇಶ | ಶೇಕಡ | – | ೦.೦೪ | ೦.೦೧ | ೦.೦೨ | – |
| ೨೬. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಕಬ್ಬು ಬಿತ್ತನೆ ಪ್ರದೇಶ | ಶೇಕಡ | ೧.೯೯ | ೧.೨೧ | ೧.೨೬ | ೧.೪೦ | ೦.೬೪ |
| ೨೭. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಎಣ್ಣೆಕಾಳುಗಳ ಬಿತ್ತನೆ ಪ್ರದೇಶ | ಶೇಕಡ | ೧೮.೫೬ | ೧೫.೩೧ | ೨೩.೨೮ | ೨೫.೮೭ | ೧೫.೦೬ |
| ೨೮. ಸರಾಸರಿ ಅಕ್ಕಿಯ ಉತ್ಪಾದನೆ | ಕೆ.ಜಿ.ಗಳಲ್ಲಿ ಹೆಕ್ಟೇರಿಗೆ | ೧೫೩೧ | ೯೬೫ | ೧೭೧೮ | ೨೬೪ | ೨೭೯ |
| ೨೯. ಸರಾಸರಿ ಜೋಳದ ಉತ್ಪತ್ತಿ | ,, | ೧೧೨೮ | ೫೫೩ | ೫೭೬ | – | – |
| ೩೦. ಸರಾಸರಿ ರಾಗಿಯ ಉತ್ಪತ್ತಿ | ,, | ೮೯೭ | ೩೭೦ | ೧೫೪೮ | ೨೦೪೮ | ೧೯೪೨ |
| ೩೧. ಸರಾಸರಿ ಸಜ್ಜೆಯ ಉತ್ಪತ್ತಿ | ,, | ೫೫೭ | ೨೫೮ | ೪೮೫ | ೫೭೯ | ೪೯೦ |
| ೩೨. ಸರಾಸರಿ ಗೋಧಿಯ ಉತ್ಪತ್ತಿ | ,, | ೨೨೨೦ | ೪೧೨ | ೧೧೯೫ | ೧೧೬೩ | – |
| ೩೩. ಸರಾಸರಿ ಕಡಲೆ ಉತ್ಪತ್ತಿ | ,, | ೪೯೧ | – | ೧೮೨ | ೫೨೨ | – |
| ೩೪. ಸರಾಸರಿ ತೊಗರಿ ಉತ್ಪತ್ತಿ | ,, | ೭೫೦ | ೫೦೬ | ೭೦೫ | ೪೩೭ | ೮೯೩ |
| ೩೫. ಸರಾಸರಿ ಸೂರ್ಯಕಾಂತಿ ಉತ್ಪತ್ತಿ | ,, | – | ೮೦೪ | ೫೯೯ | ೬೪೫ | ೭೪೧ |
| ೩೬. ಸರಾಸರಿ ಹತ್ತಿಯ ಉತ್ಪತ್ತಿ | ,, | – | ೧೫೨ | ೨೪೮ | ೪೮೪ | – |
| ೩೭. ಸರಾಸರಿ ಕಬ್ಬಿನ ಉತ್ಪತ್ತಿ | ಟನ್ನುಗಳಲ್ಲಿ ಹೆಕ್ಟೇರಿಗೆ | ೮೭ | ೯೧ | ೯೮ | ೮೦ | ೮೨ |
| ೩೮. ಸರಾಸರಿ ಶೇಂಗಾ ಉತ್ಪತ್ತಿ | ಕೆ.ಜಿ.ಗಳಲ್ಲಿ ಹೆಕ್ಟೇರಿಗೆ | ೭೫೫ | ೪೪೭ | ೧೦೫೧ | ೧೯೬೦ | ೧೯೯೧ |

ಮುಂದುವರಿದಿದೆ.............

| ವ್ಯವಸಾಯ | ಘಟಕ | ೧೯೭೦–೭೧ | ೧೯೮೦–೮೧ | ೧೯೯೦–೯೧ | ೧೯೯೫–೯೬ | ೨೦೦೦–೦೧ |
|---|---|---|---|---|---|---|
| ೩೯. ವ್ಯವಸಾಯಕ್ಕೆ ಲಭ್ಯವಿರುವ ತಲಾವಾರು ಪ್ರದೇಶ | ಹೆಕ್ಟೇರುಗಳಲ್ಲಿ | ೦.೨೬ | ೦.೨೧ | ೦.೨೦ | – | ೦.೧೯ |
| ೪೦. ತಲಾ ಆಹಾರಧಾನ್ಯಗಳ ಉತ್ಪತ್ತಿ | ಕೆ.ಜಿ.ಗಳಲ್ಲಿ | ೧೫೯.೭೦ | ೫೨.೯೧ | ೧೨೦.೮೫ | ೧೨೫.೯೧ | ೧೪೩.೧೬ |
| ೪೧. ಸರಾಸರಿ ಭೂ ಹಿಡುವಳಿದಾರರು | ಹೆಕ್ಟೇರುಗಳಲ್ಲಿ | ೧.೮೮ | ೧.೭೨ | ೧.೪೬ | ೧.೩೬ | ೧.೨೧ |
| ೪೨. ಸರಾಸರಿ ಭೂ ಹಿಡುವಳಿದಾರರು (ಪರಿಶಿಷ್ಟ ಜಾತಿ) | ,, | – | ೧.೨೫ | ೧.೧೦ | ೧.೦೫ | ೦.೯೫ |
| ೪೩. ಸರಾಸರಿ ಭೂ ಹಿಡುವಳಿದಾರರು (ಪರಿಶಿಷ್ಟ ಪಂಗಡ) | ಹೆಕ್ಟೇರುಗಳಲ್ಲಿ | – | ೧.೫೨ | ೧.೩೫ | ೧.೨೦ | ೧.೧೯ |
| ೪೪. ಸರಾಸರಿ ಭೂ ಹಿಡುವಳಿದಾರರು (ಇತರರು) | ಹೆಕ್ಟೇರುಗಳಲ್ಲಿ | – | ೧.೮೩ | ೧.೭೫ | ೧.೪೭ | ೧.೨೯ |
| ೪೫. ಸರಾಸರಿ ಅತಿ ಸಣ್ಣ ಭೂ ಹಿಡುವಳಿದಾರರು (ಎಲ್ಲಾ ಜಾತಿಯವರು) | ಹೆಕ್ಟೇರುಗಳಲ್ಲಿ | – | ೦.೪೯ | ೦.೪೯ | ೦.೪೮ | ೦.೪೬ |
| ೪೬. ಸರಾಸರಿ ಸಣ್ಣ ಭೂ ಹಿಡುವಳಿಗಳು (ಎಲ್ಲಾ ಜಾತಿಯವರು) | ಹೆಕ್ಟೇರುಗಳಲ್ಲಿ | – | ೧.೪೩ | ೧.೪೦ | ೧.೪೧ | ೧.೪೦ |
| ೪೭. ಸರಾಸರಿ ಅರೆ ಮಧ್ಯಮ ಭೂ ಹಿಡುವಳಿದಾರರು (ಎಲ್ಲಾ ಜಾತಿಯವರು) | ಹೆಕ್ಟೇರುಗಳಲ್ಲಿ | – | ೨.೭೬ | ೨.೭೧ | ೨.೭೧ | ೨.೭೦ |
| ೪೮. ಸರಾಸರಿ ಮಧ್ಯಮ ಭೂ ಹಿಡುವಳಿದಾರರು (ಎಲ್ಲಾ ಜಾತಿಯವರು) | ಹೆಕ್ಟೇರುಗಳಲ್ಲಿ | – | ೫.೭೭ | ೫.೬೯ | ೫.೬೪ | ೫.೬೪ |
| ೪೯. ಸರಾಸರಿ ದೊಡ್ಡ ಭೂ ಹಿಡುವಳಿದಾರರು (ಎಲ್ಲಾ ಜಾತಿಯವರು) | ಹೆಕ್ಟೇರುಗಳಲ್ಲಿ | – | ೧೫.೧೬ | ೧೪.೮೧ | ೧೪.೭೨ | ೧೫.೨೬ |

ಆಧಾರ: ಸಾಮಾಜಿಕ ಮತ್ತು ಆರ್ಥಿಕ ಸೂಚಿ–೨೦೦೨